ಕೃಷಿ ವಿಸ್ತರಣ ಶಿಕ್ಷಣ ಪದ್ಧತಿಗಳು

ಶ್ರೀ॥ ವಿ ವೀರಭದ್ರಯ್ಯ
ಶ್ರೀ॥ ಸಿ ಎಂ ದುಧನಿ
ಡಾ॥ ಎಂ ಕೆ ಸೇತುರಾವ್
ಪ್ರೊ॥ ವಿ ಸಿ ಹಿತ್ತಲಮನಿ

1975

ಕನ್ನಡ ಅಧ್ಯಯನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-24

ಪ್ರಕಟಣೆ : 23

ಕೃಷಿ ವಿಸ್ತರಣ ಶಿಕ್ಷಣ ಪದ್ಧತಿಗಳು

ಶ್ರೀ । ವಿ. ವೀರಭದ್ರಯ್ಯ
ಶ್ರೀ । ಸಿ. ಎಂ. ದುಧನಿ
ಡಾ । ಎಂ. ಕೆ. ಸೇತುರಾವ್
ಪ್ರೊ । ವಿ. ಸಿ. ಹಿತ್ತಲಮನಿ

1975

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು - 560024.

KRISHI VISTARANA SHIKSHANA PADDHATIGALU

BY

Sri. V. VEERABHADRAIAH
Shri. C. M. DUDHANI
Dr. M. K. SETHURAO
Prof. V. C. HITTALMANI

Published by the University of Agricultural Sciences, under the Centrally Sponsored Scheme of Production of Books and Literature in Regional Languages at the University Level, of Government of India in the Ministry of Education and Social Welfare.

Pages: Demi Octavo xx + 144 pp. Price: Ordinary Rs. 9-00
Calico Rs. 13-00

First Edition : 1975
Copies : 1000

Publishers : Secretary, Communication Council,
University of Agricultural Sciences,
Bangalore - 560024.

ಮೊದಲ ಮುದ್ರಣ - 1975
ಪ್ರತಿಗಳು: 1000
ಬೆಲೆ : ಸಾದಾಪ್ರತಿ ರೂ. 9–00
ಕ್ಯಾಲಿಕೊ ಪ್ರತಿ ರೂ. 13–00

ಪ್ರಕಾಶಕರು : ಕಾರ್ಯದರ್ಶಿಗಳು, ಸಂವಹನ ಸಮಿತಿ,
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು - 560024.

ಮುದ್ರಕರು : ಡಬ್ಲ್ಯು. ಕ್ಯು. ಜಡ್ಜ್ ಪ್ರೆಸ್, ಬೆಂಗಳೂರು-560025.

ಮುನ್ನುಡಿ.

ಭಾರತದಲ್ಲಿ ಬೇಸಾಯ ಇದುವರೆವಿಗೂ ರೈತನಿಗೆ ತಲೆಮಾರಿನಿಂದ ಅನೂಚಾನ ವಾಗಿ ಬಂದ ಕಸುಬಾಗಿಯೇ ಉಳಿದಿತ್ತು. ಇತ್ತೀಚಿನ ಒಂದೆರಡು ವರ್ಷಗಳಲ್ಲಿ ಈ ದಿಕ್ಕಿನಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಿವೆ. ವಿಜ್ಞಾನ ಮತ್ತು ತಾಂತ್ರಿಕ ಕಲೆಗಳ ಬಳಕೆಯಿಂದ ಕೃಷಿ ಲಾಭದಾಯಕ ಉದ್ಯಮವಾಗಬಲ್ಲದು ಎಂಬ ಅಂಶ ಎಲ್ಲರಿಗೂ ಮನವರಿಕೆಯಾಗಿದೆ. ಈಗಿನ ರೈತ, ಅವನ ಪೂರ್ವಜರಂತಲ್ಲದೆ, ವ್ಯವಸಾಯ ತಜ್ಞರ ಸಹಾಯದಿಂದ ತನ್ನ ಉದ್ಯಮದಲ್ಲಿ ದಕ್ಷತೆಯನ್ನು ಪಡೆಯಲು ಕಾತರನಾಗಿದ್ದಾನೆ.

ನಮ್ಮ ಕೃಷಿ ವಿಶ್ವವಿದ್ಯಾನಿಲಯ ರಾಜ್ಯದ ಬೇಸಾಯ ಪ್ರಗತಿಗೆ ದ್ಯೋತಕ. ಸಂಶೋಧನೆಯಿಂದ ಹೊರಬಂದ ಮಾಹಿತಿಗಳನ್ನು ಹಸ್ತಪತ್ರಿಕೆ, ಕೈಪಿಡಿ, ವೃತ್ತಪತ್ರಿಕೆ ಲೇಖನ, ಹೊಲ-ಮನೆ ಭೇಟಿ ಮತ್ತು ಕ್ಷೇತ್ರೋತ್ಸವಗಳೇ ಮೊದಲಾದ ಚಟುವಟಿಕೆಗಳ ಮೂಲಕ ರೈತನಿಗೆ ಮುಟ್ಟಿಸಿ ಅವನ ಬೇಸಾಯ ಕ್ರಮಗಳನ್ನು ಸುಧಾರಿಸುವ ಪ್ರಯತ್ನ ಸತತವಾಗಿ ನಡೆದಿದೆ.

ಕಳೆದ ಕೆಲವು ವರ್ಷಗಳಲ್ಲಿ, ರೈತರ ಅಕ್ಷರಜ್ಞಾನ ಗಣನೀಯ ಪ್ರಮಾಣದಲ್ಲಿ ಬೆಳೆದಿದೆ. ಅಲ್ಲದೆ, ಬೇಸಾಯವನ್ನು ಕಸುಬಾಗಿ ಸ್ವೀಕರಿಸಿ ಹಳ್ಳಿಗಾಡಿನಲ್ಲಿ ನೆಲೆಸಿರುವ ವಿದ್ಯಾವಂತರ ಸಂಖ್ಯೆ ಕ್ರಮೇಣ ಬೆಳೆಯುತ್ತ ಬಂದಿದೆ. ಈ ಸಂದರ್ಭದಲ್ಲಿ, ಪ್ರಾಯೋಗಿಕ ವಿಜ್ಞಾನ ವಿಷಯವಷ್ಟೇ ಅಲ್ಲದೆ ಮೂಲಭೂತ ವಿಜ್ಞಾನ ಸಾಹಿತ್ಯವನ್ನೂ ಕನ್ನಡದಲ್ಲಿ ಒದಗಿಸುವುದು ಅವಶ್ಯಕವಾಗುತ್ತದೆ. ಇದನ್ನು ಮನಗಂಡ ಭಾರತ ಸರಕಾರ, ಪ್ರತಿ ಯೊಂದು ರಾಜ್ಯದಲ್ಲಿ ಅಲ್ಲಿನ ಪ್ರಾದೇಶಿಕ ಭಾಷೆಗಳಲ್ಲಿ ವಿಜ್ಞಾನ ಸಾಹಿತ್ಯ ವಿಪುಲವಾಗಿ ಬೆಳೆಯುವುದಕ್ಕೆ ಪ್ರೋತ್ಸಾಹಕೊಡಲು ಮುಂದೆ ಬಂದಿದೆ. ಪಠ್ಯ ಮತ್ತು ಪೋಷಕ ಸಾಹಿತ್ಯ ನಿರ್ಮಾಣಕ್ಕೆ ಒಂದು ಯೋಜನೆ ಅಂಗೀಕರಿಸಲ್ಪಟ್ಟಿದೆ ಮತ್ತು ಎಲ್ಲ ರಾಜ್ಯ ಗಳಲ್ಲೂ ಕಾರ್ಯಗತವಾಗಿದೆ. ಉತ್ತಮ ಮಟ್ಟದ ಸಾಹಿತ್ಯ ಬೆಳೆದು, ಸರಸ್ವತೀ ಭಂಡಾರ ವೃದ್ಧಿಯಾದಾಗ, ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಶಿಕ್ಷಣಮಾಧ್ಯಮ, ಇಂಗ್ಲಿಷಿನಿಂದ ಪ್ರಾದೇಶಿಕ ಭಾಷೆಗೆ ಬದಲಾಗಲು ಸಾಧ್ಯವಾಗಬಹುದು. ಈ ಯೋಜ ನೆಯ ಅಂಗವಾಗಿ ಕೃಷಿ ವಿಜ್ಞಾನದ ಎಲ್ಲ ಪಠ್ಯ ಹಾಗೂ ಪೋಷಕ ವಿಷಯಗಳಲ್ಲಿ ಸಾಹಿತ್ಯ ನಿರ್ಮಾಣದ ಹೊಣೆಯನ್ನು ನಮ್ಮ ವಿಶ್ವವಿದ್ಯಾನಿಲಯ ಒಪ್ಪಿಕೊಂಡಿದೆ. ಮೂಲಗ್ರಂಥ ಬರವಣಿಗೆ ಮತ್ತು ಇಂಗ್ಲಿಷ್ ಮತ್ತಿತರ ಭಾಷೆಗಳಿಂದ ಅನುವಾದ. ಇವೆರಡೂ ಕ್ರಮಗಳಿಂದ ಸಾಹಿತ್ಯಾಭಿವೃದ್ಧಿ ಕಾರ್ಯಕ್ರಮ ಪ್ರಾರಂಭವಾಗಿದೆ.

ಈ ಪ್ರಕಟಣೆಗಳು ರೈತಬಾಂಧವರಿಗೆ, ವಿದ್ಯಾರ್ಥಿಗಳಿಗೆ ಮತ್ತು ವ್ಯವಸಾಯದಲ್ಲಿ ಆಸಕ್ತಿಯುಳ್ಳ ಇತರರಿಗೆ ಉಪಯೋಗವಾಗಲೆಂದು ಆಶಿಸಲಾಗಿದೆ.

ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು
ತಾ॥ 15—1—1975

ಎಚ್. ಆರ್. ಅರಕೇರಿ
ಉಪಕುಲಪತಿ

ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡದಲ್ಲಿ ಪ್ರಕಟವಾಗುವ ಕೃಷಿವಿಜ್ಞಾನ ಪುಸ್ತಕಗಳನ್ನು ಕುರಿತು

ಸಾವಿರದ ಒಂಬೈನೂರ ನಲವತ್ತೇಳನೆಯ ವರ್ಷ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದುದು ಎಲ್ಲರಿಗೂ ತಿಳಿದಿರುವ ವಿಷಯ. ನೂರಾರು ವರ್ಷ ಪರಕೀಯರ ಪ್ರಭಾವಕ್ಕೆ ಒಳಗಾದ ನಾಡು ನಾನಾವಿಧದಲ್ಲಿ ಜರ್ಝರಿತವಾಗಿತ್ತು; ಅಜ್ಞಾನ, ಬಡತನ, ಆಲಸ್ಯಗಳು ತಾಂಡವಾಡುತ್ತಿದ್ದವು; ಜನತೆ ಕಂಗೆಟ್ಟಿತ್ತು. ನಾಡಿನ ಸರ್ವಾಂಗ ಸುಂದರ ಅಭಿವೃದ್ಧಿ ಕಾರ್ಯವನ್ನು ಸ್ವತಂತ್ರ ಸರಕಾರವು ಪ್ರಪ್ರಥಮ ಕರ್ತವ್ಯವೆಂದು ಕೈಗೆತ್ತಿಕೊಂಡಿತ್ತು. ಅದರಲ್ಲಿ ಭಾಷೆ ಹಾಗೂ ಸಾಹಿತ್ಯಗಳ ಬೆಳವಣಿಗೆಯೂ ಒಂದಾಗಿತ್ತು.

ಮೂರು ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ದೇಶದ ಅಭಿವೃದ್ಧಿ ಕಾರ್ಯವು ಮುಂದುವರಿಯಿತು. ಇಡೀ ದೇಶಕ್ಕೆ ಒಂದು ಶಿಕ್ಷಣ ಧೋರಣೆ ಇರಬೇಕಾದುದು ಅವಶ್ಯವೆಂದು ಮನಗಂಡು, ಸಾವಿರದ ಒಂಬೈನೂರ ಅರವತ್ನಾಲ್ಕರಲ್ಲಿ ರಾಷ್ಟ್ರದಲ್ಲಿ ಒಂದು ಶಿಕ್ಷಣ ಆಯೋಗದ ಸ್ಥಾಪನೆಯಾಯ್ತು. ಅದು ಎರಡು ವರ್ಷಗಳ ದೀರ್ಘ ಪ್ರಯತ್ನಪಟ್ಟು ರಾಷ್ಟ್ರೀಯ ಶಿಕ್ಷಣ ಧೋರಣೆಯನ್ನು ರೂಪಿಸಿತು.

ರಾಷ್ಟ್ರೀಯ ಶಿಕ್ಷಣ ಧೋರಣೆ

ಭಾರತದಲ್ಲಿ ಭಾಷೆಗಳ ಹಾಗೂ ಸಾಹಿತ್ಯಗಳ ಚೇತನಾವೃದ್ಧಿಯು ಶಿಕ್ಷಣ ಮತ್ತು ಸಂಸ್ಕೃತಿಗಳ ಬೆಳವಣಿಗೆಯನ್ನು ಅವಲಂಬಿಸಿದೆ. ಇವು ಕೈಗೂಡಿ ಬಂದ ಹೊರತು ಜನತೆಯ ಸೃಜನಾತ್ಮಕ ಚೇತನವು ಕುದುರಲಾರದು; ದೇಶದಲ್ಲಿಯ ಶಿಕ್ಷಣಮಟ್ಟವು ಸುಧಾರಿಸಲಾರದು; ಜನತೆಯಲ್ಲಿ ಜ್ಞಾನಪ್ರಸಾರ ಕಾರ್ಯ ನಡೆಯಲಾರದು; ಬುದ್ಧಿವಂತರು ಹಾಗೂ ಸಾಮಾನ್ಯರ ನಡುವಣ ಅಂತರ ಹಾಗೆಯೇ ಉಳಿಯುವುದು.

ಸಂಸತ್ತಿನ ಎರಡೂ ಮನೆಗಳಲ್ಲಿ ಕೂಲಂಕಷವಾಗಿ ಚರ್ಚೆ ನಡೆದು, ಭಾರತ ಸರಕಾರವು ಸಾವಿರದ ಒಂಬೈನೂರ ಅರವತ್ತೆಂಟರಲ್ಲಿ ಮೇಲಿನ ರಾಷ್ಟ್ರೀಯ ಶಿಕ್ಷಣ ಧೋರಣೆಯನ್ನು ಅಂಗೀಕರಿಸಿತು.

ಭಾರತವು ಹಲವಾರು ಭಾಷೆಗಳನ್ನು ಬಳಸುವ ರಾಷ್ಟ್ರ. ಎಲ್ಲ ಭಾಷೆಗಳಿಗೂ ಅವುಗಳದೇ ಆದ ಪ್ರಾಮುಖ್ಯತೆಯಿದೆ. ಅವುಗಳೆಲ್ಲ ಸಮತೋಲಿತವಾಗಿ ಬೆಳೆದು ಬಂದಾಗಲೇ ರಾಷ್ಟ್ರದ ಸಮಗ್ರತೆ ಬೆಳೆದುಬರುತ್ತದೆ.

ಭಾರತದಲ್ಲಿ ಹದಿನಾಲ್ಕು ಮುಖ್ಯ ಪ್ರಾದೇಶಿಕ ಭಾಷೆಗಳ ಬೆಳವಣಿಗೆಯೂ ಹಿಂದಿಯ ಬೆಳವಣಿಗೆಯೊಂದಿಗೇ ನಡೆಯಬೇಕು; ಆಗ ನಿಜವಾದ ರಾಷ್ಟ್ರದ ಶಿಕ್ಷಣ ಹಾಗೂ ಸಂಸ್ಕೃತಿಗಳ ಮುನ್ನಡೆಗೆ ಒಂದು ಚಾಲನೆ ದೊರೆಯುತ್ತದೆ; ಈ ರಾಜ್ಯಭಾಷೆಗಳೆಲ್ಲವೂ ಸಂಪದ್ಭರಿತವಾಗಿ ಬೆಳೆದು ಆಧುನಿಕ ಕಾಲದ ಜ್ಞಾನಪ್ರಸಾರ ಸಾಧನಗಳಾಗುವಂತೆ ಕೇಂದ್ರ ಸರಕಾರವು ರಾಜ್ಯಸರಕಾರಗಳ ಸಹಯೋಗದೊಂದಿಗೆ ಸಂಯೋಜಿತ ಯತ್ನ ನಡೆಯಿಸಬೇಕು.

ಇದು ಸಂಸತ್ತು ಕೈಗೊಂಡ ನಿರ್ಧಾರ.

ಈ ನಿರ್ಧಾರದೊಂದಿಗೆ ನಾಡಿನಲ್ಲಿ ಕಾರ್ಯವು ಪ್ರಾರಂಭವಾಗಿದೆ. ಭಾರತ ಸರಕಾರದಲ್ಲಿ ಶಿಕ್ಷಣ ಹಾಗೂ ಯುವಜನ ಸಚಿವಾಲಯ ಮತ್ತು ರಾಜ್ಯ ಸರಕಾರಗಳಲ್ಲಿ ಶಿಕ್ಷಣ ಇಲಾಖೆಗಳು ಈ ಮಹಾನ್ ಕಾರ್ಯದ ಹೊಣೆ ಹೆಗಲಿಗೇರಿಸಿಕೊಂಡಿವೆ. ಈ ಕಾರ್ಯಕ್ಕಾಗಿ, ಕೇಂದ್ರವು ಒಂದೊಂದು ರಾಜ್ಯಕ್ಕೆ ನಾಲ್ಕನೆಯ ಪಂಚವಾರ್ಷಿಕ ಯೋಜನಾವಧಿ ಪೂರ್ತಿಗೊಳ್ಳುವ ಅವಧಿಯಲ್ಲಿ ವೆಚ್ಚಕ್ಕೆಂದು ಒಂದು ಕೋಟಿ ರೂಪಾಯಿಗಳ ಮೊತ್ತವನ್ನು ಕೊಡಮಾಡಿತ್ತು. ಈ ಐದನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಈ ಕಾರ್ಯಕ್ರಮ ಮುಂದುವರೆದಿದೆ.

ದೇಶದಲ್ಲಿ ಆಂಗ್ಲರಾಳ್ವಿಕೆ ಇದ್ದಾಗ, ಆಡಳಿತ ಭಾಷೆ ಹಾಗೂ ಶಿಕ್ಷಣ ಮಾಧ್ಯಮಗಳು ಇಂಗ್ಲಿಷ್ ಭಾಷೆಯಲ್ಲಿ ನಡೆಯಲು ಅವಕಾಶ ಕಲ್ಪಿಸಿಕೊಡಲಾಯಿತು. ಹೀಗೆ ಮಾಡುವಲ್ಲಿ ದೇಶದ ಹಾಗೂ ದೇಶಿಗರ ಹಿತಸಾಧನೆಗೆ ಎಳ್ಳಷ್ಟೂ ಆದ್ಯತೆ ಕೊಡಲಿಲ್ಲ. ಪರಕೀಯರಾದ ಆಡಳಿತಗಾರರು ತಮ್ಮ ಆಡಳಿತವನ್ನು ಸರಾಗವಾಗಿ ನಡೆಸಿಕೊಂಡು ಹೋಗಲು, ಆಳ್ವಿಕೆಯ ಬೇರುಗಳನ್ನು ಭದ್ರಗೊಳಿಸಲು ಹಾಗೂ ಆಳ್ವಿಕೆಗೆ ಬೇಕಾದ ಸಿಬ್ಬಂದಿಯನ್ನು ಸಿದ್ಧಗೊಳಿಸಲು ಯೋಚನೆ ಮಾಡಿದರೇ ಹೊರತು, ಅದರ ಪರಿಣಾಮವು ಭಾರತದ ಭಾಷೆ, ಸಂಸ್ಕೃತಿಗಳ ಮೇಲೆ ಏನಾದೀತೆಂಬುದನ್ನು ಗಣನೆಗೆ ತಂದುಕೊಳ್ಳಲಿಲ್ಲ; ಇಲ್ಲವೇ ಅವುಗಳನ್ನು ಹತ್ತಿಕ್ಕಿ, ತಮ್ಮ ಭಾಷೆ ಹಾಗೂ ಸಂಸ್ಕೃತಿಗಳ ಮುದ್ರೆಯೊತ್ತುವ ಸಂಚುಗಾರಿಕೆಯೂ ಆಗಿರಬೇಕು. ದೇಶಕ್ಕೆ ಸ್ವಾತಂತ್ರ್ಯ ಬಂದಿದೆ. ಆದರೂ ಇಂಗ್ಲಿಷಿಗೆ ಆಡಳಿತ ಹಾಗೂ ಶಿಕ್ಷಣ ಮಾಧ್ಯಮದ ಸ್ಥಾನ. ಅನೇಕ ಕಡೆಗಳಲ್ಲಿ ದೇಶವು ದಾಸ್ಯದಲ್ಲಿರುವಾಗಿನಂತೆಯೇ ಮುಂದುವರಿದಿದೆ.

ಶಿಕ್ಷಣ, ಜನತೆಯ ತಲೆ ಕಣ್ಣುಗಳು. ವಿಚಾರಶಕ್ತಿಯ ಬೆಳೆವಣಿಗೆ ನಡೆದು, ಜ್ಞಾನಚಕ್ಷು ಕಾಂತಿಯುತವಾದಾಗ ಯಾವುದೊಂದು ಜನಾಂಗ ಸುಸಂಸ್ಕೃತವೆನ್ನಿಸಿಕೊಳ್ಳುತ್ತದೆ. ಅಭಿವೃದ್ಧಿ ಹೊಂದಲು ಅದಕ್ಕೆ ಬಲಸಂಚಯನವಾಗುತ್ತದೆ. ಅಂತೆಯೇ ಜಾಗ್ರತ ನಾಡಿನಲ್ಲಿ ಯೋಗ್ಯ ಶಿಕ್ಷಣದ ಏರ್ಪಾಡಿಗೆ ಅವಕಾಶವಿರುತ್ತದೆ. ಶಿಕ್ಷಣವು ಪರಿಣಾಮಕಾರಿಯಾಗಬೇಕಾಗಿದ್ದಲ್ಲಿ ಅದರ ಮಾಧ್ಯಮವು ಪ್ರಾದೇಶಿಕ ಭಾಷೆ ಇಲ್ಲವೇ

ತಾಯಿನುಡಿಯಾಗಿರಬೇಕಾದುದು ಅವಶ್ಯವೆಂದು ಎಲ್ಲ ಶಿಕ್ಷಣತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ನೂರಾರು ವರ್ಷಗಳಿಂದ ಉಚ್ಚಮಟ್ಟದಲ್ಲಿ ಶಿಕ್ಷಣಮಾಧ್ಯಮವಾಗಿ ಸಾಗಿ ಬಂದ ಇಂಗ್ಲಿಷ್ ಭಾಷೆಯ ಪ್ರಭಾವವು ನಮ್ಮ ಶಿಕ್ಷಣದಲ್ಲಿ ಆಳವಾಗಿ ಬೇರುಬಿಟ್ಟು ದನ್ನು ಕಾಣುತ್ತೇವೆ. ವಿಜ್ಞಾನ ವಿಷಯದಲ್ಲಿಯಂತೂ ಈ ಪ್ರಭಾವವು ಭಾರಿ ಎದ್ದು ಕಾಣುವಂತಹುದು. ಅಪಾರ ಜ್ಞಾನರಾಶಿಯು ಆಂಗ್ಲಭಾಷೆಯಲ್ಲಿರುವಷ್ಟು ಭಾರತೀಯ ಯಾವುದೇ ಭಾಷೆಗಳಲ್ಲಿ ಇಲ್ಲ. ಅಲ್ಲದೆ ವಿಶ್ವದ ಬಹುಜನರ, ಅದರಲ್ಲಿಯೂ ಮುಂದು ವರಿದ ಜನಾಂಗದ ಭಾಷೆ ಇದಾದುದರಿಂದ, ದಿನದಿನಕ್ಕೂ ಇದು ಬೆಳೆಯುತ್ತಲೇ ಇದೆ. ಇದರ ಪ್ರಯೋಜನವನ್ನು ನಾವು ಪಡೆಯಲೇಬೇಕಾಗಿದೆ.

ದೇಶಭಾಷೆಯಲ್ಲಿ ಬೋಧೆ ನಡೆದಾಗ, ಜ್ಞಾನದ ಸ್ಪಷ್ಟ ತಿಳಿವಳಿಕೆಯಾಗುತ್ತದೆ; ಬುದ್ಧಿ ಪುಷ್ಟಿಗೊಳ್ಳುತ್ತದೆ: ಸಾಹಿತ್ಯ, ಸಂಸ್ಕೃತಿ ಹಾಗೂ ವಿಜ್ಞಾನಗಳ ಬೆಳವಣಿಗೆಗೆ ರೆಕ್ಕೆಮೂಡುತ್ತದೆ. ಇದನ್ನು ಮನಗಂಡಾಗ, ವಿದ್ಯಾಭ್ಯಾಸದ ಎಲ್ಲ ಮಟ್ಟಗಳಲ್ಲಿ ದೇಶ ಭಾಷೆಯೇ ಶಿಕ್ಷಣಮಾಧ್ಯಮವಾಗುವುದು ಅಗತ್ಯವೆನಿಸುವುದು; ಅನಿವಾರ್ಯವೂ ಆದೀತು.

ಈ ಬದಲಾವಣೆಯು ಇಂದೇ ನಡೆಯಬೇಕೆ? ಅದಕ್ಕೆ ಸಿದ್ಧತೆಗಳನ್ನೇನಾದರೂ ಮಾಡಿಕೊಳ್ಳುವುದಿದೆಯೆ? ಮಾಡಿಕೊಳ್ಳಬೇಕಾಗಿದ್ದಲ್ಲಿ ಅವು ಯಾವುವು? ಅವುಗಳ ಸಾಧನೆಯಲ್ಲಿ ಯಾವ ದಿಶೆಯಲ್ಲಿ ಯತ್ನಗಳು ನಡೆಯಬೇಕು?

ಈ ಕೆಲವು ಪ್ರಶ್ನೆಗಳಿಗೆ ಉತ್ತರ ರೂಪವಾಗಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಹಲವು ಕಾರ್ಯಗಳನ್ನು ಕೈಗೊಂಡಿವೆ.

ಶಿಕ್ಷಣಮಾಧ್ಯಮವು ಪ್ರಾದೇಶಿಕ ಭಾಷೆಗಳಲ್ಲಿ ನಡೆಯಬೇಕಾಗಿದ್ದಲ್ಲಿ, ಹಲಕೆಲವು ಸಿದ್ಧತೆಗಳು ಅವಶ್ಯವಿವೆ. ಪಠ್ಯಪುಸ್ತಕಗಳು, ಪೂರಕ ಪಠ್ಯಪುಸ್ತಕಗಳು, ಆಧಾರಗ್ರಂಥ ಗಳು, ಸಹಾಯಕ ಗ್ರಂಥಗಳು ಮತ್ತು ಸಾಮಾನ್ಯಜ್ಞಾನ ಪುಸ್ತಕಗಳು ಪ್ರಾದೇಶಿಕ ಭಾಷೆಯಲ್ಲಿ ಸಿದ್ಧವಾಗಬೇಕು. ಈ ಕೆಲಸ ಸುಲಭವಲ್ಲ. ಒಂದು ನಾಡನ್ನು ಸುಲಭವಾಗಿ ಕಟ್ಟಿಬಿಡಬಹುದು. ಆದರೆ, ಒಂದು ನುಡಿ ಅಭಿವೃದ್ಧಿಗೊಳಿಸುವ ಕೆಲಸವು ಅತೀವ ಕಷ್ಟಸಾಧ್ಯವಾದ ಕಾರ್ಯ. ಹಲವಾರು ಜನ ತಂತ್ರಜ್ಞರು, ಶಿಕ್ಷಕರು ಮತ್ತು ಬರಹ ಗಾರರು ಬಹುಕಾಲ ಶ್ರಮಿಸಬೇಕಾಗುವುದು. ಅಪಾರ ಹಣ ವೆಚ್ಚವಾಗುವುದು. ಪ್ರಾದೇಶಿಕ ಭಾಷೆಯಲ್ಲಿ ಗ್ರಂಥರಚನೆಗೆ, ತಾಂತ್ರಿಕ ಶಬ್ದಾವಳಿಗಳು ಮೊದಲು ಸಿದ್ಧ ವಾಗಬೇಕು. ಪ್ರಾದೇಶಿಕ ಭಾಷೆಯಲ್ಲಿ ಬೋಧನೆ ಮಾಡುವ ಸಾಮರ್ಥ್ಯ ಬಂದಾಗ, ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣ ಕೊಡುವುದು ಸಾಧ್ಯವಾಗುತ್ತದೆ. ಜೀವಮಾನವೆಲ್ಲ ಒಂದು ಭಾಷೆಯಲ್ಲಿ ಪಳಗಿ, ಅದರಲ್ಲಿಯೇ ಬೋಧೆಮಾಡುತ್ತ ಬಂದವರನ್ನು ಒಮ್ಮೆಲೇ ಬೇರೊಂದು ಭಾಷೆಯಲ್ಲಿ ಬೋಧೆಮಾಡೆಂದು ಹೇಳಿದರೆ, ಅದು ಅವರ ತಾಯಿನುಡಿಯಾಗಿದ್ದರೂ ಅದರಲ್ಲಿ ಬೋಧಿಸಲು ಅವರಿಗೆ ಕಷ್ಟವಾಗುತ್ತದೆ. ಪ್ರಯತ್ನಪೂರ್ವಕವಾಗಿ ಅಂಥವರು ಸಾಧನೆಯನ್ನು ಮಾಡಬೇಕಾಗುತ್ತದೆ. ಅವರಿಗೆ ಈ

ದಿಶೆಯಲ್ಲಿ ತರಬೇತಿಯೂ ಬೇಕಾಗುತ್ತದೆ. ಇದೂ ಕೂಡ ಈ ಯತ್ನದ ಒಂದಂಶ ವಾಗಿದೆ.

ಮೂಲಗ್ರಂಥರಚನೆ ಮಾಡುವುದೊಂದರಿಂದಲೇ ಗ್ರಂಥ ಭಂಡಾರ ಬೆಳೆಯುವು ದಿಲ್ಲ. ಬೇರೆ ಬೇರೆ ಭಾಷೆಗಳಲ್ಲಿರುವ ಜ್ಞಾನರಾಶಿಯನ್ನು ತರ್ಜುಮೆಗೊಳಿಸಿ ಒಳಹಾಕಿ ಕೊಳ್ಳುವುದರಿಂದ ಪ್ರಾದೇಶಿಕ ಭಾಷಾಭಂಡಾರವನ್ನು ತ್ವರಿತವಾಗಿ, ಸಂಪದ್ಭರಿತವಾಗಿ ಬೆಳೆಸಬಹುದಾಗಿದೆ. ಅದರಲ್ಲಿಯೂ ಇಂಗ್ಲಿಷ್ ಭಾಷೆಯಲ್ಲಿರುವ ಅಪಾರವಾದ ಜ್ಞಾನವು ಪ್ರಾದೇಶಿಕ ಭಾಷೆಗಳಿಗೆ ಸಾಗಿಬರಬೇಕಾಗಿದೆ. ಈ ಪ್ರಯತ್ನವನ್ನು ವಿಶ್ವ ವಿದ್ಯಾನಿಲಯಗಳು, ಸಾಹಿತ್ಯ ಸಂಸ್ಥೆಗಳು ಹಾಗೂ ಇತರ ಶಿಕ್ಷಣ ಕೇಂದ್ರಗಳು ಮಾಡಬಲ್ಲವು.

ಕನ್ನಡದಲ್ಲಿ ಕೃಷಿ ವಿಜ್ಞಾನ ಸಾಹಿತ್ಯ ನಿರ್ಮಾಣದ ಹೊಣೆಯು ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ್ದಾಗಿದೆ. ಕೃಷಿ ವಿಜ್ಞಾನವು ವ್ಯಾಪಕವಾಗಿದೆ. ಅದರಲ್ಲಿ ವ್ಯವ ಸಾಯ, ಪಶುಸಂಗೋಪನೆ, ತೋಟಗಾರಿಕೆ, ಮತ್ಸ್ಯಪರಿಪಾಲನೆ, ವನಸಂಪತ್ತು ಮತ್ತು ಗೃಹವಿಜ್ಞಾನಗಳು ಸಮಾವೇಶವಾಗುತ್ತವೆ. ಈ ಎಲ್ಲ ವಿಷಯಗಳಿಗೆ ಸಂಬಂಧಪಟ್ಟ ಗ್ರಂಥನಿರ್ಮಾಣ ಕಾರ್ಯವು ನಡೆಯುತ್ತದೆ. ಸ್ವತಂತ್ರ ಕೃತಿರಚನೆಯ ಜೊತೆಗೆ, ಬೇರೆ ಬೇರೆ ಭಾಷೆಗಳಲ್ಲಿಯ ಉಪಯುಕ್ತ ಗ್ರಂಥಗಳ ಭಾಷಾಂತರವನ್ನೂ ಹಮ್ಮಿಕೊಳ್ಳಲಾಗಿದೆ. ಸ್ಥೂಲವಾಗಿ ಈ ಗ್ರಂಥಗಳನ್ನು ಮೂರು ವಿಧವಾಗಿ ವಿಂಗಡಿಸಬಹುದು:

1. ಪಠ್ಯಪುಸ್ತಕಗಳು
2. ಪೂರಕ ಪಠ್ಯಪುಸ್ತಕಗಳು
3. ಸಹಾಯಕಜ್ಞಾನ ಪುಸ್ತಕಗಳು

ಮೊದಲಿನ ಎರಡು ವಿಧವಾದ ಗ್ರಂಥಗಳು ವ್ಯವಸಾಯ ಶಿಕ್ಷಣ ವಿದ್ಯಾರ್ಥಿಗಳಿಗೆ ಉಪಯುಕ್ತವಾದರೆ ಮೂರನೆಯ ಗುಂಪಿಗೆ ಸೇರಿದ ಪುಸ್ತಕಗಳು ಜನಸಾಮಾನ್ಯರಿಗೂ ಜ್ಞಾನ ನೀಡುವುದರಲ್ಲಿ ಸಹಕಾರಿಯಾಗುತ್ತವೆ.

ವ್ಯವಸಾಯವು ನಮ್ಮ ರಾಜ್ಯದ ಬಹು ಜನರ ಉದ್ಯೋಗವಾಗಿದೆ. ಮಾನವನ ಜೀವನಾವಶ್ಯಕಗಳಲ್ಲಿ ಪ್ರಮುಖವಾದ ಅನ್ನವಸ್ತ್ರಗಳ ಪೂರೈಕೆಯು ಈ ಉದ್ಯೋಗ ವನ್ನೇ ಅವಲಂಬಿಸಿದೆ. ರಾಜ್ಯದ ಆರ್ಥಿಕ ಭದ್ರತೆಯೂ, ಇದರ ಬೆಳವಣಿಗೆಯನ್ನೇ ಅವಲಂಬಿಸಿದೆ.

ವ್ಯವಸಾಯ ವಿಜ್ಞಾನವಿಂದು ಬಹುಬಗೆಯಾಗಿ ಮೈದುಂಬಿ ಬೆಳೆಯುತ್ತ ನಡೆದಿದೆ. ವ್ಯವಸಾಯೋತ್ಪಾದನೆಯಲ್ಲಿ ಬೆರಳು ಕಚ್ಚುವ ಪೆಚ್ಚಳವು ಇದರಿಂದ ಸಾಧ್ಯವಾಗಿದೆ.

ಅನ್ನಾನ್ನಗತಿಕವಾದ ನಾಡನ್ನು ಹಸಿವೆಯಿಂದ ಮುಕ್ತಗೊಳಿಸಿದ ಕೀರ್ತಿ ಈ ಬೃಹದಾಕಾರವಾಗಿ ಬೆಳೆಯುತ್ತಿರುವ ವ್ಯವಸಾಯ ವಿಜ್ಞಾನಕ್ಕೆ ಸಲ್ಲುತ್ತದೆ. ಶಕ್ತಿಗುಂದಿದ, ನಿರ್ವೀರ್ಯನಾದ ರೈತನಿಂದು ಬಲಿಷ್ಠನಾಗಿ, ಚೇತರಿಸಿಕೊಳ್ಳಲು ಸಹಾಯಕವಾಗಿದೆ. ಹಲವರು ಇದನ್ನು ನಾಡಿನಲ್ಲಿ ಇಂದು ವ್ಯವಸಾಯ ರಂಗದಲ್ಲಿ ಒಂದು ಕ್ರಾಂತಿಯೇ ನಡೆದಿದೆಯೆಂದು ಕರೆಯುತ್ತಾರೆ: ಅದೇ **ಹಸುರುಕ್ರಾಂತಿ !** ನಿಜಕ್ಕೂ ಎಷ್ಟು ಅರ್ಥ ಗರ್ಭಿತವಾಗಿದೆ ಈ ನುಡಿ! ಕ್ರಾಂತಿಯ ಬಣ್ಣ ಕೆಂಪು; ಹಸುರು ಬಣ್ಣಕ್ಕೇಕೆ ಈ ನಂಟು ? ಕ್ರಾಂತಿ ಭಯಾನಕ, ನಾಶ ಅದರ ಕಾರ್ಯ! ಕ್ರಾಂತಿಯ ಬೆನ್ನೇರಿ ಬರುವುದು ಶಾಂತಿ ಕ್ರಾಂತಿಯ ಛಾಯೆ ಸಂತೃಪ್ತಿ! ಕೆಂಪು ಬಣ್ಣದ ಕ್ರಾಂತಿಯ ಲಕ್ಷಣಗಳಿವು. ಹಸುರು ಕ್ರಾಂತಿ ಆದಾಗ ನಿಸರ್ಗವೆಲ್ಲ ರಮಣೀಯವಾಗಿ ತೋರುವುದು. ಧರಿತ್ರಿ ಆಗ ಸಸ್ಯ ಶ್ಯಾಮಲೆ! ಎಲ್ಲೆಲ್ಲಿಯೂ ಚೆಲುವು! ತೆನೆ ತೂಗಿನಿಂತ ಬೆಳೆಯ ನಿಲುವಿಗಿಂತ ಹೆಚ್ಚಿನ ಚೆಲುವುಂಟೇ? ಆ ಚೆಲುವು ವಿಶ್ವದ ತುಷ್ಟಿ, ಸಂತುಷ್ಟಿಗಳಿಗೆ ಆಧಾರ; ಶಾಂತಿಗೆ ನೆಲೆ! ಕ್ರಾಂತಿಯ ಬಣ್ಣವನ್ನೂ ಬದಲಾಯಿಸಿದ ಕೀರ್ತಿ, ಕೃಷಿ ವಿಜ್ಞಾನಿಯದು. ಆತನ ಕನಸನ್ನು ನನಸಾಗಿಸಿದ ಧೀರ, ನೇಗಿಲಯೋಗಿ!

ಈ ಹಸುರುಕ್ರಾಂತಿಯ ಯಶಸ್ಸಿನ ಗುಟ್ಟು, ವ್ಯವಸಾಯದ ವಿಜ್ಞಾನ ಹಾಗೂ ತಾಂತ್ರಿಕತೆಗಳನ್ನು ತಿಳಿದು ಬೆಳೆಸಿಕೊಳ್ಳುವುದರಲ್ಲಿ ಅಡಗಿದೆ. ಜನರಿಗೆ ಅರ್ಥವಾಗುವ ಸರಳ ನುಡಿಯಲ್ಲಿ ಅದರ ಬೋಧೆ ನಡೆದಾಗ ಇದು ಸಾಧ್ಯ. ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡದಲ್ಲಿ ಕೃಷಿಸಾಹಿತ್ಯ ನಿರ್ಮಾಣವಾಗುತ್ತಿರುವುದು ಈ ಮಹಾಸಾಧನೆ ಗೋಸುಗವಾಗಿಯೇ.

ವ್ಯವಸಾಯದ ಉನ್ನತಿಯು, ಕೃಷಿ ವಿಶ್ವವಿದ್ಯಾನಿಲಯದ ಹೊಣೆ. ರೈತನೇ ಕೃಷಿ ವಿಶ್ವವಿದ್ಯಾನಿಲಯದ ಅಂತಿಮ ಆರಾಧ್ಯ ದೈವ. ಕೃಷಿಯ ನುಡಿ, ಕೃಷಿಕನ ನುಡಿ–ಕನ್ನಡ. ಕೃಷಿ ವಿಶ್ವವಿದ್ಯಾನಿಲಯದ ಸಕಲ ಸಾಧನೆಗಳ ವಿವರ, ಕನ್ನಡದಲ್ಲಿ ಮೂಡಿಬಂದಾಗ ಅದಕ್ಕೊಂದು ಅರ್ಥ; ಅದರ ಅಸ್ತಿತ್ವಕ್ಕೊಂದು ಸಾರ್ಥಕತೆ!

ಈ ಕೆಲವು ಉದ್ದೇಶ ಸಾಧನೆಗಾಗಿ, ಕೃಷಿ ವಿಶ್ವವಿದ್ಯಾನಿಲಯವು ಕನ್ನಡದಲ್ಲಿ ಗ್ರಂಥ ಪ್ರಕಟಣೆಯನ್ನು ಕೈಗೆತ್ತಿಕೊಂಡಿದೆ. ಕೃಷಿಯ ವಿವಿಧ ರಂಗದಲ್ಲಿ ಹಲವಾರು ಗ್ರಂಥಗಳು ಮೂಡಿಬಂದಾಗ, ಕನ್ನಡ ಸಾಹಿತ್ಯ ಶಾರದೆಯ ಹೊನ್ನ ಕಿರೀಟಕ್ಕೆ ಕುಂದಣ ವಿಟ್ಟಂತಾದೀತು. ಕನ್ನಡ ಭೂದೇವಿ, ಶ್ರೀದೇವಿಯಾಗಿ ನಲಿಯುವಳು.!! ಕನ್ನಡ ರೈತರ ಬಾಳು ಸುಖ, ಸಮೃದ್ಧಿ, ಸಂತಸಗಳ ಸಂಗಮವಾಗುವುದು.

ಕೃಷಿ ವಿಶ್ವವಿದ್ಯಾನಿಲಯದಲ್ಲಿ ಗ್ರಂಥ ರಚನೆಯ ಕಾರ್ಯ, **ಕನ್ನಡ ಅಭಿವೃದ್ಧಿ ಸಮಿತಿ**ಯ ಮಾರ್ಗದರ್ಶನದಲ್ಲಿ ನಡೆಯುತ್ತಿದೆ. ಅದರ ಸಂಘಟನೆ ಇಂತಿದೆ:

1.	ಡೀನ್	ಕಾರ್ಯಾಧ್ಯಕ್ಷರು
2.	ಕೃಷಿ ಶಿಕ್ಷಣ ನಿರ್ದೇಶಕರು (ಹೆಬ್ಬಾಳ)	ಸದಸ್ಯರು
3.	ಪಶುವೈದ್ಯಕೀಯ ಶಿಕ್ಷಣ ನಿರ್ದೇಶಕರು	,,
4.	ವಿಸ್ತರಣ ನಿರ್ದೇಶಕರು	,,
5.	ಶಿಕ್ಷಣ ನಿರ್ದೇಶಕರು (ಸ್ನಾತಕೋತ್ತರ ವಿಭಾಗ)	,,
6.	ಸಂಶೋಧನೆ ನಿರ್ದೇಶಕರು	,,
7.	ಹಣಕಾಸು ನಿಯಂತ್ರಕರು	,,
8.	ಗ್ರಂಥಭಂಡಾರಿಗಳು	,,
9.	ಸಂವಹನ ಸಮಿತಿ ಕಾರ್ಯದರ್ಶಿಗಳು	,,
10.	ಕನ್ನಡ ಅಧ್ಯಯನ ವಿಭಾಗ ಪ್ರಾಧ್ಯಾಪಕರು	ಕಾರ್ಯದರ್ಶಿಗಳು

ಈ ಕಾರ್ಯಕ್ಕಾಗಿ ಕೃಷಿ ವಿಶ್ವವಿದ್ಯಾನಿಲಯದಲ್ಲಿ **ಕನ್ನಡ ಅಧ್ಯಯನ ವಿಭಾಗ** ಪ್ರಾರಂಭವಾಗಿದೆ. ಅದರ ಸಿಬ್ಬಂದಿ ವರ್ಗ ಇಂತಿದೆ:

1.	ಶ್ರೀ ವಿ. ಸಿ. ಹಿತ್ತಲಮನಿ	ಪ್ರಾಧ್ಯಾಪಕರು
2.	ಶ್ರೀ ಡಿ. ಮುನಿಸ್ವಾಮಿ	ಸಹಾಯಕ ಪ್ರಾಧ್ಯಾಪಕರು
3.	ಶ್ರೀ ಕೆ. ಎಸ್. ಪ್ರತಾಪ್‌ಕುಮಾರ್	ಸಂಶೋಧನೆ ಸಹಾಯಕರು
4.	ಕುಮಾರಿ ಸಿ. ಕೆ. ಕುಮುದಿನಿ	,,
5.	ಶ್ರೀ ಎಂ. ಸತ್ಯನಾರಾಯಣ ರಾವ್	,,

ಕೃತಜ್ಞತೆಗಳು

ನಮ್ಮ ಉಪಕುಲಪತಿಗಳಾದ **ಡಾ| ಎಚ್. ಆರ್. ಅರಕೇರಿ** ಅವರು ಕೃಷಿ ಸಾಹಿತ್ಯ ನಿರ್ಮಾಣಕಾರ್ಯಕ್ಕೆ ಪುರೋಹಿತರಾಗಿದ್ದಾರೆ. ಅವರ ಹಿರಿತನ ಮಾರ್ಗ ದರ್ಶನಗಳು ನಮ್ಮ ಕಾರ್ಯದಲ್ಲಿ ದಾರಿದೀಪಗಳಾಗಿವೆ. ವಿಶ್ವಾಸದಿಂದಲೂ, ಪ್ರೇಮ ದಿಂದಲೂ ಮುನ್ನುಡಿಯನ್ನು ಬರೆದು ಸಾಹಿತ್ಯದೇವಿಯ ರಥ ಮುನ್ನಡೆಯಲೆಂದು ಹರಸಿದ್ದಾರೆ.

ಕೃಷಿ ವಿಶ್ವವಿದ್ಯಾನಿಲಯದ **ಆಡಳಿತ ಮಂಡಳಿ (ಬೋರ್ಡ್ ಅಫ್ ರೀಜೆಂಟ್ಸ್)**ಯು ಕನ್ನಡದ ಅಭಿಮಾನಧನ; ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಬೆಳವಣಿಗೆಯಾಗಬೇಕಾದುದು ಮಂಡಳಿಯ ಸದಸ್ಯರಿಗೆ ಅತ್ಯಂತ ಪ್ರಿಯವಾಗಿದೆ. ಕನ್ನಡದ ಮೇಲಿನ ಅವರ ಉತ್ಕಟವಾದ ಪ್ರೀತ್ಯಾದರಗಳು ನಮ್ಮ ಕಾರ್ಯಕ್ಕೆ ರಕ್ಷೆ.

ಈಗ ನಿಮ್ಮ ಕೈಯಲ್ಲಿಡುತ್ತಿರುವ **ಕೃಷಿ ವಿಸ್ತರಣ ಶಿಕ್ಷಣ ಪದ್ಧತಿಗಳು** ಗ್ರಂಥವನ್ನು ನಮ್ಮ ಕೃಷಿ ವಿಶ್ವವಿದ್ಯಾನಿಲಯದ ಕೃಷಿ ವಿಸ್ತರಣ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರುಗಳಾದ ಸರ್ವಶ್ರೀ **ವಿ. ವೀರಭದ್ರಯ್ಯ** ಹಾಗೂ **ಸಿ. ಎಂ. ದುಧನಿ,** ಪ್ರಾಧ್ಯಾಪಕರಾಗಿರುವ **ಡಾ| ಎಂ. ಕೆ. ಸೇತುರಾವ್** ಮತ್ತು ಕನ್ನಡ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ **ಶ್ರೀ ವಿ. ಸಿ. ಹಿತ್ತಲಮನಿ** ಅವರು ಬರೆದಿದ್ದಾರೆ. ಕೃಷಿ ವಿಸ್ತರಣ ವಿಭಾಗದ ಮುಖ್ಯಸ್ಥರೂ, ಪ್ರಾಧ್ಯಾಪಕರೂ ಆಗಿರುವ **ಡಾ| ಕೆ. ಎ. ಜಾಲಿಹಾಳ್** ಅವರು ಈ ಪುಸ್ತಕವನ್ನು ತಾಂತ್ರಿಕವಾಗಿ ಪರಿಶೀಲಿಸಿದ್ದಾರೆ.

ಈ ಪುಸ್ತಕದಲ್ಲಿಯ ಛಾಯಾಚಿತ್ರಗಳನ್ನು ಕೃಷಿ ವಿಶ್ವವಿದ್ಯಾನಿಲಯದ ಕಲಾವಿದ ರಾದ **ಶ್ರೀ ಅನಂತ, ಶ್ರೀ ನಂಜುಂಡಪ್ಪ** ಹಾಗೂ ವಾರ್ತಾತಜ್ಞರಾಗಿರುವ **ಶ್ರೀ ಎ. ಶೇಷಾದ್ರಿ ಅಯ್ಯರ್** ಒದಗಿಸಿದ್ದಾರೆ. ರೇಖಾಚಿತ್ರಗಳನ್ನು **ಶ್ರೀ ಎಸ್. ಸಿ. ಚಂದ್ರಯ್ಯ** ಹಾಗೂ **ಶ್ರೀ ಬಿ. ಜಿ. ರಮೇಶ್** ಚಿತ್ರಿಸಿದ್ದಾರೆ.

ಈ ಪುಸ್ತಕದ ಪ್ರಕಟಣಾ ಹೊರೆಯನ್ನು ಕೃಷಿವಿಶ್ವವಿದ್ಯಾನಿಲಯದ **ಸಂವಹನ ಸಮಿತಿ** ಹೊತ್ತಿದೆ.

ಈ ಪುಸ್ತಕವನ್ನು ಬೆಂಗಳೂರಿನ **ಡಬ್ಲ್ಯು. ಕ್ಯೂ. ಜಡ್ಜ್ ಪ್ರೆಸ್ಸಿನ** ಆಡಳಿತ ಗಾರರು ಅಂದವಾಗಿ ಮುದ್ರಿಸಿಕೊಟ್ಟಿದ್ದಾರೆ.

ಈ ಪುಸ್ತಕ ಹೊರಬರಲು ಸಹಕರಿಸಿದ ಈ ಎಲ್ಲ ಮಹನೀಯರನ್ನೂ ಕೃತಜ್ಞತೆ ಯಿಂದ ಸ್ಮರಿಸುವೆ.

ಪುಷ್ಯ ಮಾಸ
ಆನಂದ ಸಂವತ್ಸರ, ಶಾಲಿವಾಹನಶಕ 1896
ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು–560024

ವಿ. ಸಿ. ಹಿತ್ತಲಮನಿ
ಕನ್ನಡ ಪ್ರಾಧ್ಯಾಪಕರು
ಹಾಗೂ
ಕನ್ನಡ ಅಭಿವೃದ್ಧಿ ಸಮಿತಿ
ಕಾರ್ಯದರ್ಶಿಗಳು

ಲೇಖಕರ ಮಾತು

ಭಾರತದಲ್ಲಿ ಕೃಷಿಯ ಉನ್ನತಿಗಾಗಿ ಸತತ ಪ್ರಯತ್ನ ನಡೆಯುತ್ತಲೇ ಇದೆ. ಅಧಿಕ ಇಳುವರಿ ತಳಿಗಳು ಬಿಡುಗಡೆಯಾದ ನಂತರ ಹಲವಾರು ಹೊಸ ಪದ್ಧತಿ, ಹೊಸ ಉತ್ಪಾದನಾ ವಸ್ತು, ಹಾಗೂ ಉಪಕರಣಗಳ ಬಳಕೆ ಅನಿವಾರ್ಯವೆನಿಸಿದೆ. ಕೃಷಿಯ ಅಭಿವೃದ್ಧಿಯಲ್ಲಿ ಕೃಷಿ ಶಿಕ್ಷಣ, ಕೃಷಿ ಸಂಶೋಧನೆ ಮತ್ತು ಕೃಷಿವಿಸ್ತರಣಗಳ ಪಾತ್ರ ಹಾಗೂ ಹೊಂದಾಣಿಕೆ ಎಂದಿಗಿಂತಲೂ ಇಂದು ಮಹತ್ವದ ಸ್ಥಾನ ಪಡೆದಿವೆ. ದೇಶದಲ್ಲಿ ಕೃಷಿ ವಿಶ್ವವಿದ್ಯಾನಿಲಯಗಳು ಉದಯವಾದ ನಂತರ ಕೃಷಿಶಿಕ್ಷಣದಲ್ಲಿ ಹಲವಾರು ಪ್ರಮುಖ ಬದಲಾವಣೆಗಳಾಗಿವೆ. ಕೃಷಿವಿದ್ಯಾರ್ಥಿಗಳಿಗೆ ಕೃಷಿವಿಜ್ಞಾನದ ಪೂರ್ಣ ಪರಿಚಯ ಮಾಡಿ ಕೊಡುವುದರ ಜೊತೆಗೆ ಕೃಷಿಯ ಸ್ವಾವಲಂಬನೆಗೆ ಬೇಕಾದ ತರಬೇತಿಯನ್ನೂ ಕೊಡಲಾಗುತ್ತದೆ. ರೈತರಿಗೆ ಕೃಷಿಸಂಶೋಧನೆಯ ಕೊಡಿಗೆಗಳನ್ನು ಮುಟ್ಟಿಸುವ ಯತ್ನ ಭರದಿಂದ ನಡೆದಿದೆ. ಪರಿಣಾಮವಾಗಿ, ವಿಶ್ವವಿದ್ಯಾನಿಲಯ, ವಿಸ್ತರಣ ಕಾರ್ಯಕರ್ತರ ಶಿಕ್ಷಣಕೇಂದ್ರ ಹಾಗೂ ರೈತರ ತರಬೇತಿ ಕೇಂದ್ರಗಳಲ್ಲಿ ಕೃಷಿವಿಸ್ತರಣ ವಿಶೇಷ ಶಿಕ್ಷಣ ಗಮನ ನೀಡಿ ಕಲಿಸುವ ವಿಷಯವಾಗಿ ಬೆಳೆದು ಬಂದಿದೆ. ಆದರೆ ಈ ವಿಷಯದ ಬಗೆಗೆ ಕನ್ನಡದಲ್ಲಿ ಪುಸ್ತಕಗಳು ಇಲ್ಲವೇ ಇಲ್ಲ. ಈ ಕೊರತೆಯನ್ನು ಸರಿಪಡಿಸುವ ಅಲ್ಪ ಪರಿಶ್ರಮ, ಈ ಚಿಕ್ಕ ಹೊತ್ತಿಗೆ.

ಕೃಷಿ ವಿಸ್ತರಣ ಶಿಕ್ಷಣದ ಮೂಲ ಉದ್ದೇಶವು ರೈತರನ್ನು ಸುಧಾರಿಸಿದ ಕೃಷಿ ಪದ್ಧತಿಗಳ ಅಂಗೀಕಾರಕ್ಕೆ ಸಿದ್ಧಗೊಳಿಸುವುದಾಗಿದೆ. ಸುಧಾರಿಸಿದ ಕೃಷಿ ಬಗ್ಗೆ ರೈತರಿಗೆ ಮಾಹಿತಿ, ಶಿಕ್ಷಣ ಮತ್ತು ತರಬೇತಿ ಕೊಡುವುದು ಕೃಷಿ ವಿಸ್ತರಣ ವಿಭಾಗದ ಮುಖ್ಯ ಚಟುವಟಿಕೆ. ಈ ಉದ್ದೇಶ ಸಾಧನೆಗಾಗಿ ವಿವಿಧ ಕೃಷಿ ವಿಸ್ತರಣ ಶಿಕ್ಷಣ ಪದ್ಧತಿಗಳನ್ನು ಬಳಸಲಾಗುತ್ತಿದೆ.

ಕೃಷಿ ವಿಸ್ತರಣ ಶಿಕ್ಷಣದ ಸ್ಥೂಲಸ್ವರೂಪ, ಸಾಮಾನ್ಯ ಶಿಕ್ಷಣಕ್ಕೂ ಕೃಷಿ ವಿಸ್ತರಣ ಶಿಕ್ಷಣಕ್ಕೂ ಇರುವ ತಾರತಮ್ಯ, ಪ್ರೌಢಶಿಕ್ಷಣ ಹಾಗೂ ಕೃಷಿಶಿಕ್ಷಣಗಳ ಬಾಂಧವ್ಯ, ಜ್ಞಾನಾರ್ಜನೆಯ ಸನ್ನಿವೇಶ, ವೈಯುಕ್ತಿಕ, ಗುಂಪು ಹಾಗೂ ಸಾಮೂಹಿಕ ವಿಸ್ತರಣ ಶಿಕ್ಷಣಪದ್ಧತಿಗಳು, ದೃಗ್ಗೋಚರ (ನೇತ್ರೇಂದ್ರಿಯ ಇಲ್ಲವೆ ಚಕ್ಷು) ಸಾಧನಗಳು, ಶಿಕ್ಷಣ ಪದ್ಧತಿಗಳ ಆಯ್ಕೆ ಹಾಗೂ ಸಂಯೋಜನೆ ಮತ್ತು ಕೃಷಿ ವಿಸ್ತರಣ ಶಿಕ್ಷಣ ಪದ್ಧತಿಗಳ ಉಪಯೋಗದಲ್ಲಿನ ಕೆಲವು ಸಂಶೋಧನೆಗಳ ವಿವರಗಳನ್ನು ಈ ಪುಸ್ತಕದಲ್ಲಿ ಚರ್ಚಿಸಲಾಗಿದೆ. ವಿಷಯ ಗ್ರಹಿಸುವಿಕೆಯನ್ನು ಹೆಚ್ಚು ಪರಿಣಾಮಕಾರಿಯನ್ನಾಗಿ ಮಾಡಲು ಉಚಿತ ಸನ್ನಿವೇಶಗಳಲ್ಲಿ ಚಿತ್ರಗಳನ್ನು ಹಾಕಲಾಗಿದೆ. ವಿಷಯ ಸೂಚಿಯನ್ನೂ ಕೊಡಲಾಗಿದೆ. ಪಾರಿಭಾಷಿಕ ಶಬ್ದಕೋಶವನ್ನು ಇಂಗ್ಲೀಷ್–ಕನ್ನಡ ಹಾಗೂ ಕನ್ನಡ–ಇಂಗ್ಲೀಷ್

ಗಳೆರಡರಲ್ಲಿಯೂ ಒದಗಿಸಿದೆ. ಹೆಚ್ಚಿನ ಅಧ್ಯಯನಕ್ಕೆ ಅನುಕೂಲವಾಗಲೆಂದೂ ಹಾಗೂ ನೆರವು ಪಡೆದವರ ಉಪಕಾರ ಸ್ಮರಣೆಯೆಂದೂ ಆಧಾರಗ್ರಂಥಗಳ ಪಟ್ಟಿಯನ್ನೂ ಕೊಡಲಾಗಿದೆ. ಇದೆಲ್ಲದುದರ ಪರಿಣಾಮವಾಗಿ ಈ ಪುಸ್ತಕವು ಕೃಷಿ ವಿಸ್ತರಣ ಶಿಕ್ಷಣದ ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ಮತ್ತು ವಿಸ್ತರಣ ಕಾರ್ಯಕರ್ತರಿಗೆ ಹಾಗೂ ಪ್ರಗತಿಪರ ರೈತರಿಗೆ ಬಹುಮಟ್ಟಿಗೆ ಉಪಯೋಗವಾಗಬಲ್ಲದೆಂಬ ನಂಬಿಕೆ ನಮ್ಮದು.

ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕೃಷಿ ವಿಸ್ತರಣ ಶಿಕ್ಷಣ ನೇತಾರರಾಗಿರುವ ಡಾ| ಕೆ. ಎ. ಜಾಲಿಹಾಳ ಅವರು ಈ ಪುಸ್ತಕವನ್ನು ಅತ್ಯಂತ ಪರಿಶ್ರಮವಹಿಸಿ ತಾಂತ್ರಿಕ ಪರಿಶೀಲನೆಗೈದು ಹಲವಾರು ಉಪಯುಕ್ತ ಸೂಚನೆ ಮಾಡಿ ಪುಸ್ತಕ ಪೂರ್ಣತೆಯತ್ತ ನಡೆಯಲು ನೆರವಾಗಿದ್ದಾರೆ. ಕೃಷಿ ವಿಶ್ವವಿದ್ಯಾನಿಲಯದ ಕನ್ನಡದ ಅಧ್ಯಯನ ವಿಭಾಗ ಪುಸ್ತಕ ಬರೆಯಲು ನೀಡಿದ ಪ್ರೋತ್ಸಾಹನೆ ಅಪ್ಪಿಷ್ಟಲ್ಲ. ಉಚಿತ ಛಾಯಾಚಿತ್ರ ಒದಗಿಸಿ ಕೃಷಿ ವಿಶ್ವವಿದ್ಯಾನಿಲಯದ ಸಂವಹನ ಸಮಿತಿಯ ಕಲಾವಿದರಾದ ಶ್ರೀ ಅನಂತ, ಶ್ರೀ ನಂಜುಂಡಪ್ಪ ಹಾಗೂ ವಾರ್ತಾತಜ್ಞರಾಗಿರುವ ಶ್ರೀ ಎ. ಶೇಷಾದ್ರಿಅಯ್ಯರ್ ಅವರು ಉಪಕರಿಸಿದ್ದಾರೆ. ರೇಖಾಚಿತ್ರಗಳನ್ನು ಬರೆದುಕೊಟ್ಟು ಶ್ರೀ ಎಸ್. ಸಿ. ಚಂದ್ರಯ್ಯ ಹಾಗೂ ಶ್ರೀ ಬಿ. ಜಿ. ರಮೇಶರು ನೆರವು ನೀಡಿದ್ದಾರೆ. ಇವರೆಲ್ಲರಿಗೂ ನಾವು ಋಣಿಯಾಗಿದ್ದೇವೆ.

ದಿನಾಂಕ: 15-1-1975 **ಲೇಖಕರು**

ಪರಿವಿಡಿ

ಕೃಷಿ ವಿಸ್ತರಣ ಶಿಕ್ಷಣ ಪದ್ಧತಿಗಳು

ಅಧ್ಯಾಯ 1

ಕೃಷಿ ವಿಸ್ತರಣ ಶಿಕ್ಷಣ

ಕೃಷಿ ವಿಸ್ತರಣೆ ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಈ ಶತಮಾನದ ಪ್ರಾರಂಭದಲ್ಲಿ ಒಂದು ವ್ಯವಸ್ಥೆಗೊಂಡು ಮೊದಲಾಗಿ ಕೆಲವೇ ದಿನಗಳಲ್ಲಿ ಅತಿ ಪ್ರಭಾವ ಶಾಲಿ ಶಿಕ್ಷಣ ಪದ್ಧತಿಯಾಗಿ ಬೆಳೆದು ಆ ದೇಶದ ರೈತರ ಬಾಳನ್ನು ಮೆರಗುಗೊಳಿಸಲು ಸಾಧನವಾಯಿತು. ಮುಂದಿನ ಐವತ್ತು ವರ್ಷಗಳಲ್ಲಿ ವಿಶ್ವದಾದ್ಯಂತ ಈ ಪದ್ಧತಿಯು ಪ್ರಸಾರಗೊಂಡು ಹಲವಾರು ದೇಶಗಳ ಗ್ರಾಮೀಣ ಜೀವನ ಅಭಿವೃದ್ಧಿಗೊಳಿಸಲು ಸಹಕರಿಸಿತು. ಅಮೆರಿಕಾ ದೇಶದಲ್ಲಿ ಕೃಷಿ ಶಾಲೆ ಮತ್ತು ಕಾಲೇಜುಗಳು ವಿದ್ಯಾರ್ಥಿಗಳಿಗೆ ಪ್ರಾರಂಭದಿಂದಲೂ ಕೃಷಿವಿಜ್ಞಾನ ಹಾಗೂ ಗೃಹವಿಜ್ಞಾನಗಳ ಬಗ್ಗೆ ತಿಳಿವಳಿಕೆ ಕೊಡುತ್ತಿದ್ದವು. ಆದರೆ, ಈ ಶಿಕ್ಷಣವು ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿಯಲ್ಲಿ ನಿರತ ರಾಗಿರುವ ರೈತರು ಮತ್ತು ಅವರ ಕುಟುಂಬಗಳಿಗೆ ಮುಟ್ಟುತ್ತಿರಲಿಲ್ಲ. ರೈತರ ಹೊಲ ಮನೆಗಳಿಗೆ ಈ ಜ್ಞಾನವನ್ನು ತಲುಪಿಸಲು ಮತ್ತು ಪ್ರತ್ಯಕ್ಷ ಶಿಕ್ಷಣ ಕೊಡಲು ಕೃಷಿ ವಿಸ್ತರಣ ವಿಭಾಗಗಳನ್ನು 1914 ನೇ ವರ್ಷ ಆ ದೇಶದಲ್ಲಿ ಪ್ರಾರಂಭಿಸಲಾಯಿತು.

ಭಾರತದಲ್ಲಿ ಕೃಷಿ ವಿಸ್ತರಣೆ 1952 ನೇ ವರ್ಷ ಒಂದು ರೂಪ ತಾಳಿತು.

ಭಾರತದಲ್ಲಿ ಕೃಷಿ ಅಭಿವೃದ್ಧಿ ಕಾರ್ಯಗಳು ನೂರಾರು ವರ್ಷಗಳಿಂದ ನಡೆಯುತ್ತ ಬಂದಿವೆಯಾದರೂ 1952 ನೇ ವರ್ಷ ಕೃಷಿ ವಿಸ್ತರಣ ಕಾರ್ಯಕ್ರಮಕ್ಕೆ ವ್ಯವಸ್ಥಿತ ನಾಂದಿ ಹಾಕಲಾಯಿತು. ಕೆಲವು ಮುಂಚೂಣಿ ಕಾರ್ಯಕ್ಷೇತ್ರಗಳಲ್ಲಿ ಕಾರ್ಯಾರಂಭ ಮಾಡಿದ ಅನುಭವದ ಮೇಲೆ ರಾಷ್ಟ್ರೀಯ ವಿಸ್ತರಣ ಸೇವಾ ಕಾರ್ಯಾಚರಣೆ ಆ ವರ್ಷ ಅನುಷ್ಠಾನಕ್ಕೆ ಬಂತು. ಈ ಕಾರ್ಯವೇ ನಂತರ ಸಮಾಜ ವಿಕಾಸ (ಅಭಿವೃದ್ಧಿ) ಕಾರ್ಯಕ್ರಮವೆಂದು ಹೆಸರುಪಡೆದು ಮುಂದಿನ ಒಂದು ದಶಕದ ಸುಮಾರಿಗೆ ಇಡೀ ಭಾರತವನ್ನೇ ಆವರಿಸಿತು. ಸುಮಾರು 100 ಗ್ರಾಮಗಳನ್ನೊಳಗೊಂಡ 65–70 ಸಹಸ್ರ ಜನವಸತಿಯುಳ್ಳ ಒಂದು ಕಾರ್ಯಕ್ಷೇತ್ರ ಈ ಕಾರ್ಯಾಚರಣೆಯ ಒಂದು ಘಟಕವೆನಿಸಿತು. ಇದಕ್ಕೆ **ಅಭಿವೃದ್ಧಿ ಕ್ಷೇತ್ರ**ವೆಂದು ಹೆಸರು. ಪ್ರತಿ ಅಭಿವೃದ್ಧಿ ಕ್ಷೇತ್ರದ ಕಾರ್ಯನಿರ್ವಹಣೆಯ ಹೊಣೆಗಾರಿಕೆ ಕ್ಷೇತ್ರಾಧಿಕಾರಿಯದು. ಅಭಿವೃದ್ಧಿ ಕ್ಷೇತ್ರ ಮಟ್ಟದಲ್ಲಿ ಕೃಷಿ, ಪಶುಪಾಲನೆ, ಸಹಕಾರ, ಗ್ರಾಮೀಣ ಉದ್ಯೋಗ, ಸಮಾಜ ಶಿಕ್ಷಣ, ಲೋಕೋಪಯೋಗಿ ಇತ್ಯಾದಿ ಅಭಿವೃದ್ಧಿ ಕಾರ್ಯಗಳಲ್ಲಿ ನೆರವು ನೀಡಲು 8 ಜನ ವಿಸ್ತರ ಣಾಧಿಕಾರಿಗಳು, ಗ್ರಾಮಮಟ್ಟದಲ್ಲಿ ಪ್ರತಿ 6 ರಿಂದ 7 ಸಹಸ್ರ ಜನಸಂಖ್ಯೆಯನ್ನೊಳ ಗೊಂಡ 10 ಹಳ್ಳಿಗಳಿಗೆ ಒಬ್ಬನಂತೆ ವಿಸ್ತರಣಾ ಕೆಲಸಗಾರರು ಕಾರ್ಯ ನೆರವೇರಿಸುವ ವ್ಯವಸ್ಥೆ ಏರ್ಪಟ್ಟಿತು. ಪ್ರಾರಂಭದಲ್ಲಿ ಗ್ರಾಮಮಟ್ಟದ ಕಾರ್ಯಕರ್ತರು ವಿವಿಧೋದ್ದೇಶ ಗಳ ಕಾರ್ಯಕರ್ತರಾಗಿದ್ದರು. ವಿಸ್ತರಣಾಧಿಕಾರಿಗಳ ನೆರವು ಪಡೆದು ಗ್ರಾಮಾಭಿವೃದ್ಧಿಯ

ಎಲ್ಲ ಕಾರ್ಯಗಳಲ್ಲಿ ಇವರು ಭಾಗಿಯಾಗಬೇಕಿತ್ತು. ಗ್ರಾಮದ ಒಟ್ಟು ಅಭಿವೃದ್ಧಿ, ಈ ಸಮಾಜವಿಕಾಸ ಯೋಜನೆಯ ಕಾರ್ಯವಾಗಿತ್ತು. ಗ್ರಾಮಮಟ್ಟದ ಕಾರ್ಯಕರ್ತರು ಮಾಡುವ ಕಾರ್ಯಪದ್ಧತಿಯಲ್ಲಿ ದಿನಗಳುರುಳಿದಂತೆ ಅನೇಕ ಮಾರ್ಪಾಡುಗಳಾಗಿ ಒಂದು ಹಂತದಲ್ಲಿ ಶೇಕಡ 80 ರಷ್ಟು, ಇಂದು 100 ರಷ್ಟು ಕೃಷಿ ಅಭಿವೃದ್ಧಿ ಕಾರ್ಯವನ್ನೇ ಅವರು ಮಾಡುವ ಏರ್ಪಾಡಾಗಿದೆ. ಈ ಕಾರ್ಯಕರ್ತರಿಗೆ **ಗ್ರಾಮ ಸೇವಕ**ರೆಂದು ಅಭಿಧಾನ. ಕೃಷಿಯಲ್ಲಿ ಹೊಸಪದ್ಧತಿಗಳು ಮೈದಾಳಿ ಬರುವಂತೆ ಯತ್ನಿಸುವುದು ಈ ಗ್ರಾಮಮಟ್ಟದ ಕೃಷಿವಿಸ್ತರಣೆಯ ಕಾರ್ಯಕರ್ತರಿಗೆ ಒಪ್ಪಿಸಿಕೊಟ್ಟ ಕಾರ್ಯ. ರೈತರಿಗೆ ಅವರ ಹೊಲಮನೆಗಳಲ್ಲಿ ಅವರನ್ನು ಕಂಡು ತಿಳಿವಳಿಕೆಕೊಡುವ ಕಾರ್ಯದಲ್ಲಿ ಅವರು ತೊಡಗಿರುತ್ತಾರೆ. ಗ್ರಾಮೀಣ ಜನತೆಗೆ ಅನುದಿನದ ಜೀವನಕ್ಕೆ ಸಂಬಂಧಪಟ್ಟ ವಿಷಯಗಳ ಬಗೆಗೆ ಶಿಕ್ಷಣ ನೀಡುವುದೇ ವಿಸ್ತರಣೆ ಕೆಲಸಗಾರರ ಪ್ರಾಮುಖ್ಯ ಕಾರ್ಯವು. ಹೊಲಮನೆಗಳ ನಿರ್ವಹಣೆಗೆ ಸಂಬಂಧಪಟ್ಟ ಹಲವಾರು ವಿಷಯಗಳಲ್ಲಿ ಸಂಶೋಧನೆಯ ಫಲವಾಗಿ ದೊರೆತ ಶಿಫಾರಸ್ಸುಗಳು ಲಭ್ಯವಿದೆ. ಇವುಗಳನ್ನು ಅಳವಡಿಸಿಕೊಂಡು ಅಧಿಕ ಉತ್ಪಾದನೆಗೈದು ರೈತರು ಗೃಹಸ್ವಾಸ್ಥ್ಯ ಪಡೆಯುವಂತೆ ವಿಸ್ತರಣ ಕಾರ್ಯಕರ್ತರು ನೆರವು ನೀಡುತ್ತಾರೆ. ಗ್ರಾಮೀಣ ಜನತೆಯ ದೃಷ್ಟಿಕೋನದಲ್ಲಿ ಬದಲಾವಣೆಮಾಡಿ, ಅವರ ಹೊಲಮನೆಗಳನ್ನು ಸಂಪತ್ತು ಸೌಖ್ಯಗಳ ಆಗರಗಳನ್ನಾಗಿರಿಸಿ, ಗ್ರಾಮಜೀವನ ತುಂಬುಜೀವನವಾಗಿ ಬೆಳೆದುಬರುವಂತೆ ಗ್ರಾಮಮಟ್ಟದ ವಿಸ್ತರಣ ಕೆಲಸಗಾರರು ಯತ್ನಿಸುತ್ತಾರೆ. ವಿಜ್ಞಾನ ದಿನದಿನಕ್ಕೂ ವಿಕಾಸಗೊಂಡು ಜೀವನದ ವಿವಿಧ ರಂಗಗಳ ಬಗೆಗೆ ವಿಧವಿಧವಾದ ಕೊಡಿಗೆ ನೀಡಿದೆ. ಈ ತಾಂತ್ರಿಕತೆಗಳನ್ನು ಬಳಸಿಕೊಂಡಾಗ ಜನತೆಯ ಬಾಳು ಬಂಗಾರವಾಗಬಲ್ಲದು. ಈ ಮಹತ್ತರವಾದ ಸಾಧನೆಯ ಸಿದ್ಧಿಗಾಗಿ ಸಾವಿರಾರು ಜನ ವಿಸ್ತರಣ ಕಾರ್ಯಕರ್ತರು ಇಂದು ಕಾರ್ಯತತ್ಪರರಾಗಿದ್ದಾರೆ.

ಸಾಮಾನ್ಯ ಶಿಕ್ಷಣ

ಜನತೆ ಮಾನವರಾಗಿ ಬೆಳೆದು ಬದುಕಲು ಪಡೆಯುವ ಅರಿವೇ ಶಿಕ್ಷಣವು. ಜನರ ನೀತಿ, ನಡೆವಳಿಕೆ, ಚಟುವಟಿಕೆ ಮತ್ತು ಮನೋಭಿಪ್ರಾಯಗಳಲ್ಲಿ ಅಪೇಕ್ಷಣೀಯ ಬದಲಾವಣೆ ಮಾಡುವುದೇ ಶಿಕ್ಷಣದ ಕಾರ್ಯ. ಜ್ಞಾನದಲ್ಲಿ, ಚಾತುರ್ಯದಲ್ಲಿ ಮತ್ತು ಮನೋಭಿಪ್ರಾಯದಲ್ಲಿ ಈ ಬದಲಾವಣೆಗಳು ನಡೆಯಬೇಕು.

ಕೃಷಿ ವಿಸ್ತರಣ ಶಿಕ್ಷಣ

ಕೃಷಿ ವಿಸ್ತರಣ ಶಿಕ್ಷಣ ಒಂದು ವಿಶಿಷ್ಟ ಶಿಕ್ಷಣ. ಇದರ ಸ್ವರೂಪ ಸಾಮಾನ್ಯ ಅಥವಾ ಸಾಂಪ್ರದಾಯಕ ಶಿಕ್ಷಣಕ್ಕಿಂತ ಬೇರೆಯೇ. ಶಾಲೆಯ ಹೊರಗಿನ ಪರಿಸರದಲ್ಲಿ ಗ್ರಾಮೀಣ ಜನತೆ, ತಾವು ತೊಡಗಿದ ವಿವಿಧ ಕಾರ್ಯಗಳಲ್ಲಿ ಜ್ಞಾನ ಹಾಗೂ ಕುಶಲತೆ -

ಗಳನ್ನು ಮಾಡುತ್ತಲೇ ಕಲಿಯುವ ವ್ಯವಸ್ಥೆ ಇದು. ಅಂತೆಯೇ ಇದನ್ನು ಆಧುನಿಕ ಕೃಷಿ ವಿಜ್ಞಾನದ ಬಗ್ಗೆ ಸಮರ್ಪಕ ಮಾಹಿತಿಯನ್ನು ಕೃಷಿಕರಿಗೆ ಕೊಡುವ ಮತ್ತು ಅವರು ಪ್ರತ್ಯಕ್ಷ ಅನುಭವದಿಂದ ಕಲಿಯುವ (ಮಾಡುತ್ತ ಕಲಿಯುವ) ನಿರಂತರವಾದ ಅನೌಪಚಾರಿಕ ಶಿಕ್ಷಣ ಪದ್ಧತಿಯೆಂದು ಪರ್ಯಾಯವಾಗಿ ಹೇಳಬಹುದು. **ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ರೈತರಿಗೆ, ಗೃಹಿಣಿಯರಿಗೆ, ಯುವಕಯುವತಿಯರಿಗೆ, ಶಾಲೆಕಾಲೇಜುಗಳ ಹೊರಗಿನ ಪರಿಸರದಲ್ಲಿ ಸ್ವಯಂಪ್ರೇರಣೆಯಿಂದ ಕಲಿಯುವ ಏರ್ಪಾಡಿರುವ, ಅನೌಪಚಾರಿಕ, ಸಮಸ್ಯೆ ನಿವಾರಣೆಗೆ ಪ್ರಾಮುಖ್ಯತೆ ಈಯುವ, ಗ್ರಾಮೀಣ ಮುಖಂಡರ ಮೂಲಕ ನೀಡಲಾಗುವ ಬಹುಮುಖವಾದ ತಿಳಿವಳಿಕೆಯೇ ಕೃಷಿ ವಿಸ್ತರಣ ಶಿಕ್ಷಣವು.**

ಕೃಷಿ ವಿಸ್ತರಣ ಶಿಕ್ಷಣದ ಉದ್ದೇಶ

'ಒಬ್ಬ ಮನುಷ್ಯನಿಗೆ ಒಂದು ಮೀನು ಕೊಟ್ಟರೆ, ಅವನಿಗೆ ಒಂದು ದಿನದ ಆಹಾರ ಕೊಟ್ಟಂತೆ; ಅದೇ ಮೀನು ಹಿಡಿಯುವುದನ್ನು ಅವನಿಗೆ ಕಲಿಸಿದರೆ ಜೀವನ ಪರ್ಯಂತ ಅವನಿಗೆ ಆಹಾರ ಒದಗಿಸುವ ಮಾರ್ಗಮಾಡಿಕೊಟ್ಟಂತಾಗುತ್ತದೆ'.

ಇದು ಚೀನ ದೇಶದ ಒಂದು ನಾಡ ಗಾದೆ. ಕೃಷಿ ವಿಸ್ತರಣೆಯ ಉದ್ದೇಶವು ಸಹ ಇದೇ ಆಗಿರುತ್ತದೆ. ರೈತರಿಗೆ ಪ್ರತ್ಯೇಕ ಶಿಕ್ಷಣದ ಮೂಲಕ ಸತತವಾಗಿ ಕೃಷಿ ಅಭಿವೃದ್ಧಿ ಮಾಡುವುದೇ ಇದರ ಘನೋದ್ದೇಶ.

ಸಾಂಪ್ರದಾಯಿಕ ಶಿಕ್ಷಣ ಮತ್ತು ಕೃಷಿ ವಿಸ್ತರಣ ಶಿಕ್ಷಣ

ಕೃಷಿ ವಿಸ್ತರಣ ಶಿಕ್ಷಣವು ತಾನು ಸಾಧಿಸಲಿರುವ ಸಾಧನೆಯನ್ನಾಧರಿಸಿ ಸಾಂಪ್ರದಾಯಿಕ ಶಿಕ್ಷಣಕ್ಕಿಂತ ಹಲವಾರು ರೀತಿಯಲ್ಲಿ ಭಿನ್ನವಾಗಿದೆ. ಆ ಕೆಲವು ಅಂಶಗಳು ಇಂತಿವೆ:

	ಸಾಂಪ್ರದಾಯಿಕ ಶಿಕ್ಷಣದಲ್ಲಿ–	**ಕೃಷಿ ವಿಸ್ತರಣ ಶಿಕ್ಷಣದಲ್ಲಿ–**
(1)	ಶಿಕ್ಷಕ ಮೊದಲಿಗೆ ತಾತ್ವಿಕ ವಿಷಯ ತಿಳಿಸಿ (ಅವಶ್ಯಬಿದ್ದಲ್ಲಿ) ನಂತರ ಪ್ರಯೋಗಿಕ ವಿಷಯದ ತಿಳಿವಳಿಕೆ ನೀಡುತ್ತಾನೆ.	ವಿಸ್ತರಣ ಕಾರ್ಯಕರ್ತನು ಮೊದಲು ವಿಷಯವನ್ನು ಪ್ರಾಯೋಗಿಕವಾಗಿ ಕಲಿಸಿ ನಂತರ ತಾತ್ವಿಕ ವಿಷಯ ತಿಳಿಸುತ್ತಾನೆ.
(2)	ಪಠ್ಯಕ್ರಮ ನಿಗದಿಯಾಗಿರುತ್ತದೆ.	ಪಠ್ಯಕ್ರಮ ಇರುವುದೇ ಇಲ್ಲ ಮತ್ತು ಕಲಿಯುವ ವಿಷಯಗಳ ಕಟ್ಟುನಿಟ್ಟುಗಳಿರುವುದಿಲ್ಲ.

(3) ಶಿಕ್ಷಕನು ಹೆಚ್ಚು ಅಧಿಕಾರ ಹೊಂದಿರುತ್ತಾನೆ.	ಕಲಿಯುವವನಿಗೆ ಹೆಚ್ಚು ಅಧಿಕಾರವಿರುತ್ತದೆ.
(4) ವಿದ್ಯಾರ್ಥಿಗಳು ಪೂರ್ವಯೋಜಿತ ನಿರ್ದಿಷ್ಟವಾದ ವಿಷಯಗಳ ಅಭ್ಯಾಸ ಮಾಡುತ್ತಾರೆ.	ಪೂರ್ವಯೋಜಿತ ವಿಷಯಗಳೇ ಇರುವುದಿಲ್ಲ. ಕಲಿಯಲು ಬಂದವರ ಸಮಸ್ಯೆಗಳೇ ಶಿಕ್ಷಣದ ವಿಷಯಗಳು.
(5) ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗಬೇಕು.	ತರಗತಿಗಳೇ ಇರುವುದಿಲ್ಲ. ಕೊಡುವ ಶಿಕ್ಷಣದಲ್ಲಿ ಆಸಕ್ತಿ ಇರುವ ರೈತರೇ ವಿದ್ಯಾರ್ಥಿಗಳು.
(6) ಕಲಿಸುವಿಕೆಯು ಯಾವಾಗಲೂ ನಾಲ್ಕು ಗೋಡೆಗಳ ಮಧ್ಯೆ ನಡೆಯುತ್ತದೆ.	ಬಹುಭಾಗ ಕಲಿಸುವಿಕೆಯು ರೈತರ ಹೊಲ ಮನೆಗಳಲ್ಲಿ ನಡೆಯುತ್ತದೆ.
(7) ಕಲಿಯುವಿಕೆಯ ಕೊನೆಯಲ್ಲಿ ಪದವಿ ಅಥವಾ ಪ್ರಶಸ್ತಿಗಳನ್ನು ದಯಪಾಲಿಸುವ ವ್ಯವಸ್ಥೆ ಇರುತ್ತವೆ.	ಯಾವ ಪದವಿ ಅಥವಾ ಪ್ರಶಸ್ತಿಪತ್ರಗಳನ್ನು ಕೊಡಲಾಗುವುದಿಲ್ಲ.
(8) ವಿದ್ಯಾರ್ಥಿಗಳ ವಯಸ್ಸು ಮತ್ತು ಶಿಕ್ಷಣಮಟ್ಟದಲ್ಲಿ ಸಾಮ್ಯತೆ ಇರುತ್ತದೆ.	ಕಲಿಯುವವರ ವಯಸ್ಸು ಮತ್ತು ಶಿಕ್ಷಣ ಮಟ್ಟಗಳಲ್ಲಿ ಸಾಮ್ಯತೆ ಇರುವುದಿಲ್ಲ. ಕಲಿಯುವವರು ಯಾವುದೇ ವಯಸ್ಸಿನವರಿರಬಹುದು. ಅವರ ಶಿಕ್ಷಣಮಟ್ಟ ಕೂಡ ವಿಧವಿಧವಾಗಿರಬಹುದು.

ಕೃಷಿ ವಿಸ್ತರಣ ಶಿಕ್ಷಣ ನಿರಂತರ ಶಿಕ್ಷಣ ವ್ಯವಸ್ಥೆ ಇಲ್ಲವೆ ಕ್ರಮ. ಇದಕ್ಕೆ ಅಂತ್ಯ ಇಲ್ಲ. ಅಂತೆಯೇ ಇದು ಹರಿಗಡಿಯದ ಶಿಕ್ಷಣ, ಸದಾ ಪ್ರವಹಿಸುತ್ತಿರುವ ಹೊಳೆಯಂತೆ. ಕೃಷಿಯಲ್ಲಿ ದಿನದಿನಕ್ಕೆ ಹೊಸ ಹೊಸ ಸಮಸ್ಯೆಗಳು ಉದ್ಭವಿಸುತ್ತವೆ. ಅವುಗಳಿಗೆ ನೀಡಲಾಗುವ ಪರಿಹಾರೋಪಾಯಗಳು ಬದಲಾಗುತ್ತಿರುತ್ತವೆ. ರೈತರ ವಿಚಾರಗಳೂ ಅಪೇಕ್ಷೆಗಳೂ ಸಹ ಕಾಲಕಾಲಕ್ಕೆ ಬದಲಾಗುತ್ತಿರುತ್ತವೆ. ಕೃಷಿ ಸಂಶೋಧನೆ ಎಂದಿನವರೆಗೆ ನಿರಂತರವಾಗಿ ನಡೆಯುತ್ತಿರುತ್ತವೆಯೋ ಅಂದಿನವರೆಗೆ ಕೃಷಿ ವಿಸ್ತರಣೆ ಶಿಕ್ಷಣ ಕಾರ್ಯವೂ ನಿರಂತರವಾಗಿ ಸಾಗುತ್ತಲೇ ಇರುತ್ತದೆ. ಕೃಷಿ ವಿಸ್ತರಣ ಶಿಕ್ಷಣವು ಜನರ ಆರ್ಥಿಕ ಮತ್ತು ಸಾಮಾಜಿಕ ಉನ್ನತಿಗೆ ಸತತವಾಗಿ ಸಹಾಯಕವಾಗುತ್ತದೆ.

ಪ್ರೌಢ ಶಿಕ್ಷಣ ಮೂಲತತ್ವಗಳು ಹಾಗೂ ಕೃಷಿವಿಸ್ತರಣ ಶಿಕ್ಷಣ

ಸಾಮಾನ್ಯವಾಗಿ ಕೃಷಿ ವಿಸ್ತರಣ ಶಿಕ್ಷಣವು ಪ್ರೌಢ ರೈತರಿಗೆ ಮತ್ತು ರೈತ ಮಹಿಳೆಯರಿಗೆ ಶಿಕ್ಷಣ ಕೊಡುವುದರಿಂದ, ಪ್ರೌಢ ಶಿಕ್ಷಣ ಮೂಲತತ್ವಗಳನ್ನು ಕೃಷಿ ವಿಸ್ತರಣ ಶಿಕ್ಷಕ ಅರಿತಿರುವುದು ಅಗತ್ಯ. ಅವು ಈ ಕೆಳಕಂಡಂತಿವೆ:

(1) ಹೆಚ್ಚು ವಿದ್ಯಾರ್ಜನೆ ದೊರಕಿಸಿಕೊಳ್ಳಬೇಕೆಂಬ ಇಚ್ಛೆ ಇದ್ದಾಗ ಪ್ರೌಢರು ಬೇಗ ಕಲಿಯುತ್ತಾರೆ:

ರೈತರಾಗಲಿ ಅಥವಾ ಯುವಕರಾಗಲಿ, ವಿಸ್ತರಣ ಕಾರ್ಯಕರ್ತರನ್ನು ತಮಗೆ ಇಷ್ಟವಾದ ಜ್ಞಾನ ಸಂಪಾದನೆಗಾಗಿ ಭೇಟಿಯಾದಾಗ ಅವರಿಗೆ ತಿಳಿಯಪಡಿಸುವುದು ಸುಲಭ. ಏಕೆಂದರೆ ವಿಷಯ ತಿಳಿದುಕೊಳ್ಳಬೇಕು ಮತ್ತು ಜ್ಞಾನವೃದ್ಧಿ ಮಾಡಿಕೊಳ್ಳ ಬೇಕೆಂಬ ಪ್ರಬಲವಾದ ಅಪೇಕ್ಷೆ ಆಗ ಅವರಲ್ಲಿರುತ್ತದೆ. ಕೆಲವರಲ್ಲಿ ಜ್ಞಾನ ಸಂಪಾದನೆಯ ಇಚ್ಛೆ ಪ್ರಬಲವಾಗಿರುವುದಿಲ್ಲ. ಅಂಥವರಿಗೆ ಕಲಿಸುವುದು ಕಠಿಣವಾಗುತ್ತದೆ.

(2) ಉತ್ತಮ ಗುರಿ ಸಾಧನೆ ಇದ್ದಾಗ ಪ್ರೌಢರು ಕಾರ್ಯಕ್ಷಮವಾಗಿ ಕಲಿಯುತ್ತಾರೆ:

ಉತ್ತಮ ಗುರಿ ಇಲ್ಲದೆ ಕಲಿಯುವುದು ಕಷ್ಟಕರ. ಕಲಿಯುವವನ ಅವಶ್ಯಕತೆಗಳಿಗನುಸಾರವಾಗಿ ಪ್ರಯತ್ನಿಸಿದರೆ ಮಾತ್ರ ಕಲಿಯುವುದು ಸಾಧ್ಯ. ಆದ್ದರಿಂದ ಇಷ್ಟ ಗುರಿಗಳನ್ನಿಟ್ಟುಕೊಂಡರೆ ಕಲಿಯಲು ಸುಲಭವಾಗುತ್ತದೆ. ಗುರಿಗಳು ಬಹಳವಾಗಿರಬಾರದು. ಕೆಲವೇ ಗುರಿಗಳಿದ್ದರೆ ಸಾಧನೆಗೆ ಅನುಕೂಲವಾಗುವುದು.

(3) ಹೆಚ್ಚು ಪ್ರಯತ್ನ ಮಾಡಿದಾಗ ಪ್ರೌಢರು ಚೆನ್ನಾಗಿ ಕಲಿಯುತ್ತಾರೆ:

ಪ್ರಯತ್ನದಂತೆ ಫಲ. ಪ್ರತಿಯೊಬ್ಬರು ಪ್ರಯತ್ನಶೀಲರಾಗಬೇಕು. ಆಗ ಮಾತ್ರ ಪ್ರಗತಿ ಸಾಧ್ಯ. ತನಗಾಗಿ ಬೇರೆಯವರು ಪ್ರಯತ್ನಪಟ್ಟರೆ ತನ್ನ ಗುರಿಸಾಧನೆ ಸಾಧ್ಯವಿಲ್ಲ. ಕಲಿಯುವುದು ವ್ಯಕ್ತಿಗತವಾದುದು. ಆದ್ದರಿಂದ ಪ್ರತಿಯೊಬ್ಬರು ಪ್ರಯತ್ನಿಸುವುದನ್ನು ರೂಢಿಮಾಡಿಕೊಳ್ಳಬೇಕು.

(4) ತಾವು ಕಲಿತುದರಿಂದ ತೃಪ್ತಿಗೊಳ್ಳುವುದಾದರೆ, ಪ್ರೌಢರು ಚೆನ್ನಾಗಿ ಕಲಿಯುತ್ತಾರೆ:

ಪ್ರೌಢರು ಯಾವಾಗಲೂ ಯಶಸ್ಸನ್ನು ಬಯಸುತ್ತಾರೆ; ತಮ್ಮ ಆಶಾಕಿರಣಗಳನ್ನು ತಡೆಗಟ್ಟುವ ಯಾವುದೇ ಪರದೆಯನ್ನು ಸರಿಸಲು ಪ್ರಯತ್ನಿಸುತ್ತಾರೆ. ಅವರು ಕಲಿತುದಕ್ಕೆ ಬಹುಮಾನ ದೊರೆಯುವುದಾದರೆ, ಅವರ ಕಲಿಯುವಿಕೆಗೆ ಸತ್ಕಾರ ದೊರೆಯುವುದಾದರೆ, ಅವರು ಇನ್ನೂ ಉತ್ಸಾಹದಿಂದ ಕಲಿಯುತ್ತಾರೆ.

ಈ ಮೂಲತತ್ವಗಳನ್ನು ಆಧರಿಸಿ ಶಿಕ್ಷಣ ಕೊಟ್ಟರೆ, ವಿಸ್ತರಣ ಕಾರ್ಯಕರ್ತನು ರೈತರಲ್ಲಿ ಅಪೇಕ್ಷಿತ ಬದಲಾವಣೆಗಳನ್ನು ಮಾಡಬಹುದು.

ಕಲಿಸುವಿಕೆಯಲ್ಲಿ ಹಂತಗಳು

ವಿಸ್ತರಣ ಕಾರ್ಯಕರ್ತನಿಗೆ ಪ್ರೌಢ ಶಿಕ್ಷಣ ಮೂಲತತ್ವಗಳ ಜ್ಞಾನ ಎಷ್ಟು ಮುಖ್ಯವೋ, ಕಲಿಸುವಿಕೆಯಲ್ಲಿಯ ಹಂತಗಳೂ ಸಹ ಅಷ್ಟೇ ಮುಖ್ಯ. ವಿಸ್ತರಣ ಕಾರ್ಯಕರ್ತನು ರೈತರಿಗೆ ಶಿಕ್ಷಣ ಕೊಡುವಾಗ, ಏನನ್ನಾದರೂ ಕಲಿಸಿಕೊಡುವಾಗ ಹಲವು ಹಂತಗಳನ್ನು ಅನುಸರಿಸಬೇಕಾಗುವುದು. ಪರಿಣಾಮಕಾರಿ ಕಲಿಸುವಿಕೆಯಲ್ಲಿ ಆರು ಹಂತಗಳಿವೆ. ಅವುಗಳೆಂದರೆ:

(1) ಕಲಿಯುವವನ ಗಮನಸೆಳೆಯುವಿಕೆ:

ಸಾಮಾನ್ಯವಾಗಿ ಎಲ್ಲ ರೈತರು ಕೃಷಿಯಲ್ಲಿ ಹೊಸ ಮಾರ್ಪಾಡುಗಳ ಬಗ್ಗೆ ಮತ್ತು ಸಂಶೋಧನೆಯಿಂದ ಬಂದ ಜ್ಞಾನದ ಬಗ್ಗೆ ತಿಳಿವಳಿಕೆ ಹೊಂದಿರುವುದಿಲ್ಲ. ವಿಸ್ತರಣ ಶಿಕ್ಷಣದಲ್ಲಿ ಮೊಟ್ಟಮೊದಲನೇ ಹಂತವೆಂದರೆ ಉದ್ದೇಶಿತ ಬದಲಾವಣೆ ಯನ್ನು ಸಂಬಂಧಪಟ್ಟವರ ಗಮನಕ್ಕೆ ತರುವುದು. ಉದಾಹರಣೆಗೆ, ಹೈಬ್ರಿಡ್ ಮುಸುಕಿನ ಜೋಳದ ಬೆಳೆಯ ಬಗ್ಗೆ ರೈತರಿಗೆ ಶಿಕ್ಷಣ ಕೊಡಬೇಕಾದರೆ, ಮೊಟ್ಟಮೊದಲನೆಯ ದಾಗಿ ಈ ಬೆಳೆಯ ವಿಷಯವನ್ನು ರೈತರ ಗಮನಕ್ಕೆ ತರಬೇಕು. ಈ ಕಾರ್ಯಸಾಧನೆಗೆ ಸೂಕ್ತ ವಿಸ್ತರಣ ಪದ್ಧತಿಗಳನ್ನು ಉಪಯೋಗಿಸಬೇಕು.


(2) ಕಲಿಯುವವನಲ್ಲಿ ಆಸಕ್ತಿಯನ್ನುಂಟುಮಾಡುವಿಕೆ:

ವಿಷಯವನ್ನು ಕಲಿಯುವವನ ಗಮನಕ್ಕೆ ತಂದಮೇಲೆ ಅದರಲ್ಲಿ ಅವನಿಗೆ ಆಸಕ್ತಿ ಯುಂಟಾಗುವಂತೆ ಮಾಡಬೇಕು. ಉದಾಹರಣೆಗೆ, ಹೈಬ್ರಿಡ್ ಮುಸುಕಿನ ಜೋಳದ ಬೆಳೆಯ ವಿಷಯವನ್ನು ರೈತರ ಗಮನಕ್ಕೆ ತಂದಮೇಲೆ ಅದರಲ್ಲಿ ಆಸಕ್ತಿಯುಂಟಾಗುವಂತೆ ಹೆಚ್ಚು ಇಳುವರಿ ನೀಡುವ ತಳಿಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಅವರಿಗೆ ವಿವಿಧ ಕೃಷಿ ವಿಸ್ತರಣ ಶಿಕ್ಷಣ ಪದ್ಧತಿಗಳ ಮೂಲಕ ಕೊಡಬೇಕು.

(3) ಕಲಿಯುವವನಲ್ಲಿ ಆಕಾಂಕ್ಷೆಯನ್ನುಂಟುಮಾಡುವಿಕೆ :

ಒಂದು ಹೊಸ ವಿಷಯದ ಬಗ್ಗೆ ಕಲಿಯುವವನಲ್ಲಿ ಆಸಕ್ತಿಯುಂಟಾದಮೇಲೆ, ಆ ವಿಷಯವನ್ನು ತನ್ನ ವಾತಾವರಣಕ್ಕೆ ಅಳವಡಿಸಿಕೊಳ್ಳುವ ಆಕಾಂಕ್ಷೆಯನ್ನು ಅವನಲ್ಲಿ ಉಂಟುಮಾಡಬೇಕು. ಹೊಸ ಪದ್ಧತಿಯನ್ನು ತನ್ನ ವ್ಯವಸಾಯದಲ್ಲಿ ಅಳವಡಿಸುವುದ ರಿಂದ ಹೇಗೆ ವ್ಯವಸಾಯ ಅಭಿವೃದ್ಧಿಯಾಗುತ್ತದೆಂಬುದನ್ನು ತಿಳಿಸಿ ತನ್ಮೂಲಕ ಅವನಲ್ಲಿ ಅದನ್ನು ಸಾಧಿಸುವ ಆಕಾಂಕ್ಷೆಯನ್ನುಂಟುಮಾಡಬಹುದು. ಉದಾಹರಣೆಗೆ, ಹೆಚ್ಚು ಇಳುವರಿ ನೀಡುವ ತಳಿಯ ಬಗ್ಗೆ ಮಾಹಿತಿ ಪಡೆದ ರೈತನಿಗೆ ಅದನ್ನು ಬೆಳೆದು

ಪ್ರಯೋಜನ ಹೊಂದಿದ ಹಲವಾರು ರೈತರ ಸಾಧನೆ ವಿವರಿಸಿ, ಹಲವು ಉಚಿತ ವಿಸ್ತರಣ ಪದ್ಧತಿಗಳನ್ನು ಉಪಯೋಗಿಸಿ ಅವನನ್ನು ಆ ತಳಿ ಬೆಳೆಯುವ ಸ್ಥಿತಿಗೆ ತರಬೇಕು.



ಚಿತ್ರ 1 : ಕಲಿಸುವಿಕೆಯಲ್ಲಿ ಹಂತಗಳು.

(4) **ಕಲಿಯುವವನ ಮನವೊಪ್ಪಿಸುವಿಕೆ:**

ಕಲಿಯುವವನಲ್ಲಿ ಕಲಿಸುವ ವಿಷಯದ ಬಗ್ಗೆ ನಿಶ್ಚಿತಾಭಿಪ್ರಾಯವನ್ನುಂಟು ಮಾಡುವುದು ಶಿಕ್ಷಕನ ಅತಿ ಮುಖ್ಯವಾದ ಕೆಲಸ. ಹೊಸ ಪದ್ಧತಿಯ ಬಗ್ಗೆ ರೈತನ ಮನವೊಪ್ಪಿಸುವುದು ವಿಸ್ತರಣ ಕಾರ್ಯಕರ್ತನ ಕರ್ತವ್ಯವಾಗಿದೆ. ಹೊಸಪದ್ಧತಿಯ ಬಗ್ಗೆ ಮನವೊಪ್ಪಿದ ಮೇಲೆ ಅದನ್ನು ಕಾರ್ಯರೂಪಕ್ಕಿಳಿಸುವುದು ಸುಲಭದ ಕೆಲಸ. ಉದಾಹರಣೆಗೆ ಹೈಬ್ರಿಡ್ ಮುಸುಕಿನ ತಳಿಯ ಬಗ್ಗೆ ಮಾಹಿತಿ ಪಡೆದು, ರೈತನು ಅದನ್ನು

ತಾನೂ ಬೆಳೆಯಬೇಕೆಂದು ನಿರ್ಧಾರಕ್ಕೆ ಬಂದರೆ ಅದನ್ನು ಅವನೂ ಬೆಳೆಯಲು ಸಾಧ್ಯವೆಂಬ ಬಗ್ಗೆ ಖಚಿತಮಾಡಿಕೊಡಬೇಕು. ಸಮೀಪದಲ್ಲಿನ ಈ ಬೆಳೆ ಬೆಳೆದ ರೈತರ ಹೊಲಗಳಿಗೆ ಸಕಾಲದಲ್ಲಿ ಭೆಟ್ಟಿ ಏರ್ಪಡಿಸಿ, ಅವರಿಂದಲೇ ಬೆಳೆ ಬೆಳೆಯುವಿಕೆಯ ವಿವರ ಹೇಳಿಸಿ, ಅವರಿಗೆ ಸಾಧ್ಯವಾದುದು ಇವನಿಗೂ ಸಾಧ್ಯವೆಂಬುದನ್ನು ಮನಗಾಣಿಸಿ ಕೊಡಬೇಕು.

(5) ಕಲಿತ ವಿಷಯವನ್ನು ಕಾರ್ಯರೂಪಕ್ಕೆ ತರುವಂತೆ ಮಾಡುವಿಕೆ:

ಇದು ವಿಸ್ತರಣ ಶಿಕ್ಷಣ ಕಾರ್ಯಕ್ರಮದಲ್ಲಿ ಅತಿ ಮಹತ್ವವಾದ ಹಂತ. ಏಕೆಂದರೆ ಕಲಿತ ವಿಷಯವನ್ನು ಕಾರ್ಯರೂಪಕ್ಕೆ ತರದಿದ್ದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಯಾವುದೊಂದು ವಿಷಯದ ಬಗ್ಗೆ ರೈತನಿಗೆ ಮನವರಿಕೆಯಾಗಿ, ಮನವೊಪ್ಪಿದ ಮೇಲೆ ಅವನು ಆ ವಿಷಯವನ್ನು ಪ್ರಾರಂಭದಲ್ಲಿ ಸ್ವಲ್ಪವಾಗಿಯಾದರೂ ಕಾರ್ಯರೂಪಕ್ಕೆ ತರಬೇಕು. ಉದಾಹರಣೆಗೆ, ಹೈಬ್ರಿಡ್ ಮುಸುಕಿನ ತಳಿಯೊಂದನ್ನು ತಾನು ಬೆಳೆಯಬಲ್ಲನೆಂದು ಖಚಿತಗೊಂಡ ರೈತನಿಗೆ ಅದನ್ನು ಅಲ್ಪ ಕ್ಷೇತ್ರದಲ್ಲಿ ಹಾಕಿ ಬೆಳೆದು ಅವನೇ ಮನಗಾಣಲು ಅವಕಾಶವೇರ್ಪಡಿಸಿ, ನೆರವೀಯಬೇಕು.

(6) ಕಲಿಯುವವನಿಗೆ ಸಂತೃಪ್ತಿಯನ್ನುಂಟುಮಾಡುವಿಕೆ:


ಇದು ಕಲಿಸುವಿಕೆಯಲ್ಲಿ ಇಲ್ಲವೆ ವಿಸ್ತರಣ ಶಿಕ್ಷಣ ಕ್ರಮದಲ್ಲಿ ಕೊನೆಯ ಹಂತ. ಮಾನವನಿಗೆ ಸಂತೃಪ್ತಿ ಅತಿ ಮುಖ್ಯವಾದ ಅಂಶ. ಒಂದು ಕಾರ್ಯ ಮುಗಿದ ಮೇಲೆ ಅದರಲ್ಲಿ ಅವನಿಗೆ ತೃಪ್ತಿ ಸಿಕ್ಕಬೇಕು. ಆಗಲೇ ಅವನು ಕಲಿತುದಕ್ಕೆ ಸಾರ್ಥಕತೆ. ವಿಸ್ತರಣ ಶಿಕ್ಷಣದಲ್ಲೂ ಅಷ್ಟೆ! ವಿಸ್ತರಣ ಕಾರ್ಯಕರ್ತನು ಕಲಿಸಿದ ಹೊಸ ಪದ್ಧತಿಯನ್ನು ಅನುಸರಿಸುವುದರಿಂದ ರೈತನಿಗೆ ಸಂತೃಪ್ತಿ ಸಿಗಬೇಕು. ಉದಾಹರಣೆಗೆ, ಪ್ರಾಯೋಗಿಕವಾಗಿ ಹೈಬ್ರಿಡ್ ಮುಸುಕಿನ ಜೋಳದ ತಳಿಯೊಂದನ್ನು ಬೆಳೆದ ರೈತನಿಗೆ ಅಧಿಕ ಇಳುವರಿ ದೊರೆತು, ಅದರಿಂದ ಅಧಿಕ ಆದಾಯ ಬಂದಾಗ ಅವನಲ್ಲಿ ಸಂತೃಪ್ತಿ ಮೂಡುತ್ತದೆ.

ಈ ಆರು ಹಂತಗಳು ವಿಸ್ತರಣ ಶಿಕ್ಷಣ ಕ್ರಮದಲ್ಲಿ ಬಹಳ ಮುಖ್ಯ. ಪ್ರತಿಯೊಬ್ಬ ವಿಸ್ತರಣ ಕಾರ್ಯಕರ್ತನೂ ಇವುಗಳನ್ನು ಗಮನದಲ್ಲಿಟ್ಟುಕೊಂಡಿರಬೇಕು. ಯಾವ ಯಾವ ಹಂತದಲ್ಲಿ ಯಾವ ಯಾವ ವಿಸ್ತರಣ ಶಿಕ್ಷಣ ಪದ್ಧತಿಗಳನ್ನು ಹೇಗೆ ಹೊಂದಿಸಿಕೊಂಡು ಬಳಸಬೇಕೆಂಬ ಜ್ಞಾನವೂ ಸಹ ವಿಸ್ತರಣ ಕಾರ್ಯಕರ್ತನಿಗೆ ಅತಿ ಮುಖ್ಯ.

ಜ್ಞಾನಾರ್ಜನೆ (ಕಲಿಯುವ) ಸನ್ನಿವೇಶ

ವಿಸ್ತರಣ ಕಾರ್ಯಕರ್ತ ಒಬ್ಬ ಶಿಕ್ಷಕ. ಏಕೆಂದರೆ ಈತನು ರೈತರಿಗೆ ಕೃಷಿಯಲ್ಲಿ ಹೊಸ ಪದ್ಧತಿಗಳ ವಿವಿಧ ಕ್ರಮಗಳ ಬಗ್ಗೆ ಶಿಕ್ಷಣ ಕೊಡುತ್ತಾನೆ. ಆದ್ದರಿಂದ ಬೇರೆ ಶಿಕ್ಷಕರಂತೆ ಈತನೂ ಸಹ ಜ್ಞಾನಾರ್ಜನೆ ಸನ್ನಿವೇಶವನ್ನು ಚೆನ್ನಾಗಿ ಅರಿತಿರಬೇಕು.

ಶಿಕ್ಷಕ, ಕಲಿಯುವವನ, ವಿಷಯ, ಶಿಕ್ಷಣ ಸಾಧನ, ಭೌತಿಕ ಪರಿಸರ ಮತ್ತು ಶಿಕ್ಷಣಾರ್ಥಿ ಈ ಮೂಲಾಂಶಗಳ ಸಮರ್ಪಕ ಸಮ್ಮಿಳನವೇ ಜ್ಞಾನಾರ್ಜನೆ (ಶಿಕ್ಷಣ) ಸನ್ನಿವೇಶ. ಜ್ಞಾನಾರ್ಜನೆಯ ಸನ್ನಿವೇಶವನ್ನು ಒಂದು ಆಕೃತಿಯ ರೂಪದಲ್ಲಿ ಚಿತ್ರ 2ರಲ್ಲಿನಂತೆ ತೋರಿಸಬಹುದು.



ಚಿತ್ರ 2: ಜ್ಞಾನಾರ್ಜನೆಯ ಸನ್ನಿವೇಶ.

ಜ್ಞಾನಾರ್ಜನೆಯ ಸನ್ನಿವೇಶದಲ್ಲಿ ಶಿಕ್ಷಣಾರ್ಥಿಯೇ ಕೇಂದ್ರ ವಸ್ತು. ಉಳಿದೆಲ್ಲ ಅಂಶಗಳು ಅವನ ಕಲಿಯುವಿಕೆಯಲ್ಲಿ ಸಹಕರಿಸುತ್ತವೆ. ಇದನ್ನೇ ಇನ್ನೊಂದು ತೆರನಾಗಿ ಹೇಳಬೇಕೆಂದರೆ, ವಿದ್ಯಾರ್ಜನೆ ಶಿಕ್ಷಣಾರ್ಥಿಯ ಗುರಿ. ಶಿಕ್ಷಕ, ವಿಷಯ, ಶಿಕ್ಷಣಸಾಧನ ಮತ್ತು ಭೌತಿಕಪರಿಸರ, ಆ ಗುರಿ ಮುಟ್ಟಿಸುವ ಸೋಪಾನಗಳು.

ಶಿಕ್ಷಣಾರ್ಥಿಯ ಪ್ರತಿಕ್ರಿಯೆ ಉಳಿದೆಲ್ಲ ಮೂಲಾಂಶಗಳೊಂದಿಗೆ ಎಡೆಬಿಡದೆ ಸಾಗಿರುತ್ತದೆ. ಶಿಕ್ಷಣಾರ್ಥಿಯ ಗಮನ ಉಳಿದ ನಾಲ್ಕು ಅಂಶಗಳಾದ ಶಿಕ್ಷಕ, ವಿಷಯ, ಶಿಕ್ಷಣಸಾಧನ ಮತ್ತು ಭೌತಿಕಪರಿಸರಗಳ ಕಡೆಗೆ ಹರಿಯುವುದು ಸಹಜ.

ಉತ್ತಮ ಜ್ಞಾನಾರ್ಜನೆ ಸನ್ನಿವೇಶವನ್ನುಂಟುಮಾಡಬೇಕಾದರೆ ಶಿಕ್ಷಕನು ಕೆಳಗಿನ ಅಂಶಗಳನ್ನು ಸರಿಯಾಗಿ ಅರಿತಿರಬೇಕು:

(1) ಶಿಕ್ಷಣಾರ್ಥಿಯ ದೃಷ್ಟಿಯಲ್ಲಿ ಮಹತ್ವವಾದ ಶಿಕ್ಷಣದ ಗುರಿ ಅರಿತಿರುವಿಕೆ.

(2) ಶಿಕ್ಷಣಾರ್ಥಿಯ ದೃಷ್ಟಿಯಲ್ಲಿ ಮಹತ್ವವಾದ ವಿಷಯಗಳಲ್ಲಿ ಶಿಕ್ಷಕನು ಸಾಕಷ್ಟು ಪರಿಣತೆ ಪಡೆದಿರುವಿಕೆ.

(3) ಪರಿಣಾಮಕಾರಿಯಾಗಿ ಕಲಿಸುವ ಸಾಮರ್ಥ್ಯ ಹೊಂದಿರುವಿಕೆ.

(4) ವಿಷಯ ಸ್ಪಷ್ಟಪಡಿಸುವ ಜಾಣ್ಮೆ, ಸದಾ ಹಸನ್ಮುಖಿಯಾಗಿರುವ ಕೌಶಲ ಹಾಗೂ ಶಿಕ್ಷಣಾರ್ಥಿಗಳ ಶ್ರೇಯೋಭಿವೃದ್ಧಿ ಕೋರಿಕೆ.

(5) ಶಿಕ್ಷಣಕ್ರಮ ಪ್ರಜಾಸತ್ತಾತ್ಮಕವಾಗಿರಿಸುವಿಕೆ.

(6) ಜ್ಞಾನಾರ್ಜನೆಯಲ್ಲಿ ಶಿಕ್ಷಣಾರ್ಥಿಯು ಕ್ರಿಯಾತ್ಮಕವಾಗಿ ಭಾಗವಹಿಸುವಂತೆ ಮಾಡುವಿಕೆ.

(7) ಪ್ರತಿ ಪಾಠಕಾಲದಲ್ಲಿಯೂ ತತ್ಪರತೆ ಮತ್ತು ಸಭ್ಯನಾಗಿರುವಿಕೆ.

(8) ಉತ್ತಮ ಶಿಕ್ಷಣ ಹಾಗೂ ಶಿಕ್ಷಣ ಮುಂದಾಳುತನದ ಪ್ರತಿನಿಧಿತ್ವ.

(9) ಜ್ಞಾನಾರ್ಜನೆ ಸಮಯದಲ್ಲಿ, ಜ್ಞಾನಾರ್ಜನೆಯ ಅಂಶಗಳನ್ನು ಸರಿಯಾದ ರೀತಿಯಲ್ಲಿ ಅಣಿಗೊಳಿಸುವಿಕೆ.

(10) ಶಿಕ್ಷಣ ಸಾಧನ ಪ್ರಯೋಜನಕಾರಿಯಾಗಿರಿಸುವಿಕೆ.

(11) ಶಿಕ್ಷಣ ಕ್ರಮ ಪೂರ್ವಯೋಜಿತಗೊಳಿಸಿಕೊಂಡಿರುವಿಕೆ.

(12) ಶಿಕ್ಷಣ ಸಾಧನಗಳನು ಸಂದರ್ಭೋಚಿತವಾಗಿ ಉಪಯೋಗಿಸುವಿಕೆ.

ಅಧ್ಯಾಯ 2

ಕೃಷಿ ವಿಸ್ತರಣ ಶಿಕ್ಷಣದ ಪದ್ಧತಿಗಳ ವಿಂಗಡಣೆ

ಕೃಷಿ ವಿಸ್ತರಣ ಶಿಕ್ಷಣದಲ್ಲಿ ಕ್ರಿಯಾತ್ಮಕ ವಿಸ್ತರಣ ಕಾರ್ಯಕರ್ತನಾಗಲಿ ಅಥವಾ ಕೃಷಿತಜ್ಞನಾಗಲಿ ರೈತರಿಗೆ ಕಲಿಸುವಾಗ ಪರಿಣಾಮಕಾರಿಯಾದ ಪದ್ಧತಿಗಳನ್ನು ಉಪಯೋಗಿಸಬೇಕಾಗುತ್ತದೆ. ಆದ್ದರಿಂದ ಇವರಿಗೆ ವಿಸ್ತರಣ ಶಿಕ್ಷಣದ ವಿವಿಧ ಕಲಿಸುವ ಪದ್ಧತಿಗಳ ಬಗ್ಗೆ ಪೂರ್ಣ ತಿಳಿವಳಿಕೆ ಇರಬೇಕಾಗುತ್ತದೆ. ಕೂಲಂಕಷವಾಗಿ, ಪ್ರತಿಯೊಂದು ಪದ್ಧತಿಯನ್ನು ಅಭ್ಯಸಿಸಿ ಅವುಗಳನ್ನು ಸಮಂಜಸವಾಗಿ ಬಳಸುವ ಸಾಧ್ಯತೆಯನ್ನು ಇವರು ಪಡೆದುಕೊಂಡಿರುವುದು ಅವಶ್ಯವಿದೆ. ಸಮಂಜಸವಾದ, ಪರಿಣಾಮಕಾರಿ ಪದ್ಧತಿಗಳನ್ನು ಬಳಸುವುದು ಸುಲಭವಾದ ಕೆಲಸವಲ್ಲ. ಶಿಕ್ಷಣದಲ್ಲಿ ಸಂದಿಗ್ಧ ಪರಿಸ್ಥಿತಿಗಳು ಹಲವಾರು. ವಿಸ್ತರಣ ಕಾರ್ಯಕರ್ತನು ರೈತರ ಚಟುವಟಿಕೆ, ಅವರ ನಡತೆ ಮತ್ತು ಮನೋಭಿಪ್ರಾಯಗಳನ್ನು ಪ್ರಗತಿ ಪಥದಲ್ಲಿ ಒಯ್ಯಲು ಪ್ರಯತ್ನಿಸಬೇಕು. ರೈತರ ನಡೆವಳಿಕೆಗಳು ಸುತ್ತಮುತ್ತಲಿನ ವಾತಾವರಣಗಳಿಗೆ ಹೊಂದಿಕೊಂಡಿರುತ್ತವೆ. ಅವರ ಅಭಿರುಚಿಗಳು ತೆರತೆರನಾಗಿರುತ್ತವೆ. ರೈತರು, ಗೃಹಿಣಿಯರು, ಯುವಕ ಯುವತಿಯರು ವಿಭಿನ್ನ ವಯಸ್ಸು, ಶಿಕ್ಷಣ ಮತ್ತು ಅನುಭವಗಳನ್ನೂ ಹೊಂದಿರುತ್ತಾರೆ. ಆದುದರಿಂದ ವಿಸ್ತರಣ ಕಾರ್ಯಕ್ರಮ ಮತ್ತು ಇನ್ನಿತರ ಹೊಸ ವಿಷಯಗಳಿಗೆ ಗಮನ ಕೊಡುವುದರಲ್ಲಿ ಅವರ ವರ್ತನೆ ಬೇರೆ ಬೇರೆಯಾಗಿರುತ್ತದೆ. ವಿಸ್ತರಣ ಶಿಕ್ಷಣ ಕಾರ್ಯಕ್ರಮವು ಹೆಚ್ಚು ಪರಿಣಾಮಕಾರಿಯಾಗಬೇಕಾದರೆ ವಿವಿಧ ಶಿಕ್ಷಣ ಪದ್ಧತಿಗಳ ಜೋಡಣೆ ತುಂಬ ಮಹತ್ವದ್ದಾಗಿದೆ. ಈ ಹಿನ್ನೆಲೆಯಲ್ಲಿ ವಿಸ್ತರಣ ಶಿಕ್ಷಣ ಪದ್ಧತಿಗಳ ಸೂಕ್ತಉಪಯೋಗ ನಡೆಯಬೇಕು.

ಕೃಷಿ ವಿಸ್ತರಣ ಶಿಕ್ಷಣದಲ್ಲಿ ಪದ್ಧತಿಗಳನ್ನು **ಉಪಯೋಗಾನುಸಾರವಾಗಿ ಬಳಸುವ ಪದ್ಧತಿಗಳು ಹಾಗೂ ರೂಪಗಳಿಗನುಸಾರವಾಗಿ ಬಳಸುವ ಪದ್ಧತಿ**ಗಳೆಂದು ಎರಡು ಗುಂಪುಗಳಲ್ಲಿ ವಿಂಗಡಿಸಬಹುದು:

I ಉಪಯೋಗಾನುಸಾರವಾಗಿ ಬಳಸುವ ಪದ್ಧತಿಗಳು:

1) **ವೈಯಕ್ತಿಕ ಪದ್ಧತಿಗಳು:**

(1) ಹೊಲ, ಮನೆಗಳಿಗೆ ಭೆಟ್ಟಿ
(2) ಕಛೇರಿಗೆ ಭೆಟ್ಟಿ
(3) ವೈಯಕ್ತಿಕ ಪತ್ರವ್ಯವಹಾರ
(4) ದೂರವಾಣಿ ಕರೆ
(5) ಪರಿಣಾಮ ಪ್ರಾತ್ಯಕ್ಷಿಕೆ

2) **ಗುಂಪು ಪದ್ಧತಿಗಳು:**

(1) ಸಾಮಾನ್ಯ ಸಭೆ
(2) ವಿಚಾರ ವಿನಿಮಯ ಸಭೆ
(3) ಪದ್ಧತಿ ಪ್ರಾತ್ಯಕ್ಷಿಕೆ
(4) ಕ್ಷೇತ್ರದರ್ಶನ
(5) ಕ್ಷೇತ್ರೋತ್ಸವ
(6) ಶೈಕ್ಷಣಿಕ ಪ್ರವಾಸ

3) **ಸಾಮೂಹಿಕ ಪದ್ಧತಿಗಳು:**

(1) ವರ್ತಮಾನ ಪತ್ರಿಕೆ
(2) ಬಾನುಲಿ
(3) ಚಲನಚಿತ್ರ
(4) ವಸ್ತುಪ್ರದರ್ಶನ
(5) ಹಸ್ತಪತ್ರಿಕೆ
(6) ಸುತ್ತೋಲೆ
(7) ಟೆಲಿವಿಷನ್
(8) ಭಿತ್ತಿಪತ್ರ

II. **ರೂಪಗಳಿಗನುಗುಣವಾಗಿ ಬಳಸುವ ಪದ್ಧತಿಗಳು:**

1) **ಲಿಖಿತ ಪದ್ಧತಿಗಳು:**

(1) ವರ್ತಮಾನ ಪತ್ರಿಕೆ
(2) ಹಸ್ತಪತ್ರಿಕೆ
(3) ಸುತ್ತೋಲೆ
(4) ವೈಯಕ್ತಿಕ ಪತ್ರ

2) **ಮೌಖಿಕ ಪದ್ಧತಿಗಳು:**

(1) ಸಾಮಾನ್ಯ ಸಭೆ
(2) ವಿಚಾರ ವಿನಿಮಯ ಸಭೆ
(3) ಪದ್ಧತಿ ಪ್ರಾತ್ಯಕ್ಷಿಕೆ
(4) ಹೊಲಮನೆಗಳಿಗೆ ಭೇಟ್ಟಿ
(5) ಕಛೇರಿಗೆ ಭೇಟ್ಟಿ
(6) ದೂರವಾಣಿ ಕರೆ
(7) ಬಾನುಲಿ

3) ದೃಷ್ಟಿಗೋಚರ ಪದ್ಧತಿಗಳು:

(1) ಪರಿಣಾಮ ಪ್ರಾತ್ಯಕ್ಷಿಕೆ
(2) ಪದ್ಧತಿ ಪ್ರಾತ್ಯಕ್ಷಿಕೆ
(3) ವಸ್ತುಪ್ರದರ್ಶನ
(4) ಭಿತ್ತಿಪತ್ರ
(5) ನಕಾಶೆ
(6) ಛಾಯಾಚಿತ್ರ
(7) ಆಕೃತಿ
(8) ರೇಖಾಚಿತ್ರ
(9) ಚಲನಚಿತ್ರ
(10) ಪಾರದರ್ಶಕ ಚಿತ್ರ

ಅಧ್ಯಾಯ 3

ವೈಯಕ್ತಿಕ ಪದ್ಧತಿಗಳು

ಹೊಲ ಮತ್ತು ಮನೆಗಳಿಗೆ ಭೆಟ್ಟಿ, ಕಛೇರಿಗೆ ಭೆಟ್ಟಿ, ದೂರವಾಣಿ (ಟೆಲಿಫೋನ್) ಕರೆ, ವೈಯಕ್ತಿಕ ಪತ್ರ ಮತ್ತು ಪರಿಣಾಮ ಪ್ರಾತ್ಯಕ್ಷಿಕೆ ಇವು ಮುಖ್ಯವಾದ ವೈಯಕ್ತಿಕ ವಿಸ್ತರಣ ಪದ್ಧತಿಗಳು. ಪ್ರತಿಯೊಂದು ಪದ್ಧತಿಯ ಬಗ್ಗೆ ವಿಷದವಾಗಿ ಈ ಮುಂದೆ ಚರ್ಚಿಸಲಾಗಿದೆ.

(1) ಹೊಲ ಮತ್ತು ಮನೆಗಳಿಗೆ ಭೆಟ್ಟಿ (ಫಾರ್ಮ್ ಹೋಂವಿಜಿಟ್)

ಕೃಷಿ ವಿಸ್ತರಣ ಕಾರ್ಯಕರ್ತನು ವಿಶಿಷ್ಟ ಉದ್ದೇಶಗಳಿಗಾಗಿ ರೈತನ ಅಥವಾ ಅವನ ಕುಟುಂಬದ ಸದಸ್ಯರನ್ನು ನೇರವಾಗಿ ಹೊಲ ಅಥವಾ ಮನೆಯಲ್ಲಿ ಸಂಧಿಸುತ್ತಾನೆ. ಇದರ ಉದ್ದೇಶ —

(ಅ) ರೈತನ ಪರಿಚಯ ಮಾಡಿಕೊಳ್ಳುವದಿರಬಹುದು ಇಲ್ಲವೆ ಅವನ ವಿಶ್ವಾಸ ಗಳಿಸುವುದಿರಬಹುದು;

(ಆ) ರೈತರೊಂದಿಗೆ ವೈಯಕ್ತಿಕ ಅಥವಾ ಸ್ಥಳೀಯ ಸಮಸ್ಯೆಗಳನ್ನು ಚರ್ಚಿಸುವುದಿರಬಹುದು;

(ಇ) ಅವರಿಗೆ ಸುಧಾರಿಸಿದ ಪದ್ಧತಿಗಳ ಬಗ್ಗೆ ಮಾಹಿತಿ ಕೊಡುವುದಿರಬಹುದು;

(ಈ) ಸುಧಾರಿಸಿದ ಪದ್ಧತಿಯಲ್ಲಿನ ಚಾತುರ್ಯತೆಗಳನ್ನು ಕಲಿಸುವುದಿರಬಹುದು.

ಈ ವಿಸ್ತರಣ ಶಿಕ್ಷಣ ಪದ್ಧತಿ ಹಲವಾರು ವಿಧವಾಗಿವೆ:

(i) ಪರಿಚಯಾತ್ಮಕ ಭೆಟ್ಟಿ
(ii) ತಾಂತ್ರಿಕ ಭೆಟ್ಟಿ
(iii) ಸಮಸ್ಯೆ ಪರಿಹಾರ ಭೆಟ್ಟಿ
(iv) ಸಂಘಟನಾ ಭೆಟ್ಟಿ
(v) ಪುನರ್ ಭೆಟ್ಟಿ

(i) **ಪರಿಚಯಾತ್ಮಕ ಭೆಟ್ಟಿ:** ರೈತರನ್ನು ಪ್ರಥಮ ಪರಿಚಯ ಮಾಡಿಕೊಳ್ಳಲು ಈ ಭೆಟ್ಟಿಯನ್ನು ನಡೆಸಲಾಗುವುದು. ರೈತರ ಸ್ಥಿತಿಗತಿ, ಅವರು ಅನುಸರಿಸುವ ಕೃಷಿ

ಪದ್ಧತಿ ಮತ್ತು ಆಚಾರ ವಿಚಾರಗಳನ್ನು ತಿಳಿದುಕೊಳ್ಳಲು ಈ ಭೇಟ್ಟಿಯನ್ನು ಕೈಗೊಳ್ಳಲಾಗುವುದು.

(ii) **ತಾಂತ್ರಿಕ ಭೇಟ್ಟಿ:** ತಾಂತ್ರಿಕ ಸಲಹೆಗಳನ್ನು ಕೊಡಲು ಈ ಭೇಟ್ಟಿಯನ್ನು ಬಳಸಲಾಗುತ್ತದೆ. ಸುಧಾರಿತ ಕೃಷಿ ಪದ್ಧತಿಗಳ ಬಗ್ಗೆ ರೈತರಿಗೆ ಮಾಹಿತಿ ನೀಡಲು ಈ ಭೇಟ್ಟಿ ಬಹಳ ಅನುಕೂಲಕರ.

(iii) **ಸಮಸ್ಯೆ ಪರಿಹಾರ ಭೇಟ್ಟಿ:** ರೈತರ ವಿಶಿಷ್ಟ ಸಮಸ್ಯೆಗಳಿಗೆ ಸಮರ್ಪಕವಾದ ಉತ್ತರ ಕೊಡಲು ಈ ಭೇಟ್ಟಿ ನಡೆಯುತ್ತದೆ.

(iv) **ಸಂಘಟನಾ ಭೇಟ್ಟಿ:** ವಿಸ್ತರಣ ಕಾರ್ಯಕರ್ತನು ಗ್ರಾಮಗಳಲ್ಲಿ ಸಭೆಗಳನ್ನೇರ್ಪಡಿಸಲು, ತರಬೇತಿ ಕಾರ್ಯಕ್ರಮಗಳನ್ನೇರ್ಪಡಿಸಲು ಅಥವಾ ಇನ್ನಾವುದೇ ವಿಸ್ತರಣ ಕಾರ್ಯಕ್ರಮವನ್ನು ಏರ್ಪಡಿಸಲು ಪೂರ್ವಸಿದ್ಧತೆಮಾಡಿಕೊಳ್ಳುವ ಸಲುವಾಗಿ ಈ ತರನಾದ ಭೇಟ್ಟಿ ಉಪಯೋಗಿಸಿಕೊಳ್ಳುತ್ತಾನೆ.

(v) **ಪುನರ್ ಭೇಟ್ಟಿ :** ಯಾವುದೇ ವಿಸ್ತರಣ ಶಿಕ್ಷಣದ ನಂತರ ಮುಂದಿನ ಕಾರ್ಯಕ್ರಮಕ್ಕೆ ಅಣಿಮಾಡಲು ಅನುಕೂಲವಾಗುವಂಥಹ ಭೇಟ್ಟಿಗೆ ಪುನರ್ ಭೇಟ್ಟಿಯೆಂದು ಹೆಸರು. ಇದನ್ನು ಸಾಮಾನ್ಯವಾಗಿ ವಿಚಾರ ವಿನಿಮಯ ಸಭೆ ಅಥವಾ ತರಬೇತಿ ಸಭೆಗಳಾದ ಮೇಲೆ ವಿಸ್ತರಣ ಕಾರ್ಯಕರ್ತನು ನಿಯೋಜಿಸಲು ಉಪಯೋಗಿಸಿಕೊಳ್ಳುತ್ತಾನೆ.

ರೈತರ ಹೊಲ ಮತ್ತು ಮನೆಗಳಿಗೆ ಭೇಟ್ಟಿ ಇತ್ತಾಗ ಕೆಳಗಿನ ಅಂಶಗಳನ್ನು ವಿಸ್ತರಣ ಕಾರ್ಯಕರ್ತನು ಗಮನಿಸುವುದು ಅವಶ್ಯವಿದೆ:

(1) ನಿಶ್ಚಿತ ಉದ್ದೇಶಕ್ಕಾಗಿ ಅಥವಾ ಉದ್ದೇಶವಿದ್ದಾಗಲೇ ಭೇಟ್ಟಿ ನೀಡಬೇಕು.

(2) ಸಂಭಾಷಣೆಯನ್ನು ಆಸಕ್ತಿ ಇರುವ ವಿಷಯಗಳ ಬಗೆಗೇನೆ ನಡೆಸಬೇಕು.

(3) ರೈತರೊಂದಿಗೆ ಸ್ನೇಹಿತರಂತೆ ವರ್ತಿಸಬೇಕು.

(4) ಸ್ಥಳೀಯ ಮತ್ತು ಸರಳವಾದ ಭಾಷಾಶೈಲಿ ಬಳಸಬೇಕು.

(5) ಸಂಭಾಷಣೆ ಕಾಲದಲ್ಲಿ ರೈತನ ಮಾತುಗಳಿಗೆ ಮತ್ತು ಅಭಿಪ್ರಾಯಗಳಿಗೆ ಹೆಚ್ಚು ಮನ್ನಣೆ ಕೊಡಬೇಕು.

(6) ರೈತನು ಒಳ್ಳೆಯ ಅಂಶಗಳ ಬಗ್ಗೆ ಮಾತನಾಡಿದಾಗ ಆತನನ್ನು ಪ್ರಶಂಸಿಸಬೇಕು.

(7) ಭೇಟ್ಟಿಯ ಉದ್ದೇಶ, ದಿನಾಂಕ ಮತ್ತು ಸಂಭಾಷಿಸಿದ ವಿಷಯಗಳ ಬಗ್ಗೆ ದಾಖಲೆ ಇಡಬೇಕು.

(8) ಸಂಭಾಷಣೆಯ ಅಂತ್ಯದಲ್ಲಿ ರೈತನಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ವಿಸ್ತರಣ ಹಸ್ತಪತ್ರಿಕೆಗಳೇನಾದರೂ ಇದ್ದರೆ ಅವುಗಳನ್ನು ಕೊಡಲು ಮರೆಯಬಾರದು.



ಚಿತ್ರ 3: ಹೊಲ ಮತ್ತು ಮನೆಗಳಿಗೆ ಭೇಟ್ಟಿ

ಪ್ರಯೋಜನ ಲಾಭಗಳು :

ರೈತರ ಹೊಲಮನೆಗಳಿಗೆ ಭೇಟ್ಟಿ ಕೊಡುವುದರಿಂದ ವಿಸ್ತರಣ ಕಾರ್ಯಕರ್ತರಿಗೆ ಹಲವಾರು ತೆರನಾದ ಲಾಭಗಳಿವೆ. ಇವುಗಳಿಂದ:

(1) ರೈತರ ಮತ್ತು ಹಳ್ಳಿಗಳ ಸಮಸ್ಯೆಗಳನ್ನು ತಿಳಿದುಕೊಳ್ಳಲು ಸಾಧ್ಯವಿದೆ.

(2) ರೈತ ಮತ್ತು ವಿಸ್ತರಣ ಕಾರ್ಯಕರ್ತನ ನಡುವೆ ಸದಭಿಪ್ರಾಯ ಉಂಟಾಗುವುದು.

(3) ವಿಸ್ತರಣ ಕಾರ್ಯಕರ್ತನ ಶಿಫಾರಸ್ಸುಗಳು ಅಂಗೀಕಾರವಾದಂತೆಲ್ಲ, ಅವನಿಗೆ ಅವನ ಕೆಲಸದ ಬಗ್ಗೆ ವಿಶ್ವಾಸ ಮೂಡುತ್ತದೆ.

(4) ರೈತರ ಮುಖಂಡರನ್ನು ಗುರುತಿಸಲು ವಿಸ್ತರಣ ಕಾರ್ಯಕರ್ತನಿಗೆ ಸಹಾಯವಾಗುತ್ತದೆ.

(5) ರೈತ ಮತ್ತು ವಿಸ್ತರಣ ಕಾರ್ಯಕರ್ತನ ನಡುವೆ ಸ್ನೇಹಭಾವ ಏರ್ಪಡುತ್ತದೆ.

(6) ಬೇರೆ ವಿಸ್ತರಣ ಪದ್ಧತಿಗಳಿಂದ ಸಂಧಿಸಲಾಗದ ಅನೇಕರನ್ನು ಈ ಪದ್ಧತಿಯಿಂದ ಸಂಧಿಸಬಹುದು.

ಇತಿಮಿತಿ ನ್ಯೂನತೆಗಳು : ಈ ಪದ್ಧತಿಗೆ ಹಲವಾರು ಮಿತಿಗಳಿವೆ. ಇದರಲ್ಲಿ ಕೆಲವು ನ್ಯೂನತೆಗಳಿವೆ. ಅವುಗಳೆಂದರೆ:

(1) ರೈತ ಮತ್ತು ವಿಸ್ತರಣ ಕಾರ್ಯಕರ್ತರಿಬ್ಬರಿಗೂ ಸರಿಹೊಂದುವಂತಹ ವೇಳೆ, ದಿನಗಳು ದೊರೆಯುವುದು ವಿರಳ.

(2) ವಿಸ್ತರಣ ಕಾರ್ಯಕರ್ತನು ಮೇಲಿಂದ ಮೇಲೆ ಪ್ರಗತಿಪರ ರೈತರನ್ನು ಮಾತ್ರ ಸಂಧಿಸಿದರೆ ಬೇರೆ ರೈತರಿಗೆ ಕಾರ್ಯಕರ್ತನ ಬಗ್ಗೆ ಅಸಂತೋಷ ಮೂಡಬಹುದು.

(3) ಬೇರೆ ಶಿಕ್ಷಣ ಪದ್ಧತಿಗಳಿಗೆ ಹೋಲಿಸಿದರೆ ಈ ಪದ್ಧತಿಗೆ ತಗಲುವ ವೆಚ್ಚ ಅಧಿಕ.

2. ಕಛೇರಿ (ಆಫೀಸು)ಗೆ ಭೆಟ್ಟಿ :

ಈ ಪದ್ಧತಿಯಲ್ಲಿ ರೈತನು ವಿಸ್ತರಣ ಕಾರ್ಯಕರ್ತನ ಕಛೇರಿಗೆ ಭೆಟ್ಟಿಕೊಟ್ಟು, ಸುಧಾರಿಸಿದ ಕೃಷಿಯ ಬಗ್ಗೆ ಸಲಹೆ ಅಥವಾ ತನ್ನ ನಿರ್ದಿಷ್ಟ ಸಮಸ್ಯೆಗಳಿಗೆ ಸಮರ್ಪಕ ಉತ್ತರ ಪಡೆಯುತ್ತಾನೆ.
ಈ ಪದ್ಧತಿಯ ಮುಖ್ಯ ಉದ್ದೇಶ:

(1) ರೈತನೊಡನೆ ಹೆಚ್ಚಿನ ಸಂಪರ್ಕಕ್ಕೆ ಅನುಕೂಲ ಮಾಡಿಕೊಡುವುದಾಗಿರಬಹುದು.

(2) ವೈಯಕ್ತಿಕ ಹಾಗೂ ಸಾಮೂಹಿಕ ಹಿತಾಸಕ್ತಿಗಳನ್ನು ಅಭಿವೃದ್ಧಿಗೊಳಿಸುವುದಾಗಿರಬಹುದು.

(3) ಸಮಸ್ಯೆಗಳನ್ನು ವಿಷದವಾಗಿ ಚರ್ಚಿಸಲು ಅನುಕೂಲ ಮಾಡಿಕೊಡುವುದಾಗಿರಬಹುದು ಇಲ್ಲವೆ,

(4) ಇತರ ಸಂಘಸಂಸ್ಥೆಗಳು ಹಾಗೂ ರೈತರ ನಡುವೆ ಸಂಪರ್ಕ ಏರ್ಪಡಿಸುವುದಾಗಿರಬೇಕು.

ಈ ಪದ್ಧತಿ ಯಶಸ್ವಿಯಾಗಬೇಕಾದರೆ ರೈತರಿಗೆ ವಿಸ್ತರಣ ಕಾರ್ಯಕರ್ತನು ತನ್ನ ಕಛೇರಿಗೆ ಭೆಟ್ಟಿಕೊಡಲು ಸ್ಫೂರ್ತಿನೀಡಬೇಕು. ಎಲ್ಲ ರೀತಿ ಸಮಾಚಾರ,

ಸುದ್ದಿ ಪತ್ರಿಕೆಗಳಲ್ಲಿ ಅಥವಾ ವಿಸ್ತರಣ ಹಸ್ತಪತ್ರಿಕೆಗಳಲ್ಲಿ 'ಹೆಚ್ಚಿನ ವಿವರಣೆಗಳಿಗೆ ಸ್ಥಳೀಯ ವಿಸ್ತರಣ ಕಾರ್ಯಕರ್ತರ ಕಛೇರಿಗೆ ಭೇಟ್ಟಿಕೊಡಿರಿ' ಎಂಬ ವಾಕ್ಯವನ್ನು ಸೇರಿಸಬೇಕು. ಹೀಗೆ ಮಾಡುವುದರಿಂದ ರೈತರಿಗೆ ಮಾರ್ಗದರ್ಶನ ಮಾಡಿದಂತಾಗುತ್ತದಲ್ಲದೆ ಹೆಚ್ಚಿನ ಸುದ್ದಿಗಳಿಗಾಗಿ ಯಾರನ್ನು ಕಾಣಬೇಕಾಗುವುದೆಂಬುದನ್ನು ತಿಳಿಯಲು ಅವಕಾಶ ಕಲ್ಪಿಸಿದಂತಾಗುತ್ತದೆ. ವಿಸ್ತರಣ ಕಾರ್ಯಕರ್ತನ ಕಛೇರಿಯು ಎಲ್ಲ ರೈತರು ಸುಲಭವಾಗಿ ತಲುಪಬಹುದಾದಂಥಹ ಸ್ಥಳದಲ್ಲಿರಬೇಕು. ಸ್ಥಳೀಯ ಭಾಷೆಯಲ್ಲಿ ನಾಮಫಲಕಗಳನ್ನು ಬರೆದು ಹಾಕಬೇಕು. ಈ ವಿಸ್ತರಣ ಪದ್ಧತಿಯ ಪ್ರಯೋಜನವು ಕಾರ್ಯಕರ್ತನ ನಡತೆ, ಯೋಗ್ಯತೆ ಮತ್ತು ವಿಷಯಪರಿಣತೆಯನ್ನು ಅವಲಂಬಿಸಿರುತ್ತದೆ. ವಿಸ್ತರಣ ಕಾರ್ಯಕರ್ತನು ಈ ಪದ್ಧತಿಯನ್ನು ಯಶಸ್ವಿಗೊಳಿಸುವ ಸಾಮರ್ಥ್ಯ ಪಡೆದಿರಬೇಕು. ಅವನು ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮುಂದಾಲೋಚನೆಯನ್ನು ಹೊಂದಿರಬೇಕು. ಕಾರ್ಯಕರ್ತನು ಹಸನ್ಮುಖಿಯಾಗಿ ಸಂದರ್ಶಕರನ್ನು ಬರಮಾಡಿಕೊಂಡು ಅವರ ವಿಶ್ವಾಸವನ್ನು ಉಳಿಸಿಕೊಳ್ಳುವಂಥವನಾಗಿರಬೇಕು.



ಚಿತ್ರ 4 : ಕಛೇರಿಗೆ ಭೇಟ್ಟಿ

ಈ ವಿಸ್ತರಣ ಶಿಕ್ಷಣ ಪದ್ಧತಿ ಉಪಯೋಗಿಸುವಾಗ ಕೆಳಗಿನ ಅಂಶಗಳನ್ನು ಗಮನದಲ್ಲಿಡಬೇಕು:

(1) ಕಛೇರಿ ಸ್ಥಳವನ್ನು ಗುರುತಿಸಲು ಸಾಧ್ಯವಾಗುವಂತೆ ಕಛೇರಿಗೆ ಆಕರ್ಷಕವಾದ ಚಿಹ್ನೆ ಹಾಗೂ ಫಲಕ ಉಪಯೋಗಿಸಬೇಕು.

(2) ಕಛೇರಿಯಲ್ಲಿ ಕುಳಿತುಕೊಳ್ಳಲು ಸಾಕಷ್ಟು ಆಸನಗಳ ವ್ಯವಸ್ಥೆಯಿರಬೇಕು.

(3) ಸಂದರ್ಶಕರನ್ನು ಸ್ವಾಗತಿಸುವ ಏರ್ಪಾಡಿರಬೇಕು.

(4) ವಿಸ್ತರಣ ಕಾರ್ಯಕರ್ತನು ಕಛೇರಿಯಲ್ಲಿ ಇಲ್ಲದಿದ್ದಪಕ್ಷದಲ್ಲಿ ಬಂದವರನ್ನು ಸ್ವಾಗತಿಸಿ ಅವರಿಗೆ ತಕ್ಕ ಮಾಹಿತಿಕೊಡಲು ಬದಲಿ ಏರ್ಪಾಡಿಗೆ ವ್ಯವಸ್ಥೆ ಮಾಡಿರ ಬೇಕು.

(5) ರೈತರ ಮಾತುಗಳನ್ನು ಮತ್ತು ಅವರ ಅಭಿಪ್ರಾಯಗಳನ್ನು ಆಸಕ್ತಿಯಿಂದ ಕೇಳಿ, ಅವರಿಗೆ ಸಮಂಜಸವಾದ ಉತ್ತರಗಳನ್ನು ಮತ್ತು ಮಾಹಿತಿಯನ್ನು ಕೊಡಬೇಕು.

(6) ಸಂದರ್ಶಕರ ಭೇಟಿಯ ವೇಳೆಯಯ್ನು ನಿಶ್ಚಿತಪಡಿಸಿರಬೇಕು.

(7) ಸಂದರ್ಶಕರಿಗೆ ಅವರಿಗೆ ಪರಿಚಯವಿರದ ವಿವಿಧ ಸುದ್ದಿಮೂಲಗಳ ಬಗ್ಗೆ ಮಾಹಿತಿ ನೀಡಬೇಕು.

(8) ಸಂಭಾಷಣೆಯಲ್ಲಿ ಸರಳ ಶೈಲಿಯ ಸ್ಥಳೀಯ ಭಾಷೆಯನ್ನುಪಯೋಗಿಸ ಬೇಕು.

(9) ಸಂದರ್ಶಕರ ಪುಸ್ತಕವನ್ನು ಇಡಬೇಕು. ಅದರಲ್ಲಿ ಭೇಟಿಕೊಟ್ಟ ರೈತರ ವಿಳಾಸಗಳನ್ನು ಬರೆದಿಡಬೇಕು. ಅವರ ಭೇಟಿಯ ವಿಶಿಷ್ಟ ಉದ್ದೇಶ ಕೂಡ ಬರೆಯ ಬೇಕು.

(10) ಕಛೇರಿಯಲ್ಲಿ ಭೇಟಿಯಿಂದ ಪ್ರಾರಂಭವಾದ ಸಂಪರ್ಕವನ್ನು ಮುಂದು ವರಿಸಬೇಕು.

(11) ರೈತರಿಗೆ ಅಗತ್ಯವಾದ ಸಂಬಂಧಿಸಿದ ವಿಸ್ತರಣ ಹಸ್ತಪ್ರತಿಗಳನ್ನು ಚರ್ಚೆಯ ಕಾಲದಲ್ಲಿ ಅವರಿಗೆ ಕೊಡಬೇಕು ಹಾಗೂ ಜೊತೆಗೆ ಅವುಗಳನ್ನು ಒಯ್ದು ಉಪಯೋಗಿ ಸಲು ಪ್ರೇರೇಪಿಸಬೇಕು.

(12) ಭೇಟಿಯ ಕೊನೆಯಲ್ಲಿ ಕಛೇರಿಗೆ ಭೇಟಿ ಕೊಟ್ಟುದಕ್ಕಾಗಿ ಅವರಿಗೆ ವಂದನೆ ಗಳನ್ನು ಹೇಳಿ, ಆಗಿಂದಾಗ್ಗೆ, ಅಗತ್ಯವಿದ್ದಾಗ ಭೇಟಿಕೊಡಬೇಕೆಂದು ಬಿನ್ನವಿಸಿಕೊಳ್ಳ ಬೇಕು.

ಪ್ರಯೋಜನ ಲಾಭಗಳು :

ರೈತರು ವಿಸ್ತರಣ ಕಾರ್ಯಕರ್ತರ ಕಛೇರಿಗಳಿಗೆ ಆಗಿಂದಾಗ್ಗೆ ಭೇಟಿ ನೀಡುವುದರಿಂದ

ರೈತರು ಹಾಗೂ ವಿಸ್ತರಣ ಕಾರ್ಯಕರ್ತರಿಗೂ ಹಲವಾರು ಪ್ರಯೋಜನ ದೊರೆತು ಲಾಭ ಸಂಭವಿಸುವುದು. ಅವುಗಳೆಂದರೆ:

(1) ಪದೇ ಪದೇ ಕಛೇರಿಗೆ ಭೆಟ್ಟಿ ನೀಡುವುದರಿಂದ ರೈತನಿಗೆ ಸಂತೃಪ್ತಿಯಾಗುತ್ತದೆ.

(2) ಸಮಾಜದಲ್ಲಿ ವಿಸ್ತರಣ ಕಾರ್ಯಕರ್ತನ ಘನತೆ ಗೌರವಗಳು ಅಧಿಕಗೊಳ್ಳುತ್ತವೆ.

(3) ಹಲವು ವಿಸ್ತರಣ ಕಾರ್ಯಕ್ರಮಗಳಿಗೆ ಅನುಕೂಲ ವಾತಾವರಣ ಕಲ್ಪಿಸಲ್ಪಡುವುದು.

(4) ರೈತರ ವೈಯಕ್ತಿಕ ಹಾಗೂ ಸಾಮೂಹಿಕ ಸಮಸ್ಯೆಗಳ ಸ್ವರೂಪವನ್ನು ಗುರುತಿಸಲು ಹಾಗೂ ಪರಿಹಾರ ನೀಡಲು ಸಾಧ್ಯವಾಗುತ್ತದೆ.

ಇತಿಮಿತಿ ನ್ಯೂನತೆಗಳು :

ಈ ಪದ್ಧತಿಗೆ ಹಲವಾರು ಮಿತಿಗಳಿವೆ. ಅನೇಕ ಸಂದರ್ಭಗಳಲ್ಲಿ ಈ ಪದ್ಧತಿಯು ಬಯಸಿದ ಪ್ರಯೋಜನ ಸಾಧಿಸದೆ ಹೋಗಬಹುದು. ಅವುಗಳೆಂದರೆ:

(1) ವಿಸ್ತರಣ ಕಾರ್ಯಕರ್ತನು ಯಾವಾಗಲೂ ತನ್ನ ಕಛೇರಿಯಲ್ಲಿರುವ ಸಾಧ್ಯತೆ ಕಡಿಮೆ.

(2) ಸಂದರ್ಶಕರು ವಿಸ್ತರಣ ಕಾರ್ಯಕರ್ತನ ಗೈರುಹಾಜರಿಯಲ್ಲಿ ದೊರೆತ ಮಾಹಿತಿಯಿಂದ ತೃಪ್ತಿಗೊಳ್ಳದೆ ಇರಬಹುದು.

(3) ಕೆಲವು ವ್ಯಕ್ತಿಗಳು ಕಛೇರಿಯ ಭೆಟ್ಟಿಯನ್ನು ಸ್ವಾರ್ಥಸಾಧನೆಗೆ ಯತ್ನಿಸಬಹುದು.

(4) ಹಲವು ಸಂದರ್ಭಗಳಲ್ಲಿ ವಿಸ್ತರಣ ಕಾರ್ಯಕರ್ತನನ್ನು ಕಾಣಲಿಕ್ಕೆ ರೈತರು ಬಹು ಸಮಯ ಕಳೆಯಬೇಕಾಗುವುದು ಹಾಗೂ ಈ ಕಾರ್ಯ ಅಧಿಕ ಖರ್ಚಿನದಾಗಬಹುದು.

3. ವೈಯಕ್ತಿಕ ಪತ್ರ (ಪರ್ಸನಲ್ ಲೆಟರ್)

ವೈಯಕ್ತಿಕ ಪತ್ರಗಳು ವಿವರಣಾತ್ಮಕ ಅಥವಾ ಸಂಕ್ಷಿಪ್ತ ವಿಚಾರಗಳನ್ನೊಳಗೊಂಡಿರುತ್ತವೆ. ವಿಸ್ತರಣ ಕಾರ್ಯಕರ್ತನು ಸಂಬಂಧಿಸಿದ ರೈತರಿಗಾಗಲಿ ಅಥವಾ

ರೈತರು ತಮ್ಮ ಕೃಷಿ ಸಮಸ್ಯೆ ಕುರಿತು ವಿಸ್ತರಣ ಕಾರ್ಯಕರ್ತರಿಗಾಗಲಿ ಬರೆದ ಓಲೆಗಳಿವು. ಇಲ್ಲಿ ವಿಸ್ತರಣ ಕಾರ್ಯಕರ್ತನು ರೈತರಿಗೆ ಬರೆಯುವ ವೈಯಕ್ತಿಕ ಪತ್ರದ ಬಗ್ಗೆ ಮಾತ್ರ ಚರ್ಚಿಸಿದೆ. ರೈತರಿಗೆ ಸುಧಾರಿಸಿದ ಕೃಷಿ ಪದ್ಧತಿಗಳ ಬಗ್ಗೆ ಮಾಹಿತಿ ಅಥವಾ ರೈತರ ವಿಶಿಷ್ಟ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕೊಡುವುದೇ ಈ ಪತ್ರಗಳ ಮುಖ್ಯ ಉದ್ದೇಶ.



ಚಿತ್ರ 5: ವೈಯಕ್ತಿಕ ಪತ್ರ

ವೈಯಕ್ತಿಕ ಪತ್ರ ಬರೆಯುವಾಗ ವಿಸ್ತರಣ ಕಾರ್ಯಕರ್ತನು ಕೆಲವು ಅಂಶಗಳನ್ನು ಗಮನದಲ್ಲಿಡಬೇಕಾಗುವುದು. ಅವುಗಳೆಂದರೆ:

(1) ಪತ್ರವು ಪರಿಪೂರ್ಣವಾಗಿರಬೇಕು; ವಿವರಣೆಗಳಿಂದ ಕೂಡಿರಬೇಕು.

(2) ಅದರಲ್ಲಿ ವಿಷಯಗಳ ಅನುಕ್ರಮ ಜೋಡಣೆ ಇರಬೇಕು; ಅನವಶ್ಯಕ ವಿವರಣೆಗಳು ಇರಬಾರದು.

(3) ರೈತರಿಗೆ ಸುಲಭವಾಗಿ ಅರ್ಥವಾಗುವ ಭಾಷೆಯಲ್ಲಿ ಅದು ಇರಬೇಕು.

(4) ಸಮಸ್ಯೆಗಳಿಗೆ ನಿರ್ದಿಷ್ಟವಾದ, ಸಮರ್ಪಕವಾದ ಪರಿಹಾರೋಪಾಯ ಪತ್ರದಲ್ಲಿರಬೇಕು.

(5) ಸಮರ್ಪಕ ಉತ್ತರಕೊಟ್ಟು ಅಗತ್ಯವಾದ ಉದಾಹರಣೆಗಳನ್ನು ಕೊಡುವುದು ಸೂಕ್ತ. ಅವಶ್ಯಬಿದ್ದಲ್ಲಿ ಆ ವಿಷಯದ ಬಗ್ಗೆ ನಂತರವೂ ಹೆಚ್ಚಿಗೆ ವಿವರಣೆ ಕೊಡುವುದು ಅವಶ್ಯವಿದ್ದರೆ ಹಾಗೆ ಮಾಡಲು ಮರೆಯಬಾರದು.

ಪ್ರಯೋಜನ ಲಾಭಗಳು :

(1) ವೈಯಕ್ತಿಕ ಪತ್ರಗಳು ವಿಸ್ತರಣ ಕಾರ್ಯಕರ್ತ ಮತ್ತು ರೈತರ ನಡುವೆ ವಿಶ್ವಾಸವನ್ನುಂಟುಮಾಡುತ್ತವೆ.

(2) ಪ್ರಗತಿಪರ ರೈತರೊಂದಿಗೆ ಸಂಪರ್ಕವಿರಿಸಿಕೊಳ್ಳಲು ಇದು ಒಂದು ಮಿತ ವ್ಯಯದ ಮತ್ತು ಸುಲಭದ ಸಾಧನವಾಗಿದೆ.

(3) ರೈತನು ಕಾರ್ಯಕರ್ತರಿಂದ ಬಂದ ಪತ್ರ ಓದಿ ಹೆಮ್ಮೆಪಡುತ್ತಾನೆ. ಇದರಿಂದ ಮುಂದಿನ ವಿಸ್ತರಣ ಕಾರ್ಯಕ್ರಮ ಸುಗಮವಾಗುತ್ತದೆ.

(4) ರೈತನಿಗೆ ವಿಸ್ತರಣ ಕಾರ್ಯಕರ್ತನನ್ನು ಮುಖತಃ ಭೆಟ್ಟಿಮಾಡಲು ಸಾಧ್ಯವಿಲ್ಲದಿದ್ದಾಗ ಪತ್ರಬರೆಯುವುದರ ಮೂಲಕ ಇಚ್ಛಿತ ಮಾಹಿತಿಯನ್ನು ತರಿಸಿಕೊಳ್ಳುತ್ತಾನೆ. ವಿಸ್ತರಣ ಕಾರ್ಯಕರ್ತರ ರೈತನ ಸಮಸ್ಯೆಯು ಜಟಿಲವಾಗಿದ್ದಾಗ ತಜ್ಞರೊಡನೆ ಸ್ವತಃ ರೈತರ ಹೊಲಗಳಿಗೇನೇ ಭೆಟ್ಟಿಕೊಟ್ಟು ಸಮಸ್ಯೆಗೆ ಪರಿಹಾರವನ್ನು ಒದಗಿಸಬೇಕಾಗುತ್ತದೆ. ಈ ವಿಷಯಗಳನ್ನೇ ಪತ್ರದಲ್ಲಿ ಬರೆಯುತ್ತಾರೆ.

ಇತಿಮಿತಿ ನ್ಯೂನತೆಗಳು :

(1) ಅನಕ್ಷರಸ್ತ ರೈತರೊಂದಿಗೆ ಪತ್ರವ್ಯವಹಾರ ಸಾಧ್ಯವಿಲ್ಲ.

(2) ಪತ್ರಗಳು ಸಕಾಲಕ್ಕೆ ತಲುಪದೆ ಇರಬಹುದು.

(3) ರೈತನಿಗೆ ಬೇಕಾದ ಕೆಲವು ಸೂಕ್ಷ್ಮ ವಿವರಣೆಗಳನ್ನು ಪತ್ರ ಮುಖಾಂತರ ತಿಳಿಸಲು ಸಾಧ್ಯವಾಗದೆ ಹೋಗಬಹುದು.

4. ದೂರವಾಣಿ ಕರೆ (ಟೆಲಿಫೋನ್ ಕಾಲ್) :

ರೈತರ ಮತ್ತು ವಿಸ್ತರಣ ಕಾರ್ಯಕರ್ತರ ನಡುವೆ ತ್ವರಿತವಾದ ಸಂಪರ್ಕವನ್ನು ಕಲ್ಪಿಸಿ, ವಿಚಾರ ವಿನಿಮಯಕ್ಕೆ ಅನುಕೂಲ ಮಾಡಿಕೊಡುವ ಸಾಧನವಿದು. ರೈತನ

ಸಮಸ್ಯೆಗಳಿಗೆ ವಿಸ್ತರಣ ಕಾರ್ಯಕರ್ತರು ಅಥವಾ ತಜ್ಞರು ಸಮರ್ಪಕ ಪರಿಹಾರೋಪಾಯಗಳನ್ನು ಕೊಡುವುದಕ್ಕಾಗಿ, ಸಕಾಲದಲ್ಲಿ ಸಲಹೆಗಳನ್ನು ಪಡೆಯುವುದಕ್ಕಾಗಿ ಹಾಗೂ ನಿಗದಿಮಾಡಿದ ವೇಳೆಯಲ್ಲಿ ಗುಂಪುಸಭೆ ಅಥವಾ ವಿಚಾರವಿನಿಮಯ ಸಭೆಗಳನ್ನು ಏರ್ಪಡಿಸಲು ಸಾಧ್ಯತೆ ಮಾಡುವುದಕ್ಕಾಗಿ ಟೆಲಿಫೋನ್‌ದ ಉಪಯೋಗ ಹೆಚ್ಚು ಪ್ರಯೋಜನಕ್ಕೆ ಬರುವುದು.

ದೂರವಾಣಿಯಲ್ಲಿ ಮಾತನಾಡುವಾಗ ವಿಸ್ತರಣ ಕಾರ್ಯಕರ್ತನು ಸಮರ್ಪಕವಾದ ಸಲಹೆಗಳನ್ನು ಕೊಡಬೇಕು; ಸ್ವಾಭಾವಿಕವಾದ ಧ್ವನಿಯಲ್ಲಿ ಮಾತನಾಡಿದಾಗಲೂ ದೂರವಾಣಿಯ ಮತ್ತೊಂದು ಕೊನೆಯಲ್ಲಿ ಇರುವವರಿಗೆ ಸ್ಪಷ್ಟವಾಗಿ ಕೇಳುವಂತೆ ಮಾತನಾಡಬೇಕು. ದೂರವಾಣಿಯಲ್ಲಿ ಮಾತಾಡಿದನಂತರ ಸಹಾಯ ಕೇಳಿದವರ ಹೆಸರು ಮತ್ತು ವಿಳಾಸಗಳನ್ನು ಬರೆದಿಡಬೇಕು. ಮಾತನಾಡುವುದು ಮುಗಿದ ಮೇಲೆ ಅವಶ್ಯಬಿದ್ದರೆ ಬೇಡಿಕೆಗಳಿಗೆ ಸಂಬಂಧಪಟ್ಟ ಸುತ್ತೋಲೆ ಅಥವಾ ಇನ್ನಿತರ ಸಾಹಿತ್ಯಸಾಮಗ್ರಿಗಳಿದ್ದರೆ ಕಳುಹಿಸಬೇಕು. ವೈಯಕ್ತಿಕ ಪತ್ರ ಬರೆಯುವುದು ಅವಶ್ಯವಿದ್ದರೆ ಅದನ್ನೂ ಮಾಡಬೇಕು.



ಚಿತ್ರ 6 : ದೂರವಾಣಿಕರೆ

ಪ್ರಯೋಜನ ಲಾಭಗಳು :

(1) ದೂರವಾಣಿ ಸಂಪರ್ಕವು ರೈತರಿಗೆ ವಿಸ್ತರಣ ಕಛೇರಿ ಮತ್ತು ವಿಸ್ತರಣ ಕಾರ್ಯಕರ್ತರಲ್ಲಿ ವಿಶ್ವಾಸವನ್ನು ಹುಟ್ಟಿಸುತ್ತದೆ.

(2) ಅತಿ ಕಡಿಮೆ ವೇಳೆ ಮತ್ತು ಖರ್ಚಿನಲ್ಲಿ, ತ್ವರಿತವಾಗಿ ಇಚ್ಛಿತ ಮಾಹಿತಿ ದೂರವಾಣಿಯಿಂದ ಕಳಿಸಬಹುದು ಹಾಗೂ ತರಿಸಿಕೊಳ್ಳಬಹುದು. ಕಾರ್ಯಕ್ರಮಗಳು ಇದರಿಂದ ಹಲವಾರು ಪೂರ್ವಯೋಜನೆ ಮಾಡಲು ಸಹಾಯಕವಾಗುವುದು.

(3) ದೂರವಾಣಿ ನೆರವಿನಿಂದ ನವೀನ ಕೃಷಿವಿಜ್ಞಾನ ವಿಷಯಗಳ ಅತಿ ಶೀಘ್ರ ಪ್ರಸಾರಣೆ ಸಾಧ್ಯವಾಗುತ್ತದೆ.

ಇತಿಮಿತಿ ನ್ಯೂನತೆಗಳು :

(1) ಹಲವಾರು ಗ್ರಾಮಾಂತರ ಪ್ರದೇಶಗಳಲ್ಲಿ ದೂರವಾಣಿಯ ಅನುಕೂಲತೆ ಇರುವುದಿಲ್ಲ.

(2) ದೂರವಾಣಿಯಲ್ಲಿ ಸಂಭಾಷಣೆ ನಡೆಯುವ ಅಲ್ಪ ಸಮಯದಲ್ಲಿ ಕ್ಲಿಷ್ಟ ವಾದ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಕಷ್ಟವಾಗುತ್ತದೆ. ಅದರಲ್ಲಿಯೂ ಹೆಚ್ಚಿನ ಶಿಕ್ಷಣವಿಲ್ಲದ ರೈತರಿಗೆ ಕಷ್ಟವಾಗುತ್ತದೆ.

(3) ಮುಖ್ಯ ವಿಷಯ ತಿಳಿಸುವ ಕಾಲದಲ್ಲಿ ಸಂಪರ್ಕ ಕಡಿದುಹೋದರೆ ನಿರಾಶೆ ಹಾಗೂ ತೊಂದರೆ ಉಂಟಾಗುತ್ತದೆ.

(4) ದೂರವಾಣಿಯ ಮೂಲಕ ವೈಜ್ಞಾನಿಕ ವಿಷಯಗಳನ್ನು ವಿವರವಾಗಿ ತಿಳಿಸಲು ಅನೇಕಸಲ ಸಾಧ್ಯವಾಗುವುದಿಲ್ಲ. ಏಕೆಂದರೆ ಅಂಥ ವಿಷಯದಲ್ಲಿ ಅಡಗಿರುವ ತತ್ವವನ್ನು ರೈತನಿಗೆ ಸ್ವಲ್ಪ ಸಮಯದಲ್ಲಿ ಅರ್ಥಮಾಡಿಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಸಾಮಾನ್ಯ ವಾಗಿ ದೂರವಾಣಿ ಕರೆಯನ್ನು ಸಹಾಯಕ ಶಿಕ್ಷಣ ಪದ್ಧತಿಯನ್ನಾಗಿ ಉಪಯೋಗಿಸಿ ಕೊಳ್ಳಲಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ದೂರವಾಣಿಯ ಕೊರತೆಯಿರುವುದ ರಿಂದಲೂ ಮತ್ತು ರೈತರಲ್ಲಿ ಬಹುಪಾಲು ಅವಿದ್ಯಾವಂತರಿರುವುದರಿಂದಲೂ ಈ ಪದ್ಧತಿಯನ್ನು ನಮ್ಮ ದೇಶದ ಕೃಷಿ ವಿಸ್ತರಣ ಕಾರ್ಯಕ್ರಮಗಳಲ್ಲಿ ಅತ್ಯಲ್ಪ ಪ್ರಮಾಣ ದಲ್ಲಿ ಉಪಯೋಗಿಸಿಕೊಳ್ಳಲಾಗುತ್ತದೆ.

5. ಪರಿಣಾಮ ಪ್ರಾತ್ಯಕ್ಷಿಕೆ (ರಿಜಲ್ಟ್ ಡೆಮಾನ್‌ಸ್ಟ್ರೇಶನ್) :

ಪರಿಣಾಮ ಪ್ರಾತ್ಯಕ್ಷಿಕೆ ಎಂದರೆ ಸುಧಾರಿಸಿದ ಕೃಷಿ ಪದ್ಧತಿಯನ್ನು ಸ್ಥಳೀಯ ವಾಗಿ, ಪ್ರತ್ಯಕ್ಷವಾಗಿ ಸ್ಥಿರಗೊಳಿಸುವಿಕೆ. ಹೊಸ ಪದ್ಧತಿಯ ಪರಿಣಾಮವನ್ನು ದೃಢೀ ಕರಿಸುವುದಕ್ಕಾಗಿ ಹಾಗೂ ಶಿಫಾರಸ್ಸುಗಳನ್ನು ಸ್ಥಳೀಯವಾಗಿ ಅಂಗೀಕರಿಸುವಂತೆ ಮಾಡು ವುದಕ್ಕಾಗಿ ಪರಿಣಾಮ ಪ್ರಾತ್ಯಕ್ಷಿಕೆಗಳನ್ನು ವಿಸ್ತರಣ ಕಾರ್ಯಕರ್ತರು ಕೈಗೊಳ್ಳುವರು.

ಪರಿಣಾಮ ಪ್ರಾತ್ಯಕ್ಷಿಕೆಗಳು ಸರಳ ಹಾಗೂ ಸಂಯುಕ್ತವೆಂದು ಎರಡು ತೆರನಾಗಿವೆ.

ಸರಳ ಪರಿಣಾಮ ಪ್ರಾತ್ಯಕ್ಷಿಕೆಯು ಸಾಮಾನ್ಯವಾಗಿ ಒಂದೇ ಸುಧಾರಿಸಿದ ಕೃಷಿ ಪದ್ಧತಿಯ ಪರಿಣಾಮ ದೃಢೀಕರಿಸುತ್ತದೆ. ಉದಾಹರಣೆಗೆ, ಬೆಳೆಗಳಿಗೆ ರಸಾಯನಿಕ ಗೊಬ್ಬರದ ಉಪಯೋಗ ಬಿಂಬಿಸುವಿಕೆ.

ಸಂಯುಕ್ತ ಪರಿಣಾಮ ಪ್ರಾತ್ಯಕ್ಷಿಕೆಯು ಒಂದಕ್ಕಿಂತ ಹೆಚ್ಚು ಸುಧಾರಿಸಿದ ಕೃಷಿ ಪದ್ಧತಿಗಳ ಪರಿಣಾಮವನ್ನು ದೃಢೀಕರಿಸುತ್ತದೆ. ಉದಾಹರಣೆಗೆ, ಹೈಬ್ರಿಡ್ ಮುಸುಕಿನ ಜೋಳ ಬೆಳೆಸುವಿಕೆ.

ಪರಿಣಾಮ ಪ್ರಾತ್ಯಕ್ಷಿಕೆಗಳನ್ನು ಅವು ನಡೆಯುವ ಕಾಲಕ್ಕನುಸರಿಸಿ ಅಲ್ಪಾವಧಿ ಹಾಗೂ ದೀರ್ಘಾವಧಿ ಪ್ರಾತ್ಯಕ್ಷಿಕೆಗಳೆಂದೂ ವರ್ಗೀಕರಿಸಬಹುದು. ಕೆಲವು ಪ್ರಾತ್ಯಕ್ಷಿಕೆಗಳು ಕೇವಲ ಒಂದೇ ಋತುವಿನಲ್ಲಿ ಪೂರೈಸಿಬಿಡುತ್ತವೆ; ಇವು ಅಲ್ಪಾವಧಿ ಪರಿಣಾಮ ಪ್ರಾತ್ಯಕ್ಷಿಕೆಗಳು. ಉದಾಹರಣೆಗೆ, ಬೆಳೆಗಳಿಗೆ ರಸಾಯನಿಕ ಗೊಬ್ಬರದ ಉಪಯೋಗ ವಿವರಿಸುವ ಪ್ರಾತ್ಯಕ್ಷಿಕೆ. ಕೆಲವು ಪರಿಣಾಮ ಪ್ರಾತ್ಯಕ್ಷಿಕೆಗಳು ಒಂದು ಋತುವಿಗಿಂತ ಹೆಚ್ಚುಕಾಲ ರೈತನ ಜಮೀನಿನಲ್ಲಿರಬೇಕಾಗುತ್ತದೆ; ಇಂಥ ಪ್ರಾತ್ಯಕ್ಷಿಕೆಗಳು ದೀರ್ಘಾವಧಿ ಪ್ರಾತ್ಯಕ್ಷಿಕೆಗಳು. ಉದಾಹರಣೆಗೆ, ಬೆಳೆಗಳ ಪರಿವರ್ತನೆ (ಕಾಲುಗೈ) ಬಿಂಬಿಸುವ ಪ್ರಾತ್ಯಕ್ಷಿಕೆ. ರಾಷ್ಟ್ರೀಯ ಪರಿಣಾಮ ಪ್ರಾತ್ಯಕ್ಷಿಕೆಗಳು ದೀರ್ಘಾವಧಿ ಪರಿಣಾಮ ಪ್ರಾತ್ಯಕ್ಷಿಕೆಯ ಮಾದರಿಗಳು. ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ಎರಡು ಅಥವಾ ಮೂರು ಬೆಳೆಗಳನ್ನು ಒಂದರ ನಂತರ ಮತ್ತೊಂದು ಬೆಳೆದು ಅತಿ ಹೆಚ್ಚು ಸಂಪಾದನೆ ಹೇಗೆ ಮಾಡಬಹುದೆಂಬುದನ್ನು ತೋರಿಸುವುದು ಈ ಪ್ರಾತ್ಯಕ್ಷಿಕೆಗಳ ಉದ್ದೇಶ.

ಪರಿಣಾಮ ಪ್ರಾತ್ಯಕ್ಷಿಕೆಯನ್ನು ಕೈಗೊಳ್ಳುವಿಕೆ : ಪರಿಣಾಮ ಪ್ರಾತ್ಯಕ್ಷಿಕೆಯನ್ನು ಕೈಕೊಳ್ಳಲು ಮೊದಲು ಯೋಜನೆಯನ್ನು ಸಿದ್ಧಪಡಿಸಬೇಕಾಗುವುದು. ನಂತರ ಅದನ್ನು ನೆರವೇರಿಸಬೇಕಾಗುವುದು. ಕೊನೆಯಲ್ಲಿ ಅದನ್ನು ಸುತ್ತಮುತ್ತಲಿನ ರೈತರಿಗೆ ಮನಗಾಣಿಸಲು ಉಪಯೋಗಿಸಬೇಕಾಗುವುದು.

ಯೋಜನೆಯನ್ನು ಸಿದ್ಧಪಡಿಸುವಾಗ್ಗೆ ಪ್ರಾತ್ಯಕ್ಷಿಕೆಯ ಅವಶ್ಯಕತೆಯನ್ನು ನಿರ್ಧರಿಸಬೇಕು. ಸಂಬಂಧಪಟ್ಟ ರೈತರೊಡನೆ ವಿಚಾರ ವಿನಿಮಯ ಮತ್ತು ಸ್ಥಳೀಯ ಕೃಷಿ ಪದ್ಧತಿಗಳ ಪರಿಶೀಲನೆ ನಡೆಸಬೇಕು; ತಜ್ಞರೊಡನೆ ವಿಚಾರವಿನಿಮಯವೂ ಅವಶ್ಯವಿರುತ್ತದೆ. ನಂತರ ಲಿಖಿತ ಯೋಜನೆ ತಯಾರಿಸಿ, ಪ್ರಾತ್ಯಕ್ಷಿಕೆಗೆ ಬೇಕಾದ ಸಲಕರಣೆಗಳನ್ನು ಹೊಂದಿಸಿಟ್ಟುಕೊಳ್ಳಬೇಕಾಗುತ್ತದೆ.

ಪ್ರಾತ್ಯಕ್ಷಿಕೆ ಕೈಗೊಳ್ಳುವ ರೈತನ ಆಯ್ಕೆ ತುಂಬಾ ಮಹತ್ವದ್ದು. ಪ್ರಾತ್ಯಕ್ಷಿಕೆ ಕೈಗೊಳ್ಳುವ ರೈತನನ್ನು ಸಾಧ್ಯವಿದ್ದಷ್ಟು ಗುಂಪುಸಭೆಯಲ್ಲಿ ಆಯ್ಕೆಮಾಡಬೇಕು. ಸಾಧ್ಯವಾದಷ್ಟು ಆಯ್ಕೆಮಾಡಿದ ರೈತನು ಸಾಮಾನ್ಯ ರೈತರ ಗುಂಪಿಗೆ ಸೇರಿದವನಾಗಿರಬೇಕು. ಅವನು ವಿಸ್ತರಣ ಕಾರ್ಯಕರ್ತನೊಂದಿಗೆ ಎಲ್ಲ ವಿಧದಲ್ಲಿಯೂ ಸಹಕರಿಸು

ವಂಥವನಿರಬೇಕು. ಆತನಿಗೆ ಪ್ರಾತ್ಯಕ್ಷಿಕೆಯ ಬಗೆಗಿನ ಕರ್ತವ್ಯ ಮತ್ತು ಹೊಣೆಗಾರಿಕೆಯನ್ನು ಪ್ರಾರಂಭದಲ್ಲಿಯೇ ಸರಿಯಾಗಿ ತಿಳಿಸಿ ಹೇಳಬೇಕು. ಪ್ರಾತ್ಯಕ್ಷಿಕೆ ಬಗ್ಗೆ ಅವನಿಗೆ ಸಂಪೂರ್ಣ ಮಾಹಿತಿ ಕೊಡಬೇಕು. ಅದರಲ್ಲಿ ಪ್ರಾತ್ಯಕ್ಷಿಕೆ ಮಾಡುವ ವಿಧಾನ, ಬೇಕಾದ ಸಲಕರಣೆ ಇತ್ಯಾದಿಗಳ ವಿವರ ಸೇರಿರಬೇಕು.

ಪ್ರಾತ್ಯಕ್ಷಿಕೆಗೆ ತಾಕ(ಕ್ಷೇತ್ರ)ನ್ನು ಆಯ್ಕೆಮಾಡುವುದಕ್ಕೂ ವಿಸ್ತರಣ ಕಾರ್ಯಕರ್ತನು ವಿಶೇಷ ಗಮನ ನೀಡುವುದು ಅವಶ್ಯವಿದೆ. ಸಾಧ್ಯವಾದಷ್ಟು ಪ್ರಾತ್ಯಕ್ಷಿಕೆ ಎಲ್ಲ ರೈತರು ಸಂದರ್ಶನ ಮಾಡುವಂಥ ಸ್ಥಳದಲ್ಲಿರಬೇಕು. ಪ್ರಾತ್ಯಕ್ಷಿಕೆ ಕ್ಷೇತ್ರದ ಮಣ್ಣಿನ ಗುಣ, ಗ್ರಾಮದ ಸಾಮಾನ್ಯ ಮಣ್ಣಿನ ಗುಣದ ಪ್ರತೀಕವಾಗಿರಬೇಕು.

ಸಕಲ ಸಲಕರಣೆಗಳು ಸಿದ್ಧವಾಗಿಟ್ಟುಕೊಂಡು ಪ್ರಾತ್ಯಕ್ಷಿಕೆಯ ಪ್ರಾರಂಭದ ದಿನ ಪ್ರಾತ್ಯಕ್ಷಿಕೆಯ ವಿಷಯ ಬಿಂಬಿಸಬೇಕಾದವರೆಲ್ಲರನ್ನು ಪ್ರಾತ್ಯಕ್ಷಿಕೆಗೆ ಆಹ್ವಾನಿಸಬೇಕು. ಪ್ರಾತ್ಯಕ್ಷಿಕೆಯ ತಾಕನ್ನು ಅಳತೆಮಾಡಿ ಬೇಕಾದ ಬಿತ್ತನೆ, ರಸಾಯನ ಗೊಬ್ಬರ ಇತ್ಯಾದಿಗಳನ್ನು ಲೆಕ್ಕಾಚಾರ ಮಾಡಬೇಕು. ಸುಧಾರಿಸಿದ ಮತ್ತು ಸ್ಥಳೀಯ ಪದ್ಧತಿಗಳೆರಡನ್ನು ಅಳವಡಿಸುವ ಪ್ಲಾಟ್‌ಗಳ ವಿಸ್ತೀರ್ಣವನ್ನು ನಿಗದಿ ಮಾಡಬೇಕು. ಕೈಗೊಳ್ಳಬೇಕಾದ ಪ್ರತಿಯೊಂದು ಕಾರ್ಯದ ಬಗ್ಗೆ ಮಾಹಿತಿಯನ್ನು ವಿವರವಾಗಿ ರೈತರಿಗೆ ತಿಳಿಸಿ ಸ್ವತಃ ಮಾಡಿತೋರಿಸಬೇಕು. ನೆರೆದ ರೈತರಿಗೆ ಆ ಪದ್ಧತಿಗಳನ್ನು ರೂಢಿಸಿಕೊಳ್ಳಲು ಸ್ವತಃ ಮಾಡಲು ಹಚ್ಚಬೇಕು; ತಪ್ಪಿದಲ್ಲಿ ತಿದ್ದಬೇಕು. ಪ್ರಾತ್ಯಕ್ಷಿಕೆಯ ರೈತನಿಗೆ ಆಚರಿಸಿದ ಮತ್ತು ಆಚರಿಸುವ ಕ್ರಮಗಳ ಬಗ್ಗೆ ದಾಖಲೆಯನ್ನಿಡಲು ತಿಳಿಸಬೇಕು. ಪ್ರಾತ್ಯಕ್ಷಿಕೆ ನಿಯೋಜಿತ ಕ್ರಮಗಳನ್ನು ಅನುಸರಿಸಲು ಕಾಲಕಾಲಕ್ಕೆ ವಿಸ್ತರಣ ಕಾರ್ಯಕರ್ತನು ಪ್ರಾತ್ಯಕ್ಷಿಕಾ ಪ್ಲಾಟಿನ ರೈತನಿಗೆ ಸೂಕ್ತಸಲಹೆಗಳನ್ನು ತಪ್ಪದೆ ಕೊಡಬೇಕು. ಸೂಕ್ತ ಭಿತ್ತಿ ಫಲಕಗಳನ್ನು ನಿರ್ದಿಷ್ಟ ವಿವರಣೆಗಳೊಂದಿಗೆ ಪ್ಲಾಟಿನಲ್ಲಿ ಪ್ರದರ್ಶಿಸಬೇಕು.

ಪರಿಣಾಮ ಪ್ರಾತ್ಯಕ್ಷಿಕೆಗಳ ಉಪಯುಕ್ತತೆಯು, ಪ್ರಾತ್ಯಕ್ಷಿಕೆಯ ಅನೇಕ ಹಂತಗಳಲ್ಲಿ ಸಂಬಂಧಪಟ್ಟ ರೈತರಿಗೆ ಶೈಕ್ಷಣಿಕ ಕ್ಷೇತ್ರದರ್ಶನಗಳನ್ನು ಏರ್ಪಡಿಸುವುದರಿಂದ ಹಾಗೂ ಕ್ಷೇತ್ರೋತ್ಸವಗಳನ್ನು ಏರ್ಪಡಿಸುವುದರಿಂದ ಹೆಚ್ಚುವುದು. ಆ ಸಮಯಗಳಲ್ಲಿ ದೃಷ್ಟಿಗೋಚರ ಸಾಧನಗಳಾದ ಛಾಯಾಚಿತ್ರಗಳು ಮತ್ತು ರೇಖಾಪಟಗಳನ್ನು ಉಪಯೋಗಿಸಿ ನೆರೆದ ಜನತೆಗೆ ಸಂಬಂಧಪಟ್ಟ ವಿಷಯ ತಿಳಿಸಿಕೊಡಬೇಕು. ವೃತ್ತಪತ್ರಿಕೆ, ವಿಸ್ತರಣ ಹಸ್ತಪತ್ರಿಕೆ ಮತ್ತು ಬಾನುಲಿಗಳ ಮೂಲಕ ಪ್ರಾತ್ಯಕ್ಷಿಕೆಯ ಫಲಿತಾಂಶಗಳನ್ನು ಸಾದರಪಡಿಸಬೇಕು. ರೈತರ ಸಭೆ ಮತ್ತು ಚರ್ಚಾಸಭೆಗಳಲ್ಲಿ ಪ್ರಾತ್ಯಕ್ಷಿಕೆ ಕೈಗೊಂಡ ರೈತನನ್ನು ಉಪಯೋಗಿಸಿಕೊಳ್ಳಬೇಕು.

ಪ್ರಾತ್ಯಕ್ಷಿಕೆಯನ್ನೇರ್ಪಡಿಸುವಾಗ ಹಾಗೂ ಅವುಗಳಿಂದ ಪ್ರಯೋಜನ ಪಡೆಯಲು ಗಮನದಲ್ಲಿಡಬೇಕಾದ ಅಂಶಗಳು:

(1) ಅವಶ್ಯಕತೆ ಇದ್ದ ಕಡೆಗಳಲ್ಲಿ ಮಾತ್ರ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಬೇಕು.

(2) ಜವಾಬ್ದಾರಿಯುತ ರೈತನನ್ನು ಪ್ರಾತ್ಯಕ್ಷಿಕೆಗೆ ಆರಿಸಬೇಕು.

(3) ಸುಧಾರಿಸಿದ ಪದ್ಧತಿಯ ಪ್ಲಾಟಿನ ಬದಿಯಲ್ಲಿ ಸ್ಥಳೀಯ ಪದ್ಧತಿಯ ಪ್ಲಾಟು ಅವಶ್ಯಕವಾಗಿ ಇರಲೇಬೇಕು. ಈ ಸ್ಥಳೀಯ ಪ್ಲಾಟಿಗೆ ನಿಯಂತ್ರಿತ ಪ್ಲಾಟೆಂದು ಹೆಸರು. ರಾಷ್ಟ್ರೀಯ ಮತ್ತು ಹೊಸ ಬೆಳೆ ಪ್ರಯೋಗಿಸಿ ಮನಗಾಣುವೆಡೆಗಳಲ್ಲಿ ನಿಯಂತ್ರಿತ ಪ್ಲಾಟು ಇರುವ ಅವಶ್ಯಕತೆಯಿಲ್ಲ.

(4) ಹಲವಾರು ಪರಿಣಾಮರಹಿತ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದರ ಬದಲು ಹೆಚ್ಚು ಪರಿಣಾಮಕಾರಿಯಾದ ಒಂದೇ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸುವುದು ಉತ್ತಮ.

(5) ಪ್ರಾತ್ಯಕ್ಷಿಕೆಗಳನ್ನು, ಅನೇಕ ಹಂತಗಳಲ್ಲಿ ಇತರ ರೈತರಿಗೆ ಶಿಕ್ಷಣ ಮತ್ತು ತರಬೇತಿ ಕೊಡಲು ಉಪಯೋಗಿಸಬೇಕು.

(6) ಪ್ರಾತ್ಯಕ್ಷಿಕೆಗಾರ ರೈತನಿಗೆ ಸೂಕ್ತ ಮನ್ನಣೆ ಕೊಡಬೇಕು.



ಚಿತ್ರ 7 : ಪರಿಣಾಮ ಪ್ರಾತ್ಯಕ್ಷಿಕೆ

(7) ಪ್ರಾತ್ಯಕ್ಷಿಕೆಗಳು ವಿಫಲವಾದಲ್ಲಿ, ಕಾರಣಗಳನ್ನು ಕೂಲಂಕಷವಾಗಿ ಶೋಧಿಸಿ ಸಂಬಂಧಪಟ್ಟ ರೈತರಿಗೆ ತಿಳಿಸಬೇಕು.

(8) ನಂತರದ ವಿಸ್ತರಣ ಕಾರ್ಯಕ್ರಮಗಳಲ್ಲಿ ಪ್ರಾತ್ಯಕ್ಷಿಕೆ ಫಲಿತಾಂಶಗಳನ್ನು ಹಾಗೂ ಪ್ರಾತ್ಯಕ್ಷಿಕೆಗಾರ ರೈತನನ್ನು ಉಪಯೋಗಿಸಿಕೊಳ್ಳಬೇಕು.

(9) ಒಬ್ಬನೇ ರೈತನ ಜಮೀನಿನಲ್ಲಿ ಮೇಲಿಂದ ಮೇಲೆ ಪ್ರಾತ್ಯಕ್ಷಿಕೆಗಳನ್ನು ಮಾಡಬಾರದು.

(10) ಉತ್ತಮ ಪ್ರಾತ್ಯಕ್ಷಿಕೆಗಳನ್ನು ಉಪಯೋಗಿಸಿಕೊಂಡು ಸ್ಥಳೀಯ ವಿಸ್ತರಣ ಕಾರ್ಯಕರ್ತರಿಗೆ ತರಬೇತಿ ಕೊಡಬೇಕು.

ಪ್ರಯೋಜನ-ಲಾಭಗಳು:

(1) ಹೊಸ ಪದ್ಧತಿಯ ಪರಿಣಾಮವನ್ನು ದೃಢೀಕರಿಸಲು ಪರಿಣಾಮ ಪ್ರಾತ್ಯಕ್ಷಿಕೆಯಿಂದ ಮಾತ್ರ ಸಾಧ್ಯ.

(2) ಪ್ರತ್ಯಕ್ಷವಾಗಿ ಪ್ರಮಾಣೀಕರಿಸಲು ಪರಿಣಾಮ ಪ್ರಾತ್ಯಕ್ಷಿಕೆಗಳಿಗಿಂತ ಪರಿಣಾಮ ಪದ್ಧತಿ ಇನ್ನೊಂದಿಲ್ಲ.

(3) ಈ ಪದ್ಧತಿಯು ರೈತರಲ್ಲಿ, ವಿಸ್ತರಣ ಕಾರ್ಯಕರ್ತರಲ್ಲಿ ಮತ್ತು ಹೊಸ ಪದ್ಧತಿಯಲ್ಲಿ ವಿಶ್ವಾಸವನ್ನುಂಟುಮಾಡುವ ಸಾಧನವು.

(4) ಪರಿಣಾಮ ಪ್ರಾತ್ಯಕ್ಷಿಕೆ, ರೈತರು ಹಾಗೂ ವಿಸ್ತರಣ ಕಾರ್ಯಕರ್ತರ ಸಂಪರ್ಕಾಭಿವೃದ್ಧಿಗೆ ಅನುವುಮಾಡಿಕೊಡುತ್ತದೆ.

(5) ಹೊಸ ಪದ್ಧತಿಯ ಪ್ರಚಾರಕ್ಕೆ ಈ ಪದ್ಧತಿಯು ಅನುಕೂಲ ಮಾಡುತ್ತದೆ.

(6) ವಿಸ್ತರಣ ಕಾರ್ಯಕರ್ತರು ಇತರ ಕೃಷಿ ಅಭಿವೃದ್ಧಿಯಲ್ಲಿ ಆಸಕ್ತಿ ಇರುವವರು ಹಾಗೂ ಕೃಷಿ ವಿಜ್ಞಾನದ ವಿದ್ಯಾರ್ಥಿಗಳಿಗೂ ತರಬೇತಿ ಕೊಡಲು ಈ ಪದ್ಧತಿಯಿಂದ ಸಹಾಯವಾಗುತ್ತದೆ.

(7) ರೈತರಿಗೆ ಮತ್ತು ರೈತ ಮುಖಂಡರಿಗೆ ತರಬೇತಿ ಕೊಡಲು ಪರಿಣಾಮ ಪ್ರಾತ್ಯಕ್ಷಿಕೆಯ ಪ್ಲಾಟು ಒಂದು ಪ್ರಯೋಗಾಲಯ.

(8) ಸಫಲ ಪ್ರಾತ್ಯಕ್ಷಿಕೆಗಳು ಸಂಬಂಧಪಟ್ಟ ಕೃಷಿ ಸಂಶೋಧಕರಿಗೆ ಉತ್ತೇಜನಕಾರಿಯಾಗುತ್ತವೆ.

ಇತಿ–ಮಿತಿಗಳು:

(1) ಎಲ್ಲ ತೆರನಾದ ಸುಧಾರಿಸಿದ ಪದ್ಧತಿಗಳಿಗೆ ಪರಿಣಾಮ ಪ್ರಾತ್ಯಕ್ಷಿಕೆ ಸೂಕ್ತವಾಗದೆ ಹೋಗಬಹುದು.

(2) ಕೆಲವು ಸಾರಿ ಪ್ರತಿಕೂಲ ಹವಾಮಾನದಿಂದ ಪ್ರಾತ್ಯಕ್ಷಿಕೆಯ ಪರಿಣಾಮ ನಶಿಸಬಹುದು.

(3) ಪ್ರಾತ್ಯಕ್ಷಿಕೆಯ ಬಗ್ಗೆ ದಾಖಲೆಗಳನ್ನಿಡುವ ರೈತರು ದೊರಕುವುದು ವಿರಳ.

(4) ವಿಫಲ ಪ್ರಾತ್ಯಕ್ಷಿಕೆಗಳು ಮುಂದಿನ ವಿಸ್ತರಣ ಕಾರ್ಯಕ್ರಮಗಳಿಗೆ ಅಡಚಣೆಯನ್ನುಂಟುಮಾಡುತ್ತವೆ.

(5) ಈ ಪದ್ಧತಿಗೆ ತಗಲುವ ವೇಳೆ ಮತ್ತು ವೆಚ್ಚ ಅಧಿಕ.

(6) ಕೆಲವು ಸಂದರ್ಭಗಳಲ್ಲಿ ವಿಫಲ ಪ್ರಾತ್ಯಕ್ಷಿಕೆಯ ಕಾರಣಗಳು ಸಂಬಂಧಪಟ್ಟ ಸಂಶೋಧಕರನ್ನು ಗೊಂದಲಕ್ಕೀಡುಮಾಡುತ್ತವೆ.

ಅಧ್ಯಾಯ 4

ಗುಂಪು ಪದ್ಧತಿಗಳು

ಸಾಮಾನ್ಯವಾಗಿ ರೈತನು ಯಾವುದೇ ಒಂದು ಅಥವಾ ಅನೇಕ ಗುಂಪುಗಳ ಸದಸ್ಯನಾಗಿರುವುದು ಸ್ವಾಭಾವಿಕ. ಆ ಗುಂಪಿನ ಅವಶ್ಯಕತೆಯೂ ಅವನಿಗಿರುತ್ತದೆ. ಅವನು ಕೆಲವೊಂದು ಸಮಸ್ಯೆಗಳ ಪರಿಹಾರಕ್ಕೆ ಇತರ ರೈತರೊಡನೆ ಸಹಕಾರದಿಂದ ಕೆಲಸಮಾಡುವುದು ಅನಿವಾರ್ಯ. ಈ ಗುಂಪುಗಳು ಸದಸ್ಯ ರೈತನ ಆದರ್ಶ, ಮೌಲ್ಯ ಮತ್ತು ತೀರ್ಮಾನಗಳ ಮೇಲೆ ಹೆಚ್ಚಿನ ಮತ್ತು ಪರಿಣಾಮಕಾರಿ ಪ್ರಭಾವ ಬೀರುತ್ತವೆ. ಈ ಅಂಶಗಳನ್ನು ವಿಸ್ತರಣ ಕಾರ್ಯಕರ್ತನು ಗಮನದಲ್ಲಿಟ್ಟುಕೊಂಡು ವಿಸ್ತರಣ ಕಾರ್ಯ ಕ್ರಮಗಳ ಯಶಸ್ಸಿಗೆ ಈ ಗುಂಪುಗಳನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳ ಬೇಕು. ಗುಂಪುಗಳಲ್ಲಿನ ರೈತರೊಡನೆ ಕಾರ್ಯಮಾಡಲು ಸಾಮಾನ್ಯ ಸಭೆ, ವಿಚಾರ ವಿನಿಮಯ ಸಭೆ, ಪದ್ಧತಿ ಪ್ರಾತ್ಯಕ್ಷಿಕೆ, ಕ್ಷೇತ್ರಸಂದರ್ಶನ, ಕ್ಷೇತ್ರೋತ್ಸವ, ಶೈಕ್ಷಣಿಕ ಪ್ರವಾಸ ಈ ಕೆಲವು ವಿಸ್ತರಣ ಪದ್ಧತಿಗಳನ್ನು ಅನುಸರಿಸಬೇಕಾಗುತ್ತದೆ.

1) ಸಾಮಾನ್ಯ ಸಭೆ (ಜನರಲ್ ಮೀಟಿಂಗ್):

ಯಾವುದೊಂದು ವಿಷಯಕ್ಕೆ ಸಂಬಂಧಪಟ್ಟ ರೈತರೆಲ್ಲರು ಸೇರಿದ ಸಭೆ ಆ ವಿಷಯದ ಬಗೆಗಿನ **ಸಾಮಾನ್ಯ ಸಭೆ.** ಹೊಸ ವಿಸ್ತರಣ ಕಾರ್ಯಕ್ರಮವನ್ನು ಪ್ರಾರಂಭಮಾಡುವುದಕ್ಕೆ, ವಿಸ್ತರಣ ಕಾರ್ಯಕರ್ತರನ್ನು ರೈತರಿಗೆ ಪರಿಚಯ ಮಾಡು ವುದಕ್ಕೆ, ಸ್ಥೂಲ ಸ್ವರೂಪದ ಕೆಲವು ಮಾಹಿತಿ ಕೊಡುವುದಕ್ಕೆ, ಕೆಲವು ವಿಶೇಷ ಸಂದರ್ಭ ಗಳಲ್ಲಿ ಎಲ್ಲರ ಅವಗಾಹನೆಗೆ ವಿಷಯ ತಂದು ಆ ವಿಷಯಗಳಲ್ಲಿ ನಿರ್ಣಯ ತೆಗೆದು ಕೊಳ್ಳುವುದಕ್ಕೆ, ವಿಸ್ತರಣ ಕಾರ್ಯಕ್ರಮಗಳನ್ನು ಬಹು ಜನರಿಗೆ ಶೈಕ್ಷಣಿಕವಾಗಿ ಅರಿವು ಮಾಡಿಕೊಡುವುದಕ್ಕೆ, ಇತರ ವಿಸ್ತರಣ ಪದ್ಧತಿ ಮತ್ತು ಕಾರ್ಯಕ್ರಮಗಳಿಗೆ ಮೊದಲನೇ ಹಂತವಾಗಿ ಹಾಗೂ ಸಾಮಾನ್ಯವಾಗಿ ರೈತರ ಪ್ರತಿಕ್ರಿಯೆ ತಿಳಿದುಕೊಳ್ಳುವುದಕ್ಕೆ ಸಾಮಾನ್ಯ ಸಭೆಗಳ ಅವಶ್ಯಕತೆಯಿರುತ್ತದೆ.

ಸಾಮಾನ್ಯ ಸಭೆ ಏರ್ಪಡಿಸುವಾಗ ಗಮನಿಸಬೇಕಾದ ಕೆಲವು ಅಂಶಗಳು:

(1) ಚರ್ಚಿಸುವ ವಿಷಯ ಸಂಬಂಧಪಟ್ಟ ರೈತರಿಗೆ ಅನ್ವಯಿಸುವಂತಿರಬೇಕು.

(2) ಪೂರ್ವಯೋಜನೆ ಮತ್ತು ಸಿದ್ಧತೆಗಳು ಅತ್ಯವಶ್ಯಕ. ಸಭಿಕರ ಸಂಖ್ಯೆಯ ಮೇಲೆ ಸಭೆಗಳ ಪೂರ್ವಸಿದ್ಧತೆ ಅವಲಂಬಿಸಿದೆ.


(3) ಚರ್ಚಿಸುವ ವಿಷಯದ ಬಗ್ಗೆ ವಿಸ್ತರಣ ಕಾರ್ಯಕರ್ತರು ಅವಶ್ಯಕ ಸಂಗತಿಗಳನ್ನೆಲ್ಲ ಅರಿತಿರಬೇಕು.

(4) ಸಭೆಯಲ್ಲಿ ಭಾಗವಹಿಸುವವರ ವಯಸ್ಸು, ಶಿಕ್ಷಣ, ಆರ್ಥಿಕ ಹಾಗೂ ಸಾಮಾಜಿಕ ಮಟ್ಟಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

(5) ಸೇರುವ ಸ್ಥಳ, ದಿನಾಂಕ ಮತ್ತು ವೇಳೆಗಳ ಬಗೆಗೆ ಸಾಕಷ್ಟು ಮೊದಲೇ ಹೆಚ್ಚಿನ ಪ್ರಚಾರ ಮಾಡಬೇಕು. ಸಾಮಾನ್ಯವಾಗಿ ಜನರು ಹೆಚ್ಚಾಗಿ ಸೇರುವ ಸ್ಥಳಗಳಲ್ಲಿ ಮತ್ತು ಸ್ಥಳೀಯ ಸೌಕರ್ಯಗಳು ದೊರಕುವ ಸ್ಥಳಗಳಲ್ಲಿ ಏರ್ಪಡಿಸಬೇಕು. ಸಭೆಗಳನ್ನು ಸಾಧ್ಯವಾದಷ್ಟು ಸದಸ್ಯರ ಬಿಡುವಿನ ವೇಳೆಯಲ್ಲಿ ಏರ್ಪಡಿಸಬೇಕು. ಸಭೆಗಳು ಪ್ರಚುರ ಪಡಿಸಿದ ಸ್ಥಳ ಹಾಗೂ ದಿನಾಂಕಗಳಲ್ಲಿ ಸಕಾಲದಲ್ಲಿ ಪ್ರಾರಂಭವಾಗಿ ನಿರ್ದಿಷ್ಟಪಡಿಸಿದ ಅವಧಿಯಲ್ಲಿ ಮುಗಿಯಬೇಕು.

(6) ಸ್ಥಳೀಯ ಮುಖಂಡರು ಸಭೆಗಳಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸುವಂತೆ ನೋಡಿಕೊಳ್ಳಬೇಕು.

(7) ಅನವಶ್ಯಕ ಮತ್ತು ವಿವಾದಾತ್ಮಕ ವಿಚಾರಗಳನ್ನು ಸಭೆಯಲ್ಲಿ ತರಬಾರದು.



ಚಿತ್ರ 8 : ಸಾಮಾನ್ಯ ಸಭೆ

(8) ಸುಲಭವಾಗಿ ಅರ್ಥವಾಗುವ ಶೈಲಿಯಲ್ಲಿ ಚರ್ಚೆನಡೆಯಬೇಕು. ಅದು ಸ್ಥಳೀಯ ಭಾಷೆಯಲ್ಲಿರಬೇಕು. ಸಂಬಂಧಿಸಿದ ಶ್ರವಣಚಕ್ಷು ಸಾಧನಗಳನ್ನು ಉಪಯೋಗಿಸಬೇಕು.

(9) ಪ್ರಾರಂಭದಲ್ಲಿಯೇ ಕ್ರಮಬದ್ಧವಾಗಿ ವಿಷಯವನ್ನು ವಿಸ್ತರಣ ಕಾರ್ಯಕರ್ತನು ಸಾದರಪಡಿಸಬೇಕು. ಮುಖ್ಯ ವಿಷಯಗಳನ್ನು ಒತ್ತಿಹೇಳಬೇಕು. ಜೊತೆಗೆ ವಿಷಯಕ್ಕೆ ಅನುಗುಣವಾಗಿ ವಿಸ್ತರಣ ಹಸ್ತಪತ್ರಿಕೆಗಳನ್ನು ಹಂಚಬೇಕು.

(10) ಸಭೆಗಳಲ್ಲಿ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡಬೇಕು. ಉತ್ತರಿಸಲಾಗದ ಪ್ರಶ್ನೆ ಮತ್ತು ಸಮಸ್ಯೆಗಳಿಗೆ ತದನಂತರ ಸೂಕ್ತ ಉತ್ತರಗಳನ್ನು ದೊರಕಿಸಿ ಸಂಬಂಧಪಟ್ಟವರಿಗೆ ತಲುಪಿಸಲು ಮರೆಯಬಾರದು.

(11) ಸಕಾಲದಲ್ಲಿ ಸಭೆಯ ಮುಕ್ತಾಯವಾಗಬೇಕು. ಕೊನೆಯಲ್ಲಿ ಸಭೆಯನ್ನು ಯಶಸ್ವಿಗೊಳಿಸಲು ಸಹಾಯಕರಾದ ಎಲ್ಲರಿಗೂ ವಂದನೆಸಲ್ಲಿಸಬೇಕು.

(12) ಸಭೆಯ ಉಪಯುಕ್ತತೆಯನ್ನು ಅಳೆ (ಮೌಲ್ಯಮಾಪನ)ಯುವುದು ಅವಶ್ಯ.

ಪ್ರಯೋಜನ ಲಾಭಗಳು :

ಸಾಮಾನ್ಯ ಸಭೆಗಳು:

(1) ಹೆಚ್ಚು ಜನರಿಗೆ ವಿಷಯಗಳನ್ನು ತಿಳಿಸಲು ಸಹಾಯಕವಾಗುತ್ತವೆ.

(2) ಎಲ್ಲ ತೆರನಾದ ವಿಷಯಗಳನ್ನು ರೈತರ ಮುಂದಿಡಲು ಉಪಯೋಗವಾಗುತ್ತವೆ.

(3) ಕಡಿಮೆ ವೆಚ್ಚದ ವಿಸ್ತರಣ ಪದ್ಧತಿಯೆಂದು ಹೇಳಬಹುದು.

(4) ರೈತರು ಮತ್ತು ವಿಸ್ತರಣ ಕಾರ್ಯಕರ್ತರಲ್ಲಿ ಅನ್ಯೋನ್ಯತೆ ಭಾವನೆ ಹುಟ್ಟಿಸುತ್ತವೆ.

(5) ತದನಂತರ ಹಲವಾರು ಪದ್ಧತಿಗಳ ಬಳಕೆಗೆ ಅನುವುಮಾಡಿಕೊಡುತ್ತವೆ.

ಇತಿಮಿತಿಗಳು :

(1) ಸಭೆಯನ್ನೇರ್ಪಡಿಸಲು ಬೇಕಾಗುವ ಸೌಕರ್ಯಗಳು ಎಲ್ಲ ಹಳ್ಳಿಗಳಲ್ಲೂ ದೊರಕುವುದು ವಿರಳ.

(2) ಸಾಮಾನ್ಯ ಸಭೆಗಳಲ್ಲಿ ಬಹು ಜನರು ಭಾಗವಹಿಸುವುದರಿಂದ ವಿಷಯದ ಚರ್ವಿತಚರ್ವಣಕ್ಕೆ ಕಷ್ಟವಾಗುತ್ತದೆ.

(3) ಸಾಮಾನ್ಯ ಸಭೆಗಳಲ್ಲಿ ಭಾಗವಹಿಸಿದವರೆಲ್ಲರ ಪ್ರಶ್ನೆಗಳಿಗೂ ಉತ್ತರಿಸುವುದು ಕಷ್ಟವಾಗುತ್ತದೆ.

(4) ಸ್ವಾರ್ಥಿ ಹಾಗೂ ಕುಹಕಿ ಜನ ಇಲ್ಲವೆ ಜನರ ಗುಂಪುಗಳಿದ್ದಲ್ಲಿ ಸಾಮಾನ್ಯ ಸಭೆಗಳು ಯಶಸ್ವಿಯಾಗುವುದು ಕಷ್ಟವಾಗುತ್ತದೆ.

(5) ಪ್ರತಿಕೂಲ ಹವಾಮಾನವಿದ್ದರೆ ಸಾಮಾನ್ಯ ಸಭೆಗಳನ್ನು ಏರ್ಪಡಿಸುವುದು ಕಷ್ಟವಾಗುತ್ತದೆ.


2. ವಿಚಾರ ವಿನಿಮಯ ಸಭೆ (ಡಿಸ್ಕಶನ್ ಮೀಟಿಂಗ್) :

ವಿಚಾರ ವಿನಿಮಯ ಸಭೆಯೆಂದರೆ ರೈತರು, ವಿಸ್ತರಣ ತಜ್ಞರು ಹಾಗೂ ವಿಸ್ತರಣ ಕಾರ್ಯಕರ್ತರು ಒಂದೆಡೆ ಸೇರಿ ನಡೆಯಿಸುವ ವಿಚಾರ ವಿನಿಮಯ ಸಭೆ. ಅಲ್ಲಿ ರೈತರು ತಮ್ಮ ಸಮಸ್ಯೆಗಳಿಗೆ ಪರಿಹಾರಪಡೆಯುತ್ತಾರೆ. ರೈತರು ಅಲ್ಲಿ ಪಡೆದ ಪರಿಹಾರವನ್ನು ಉಪಯೋಗಿಸಿಕೊಳ್ಳುವುದರಲ್ಲಿ ವಿಸ್ತರಣ ಕಾರ್ಯಕರ್ತ ನೆರವಾಗುತ್ತಾನೆ. ಈ ಸಭೆಯಲ್ಲಿಯೂ ಕೂಡ ರೈತರಿಗೆ ವಿಷಯ ಮನದಟ್ಟಾಗಲು ಉಚಿತ ಶ್ರವಣಚಕ್ಷು ಸಾಧನಗಳನ್ನು ಉಪಯೋಗಿಸುವುದು ವಿಸ್ತರಣ ಕೆಲಸಗಾರರ ಜಾಣ್ಮೆಗೆ ಸೇರಿದ ವಿಷಯವಾಗಿದೆ. ಇಂಥ ಸಭೆಗಳು ಸಮಸ್ಯೆಗಳ ಪೂರ್ಣ ಸ್ವರೂಪವನ್ನು ರೈತರಿಗೆ ಮತ್ತು ವಿಸ್ತರಣ ಕಾರ್ಯಕರ್ತರಿಗೆ ಮನದಟ್ಟುಮಾಡಿಕೊಡಲು, ಸಮಸ್ಯೆಗಳಿಗೆ ವಿವಿಧ ಪರಿಣಾಮಕಾರಿ ನಿವಾರಣೋಪಾಯಗಳನ್ನು ಕೂಲಂಕಷವಾಗಿ ಚರ್ಚಿಸಲು ಹಾಗೂ ನಿವಾರಣೋಪಾಯಗಳನ್ನು ಕಾರ್ಯಗತಮಾಡಲು, ನಿರ್ಧರಿಸಲು ಸಹಾಯಕವಾಗುತ್ತವೆ.

ವಿಚಾರ ವಿನಿಮಯ ಸಭೆ ಏರ್ಪಡಿಸುವಾಗ ಗಮನಿಸಬೇಕಾದ ಅಂಶಗಳು :

ವಿಚಾರ ವಿನಿಮಯ ಸಭೆಗಳನ್ನು ಏರ್ಪಡಿಸುವಾಗ್ಗೆ ಕೆಲವು ಅಂಶಗಳ ಬಗ್ಗೆ ಗಮನವೀಯುವುದು ಅವಶ್ಯವಿದೆ. ಈ ಸಭೆಗಳು ನಿರ್ದಿಷ್ಟ ಉದ್ದೇಶದಿಂದ ಕೂಡಿರಬೇಕು. ಈ ಸಭೆಗಳಲ್ಲಿ ಸಾಮಾನ್ಯವಾಗಿ ರೈತರ ಸಂಖ್ಯೆ ಹೆಚ್ಚಿರಬೇಕು. ನೆರೆದ ರೈತರು ಅವರು ಅರಿಯಬೇಕಾದ ಸುಧಾರಿಸಿದ ಪದ್ಧತಿಯ ಅಂಗೀಕಾರದ ಬೇರೆ ಬೇರೆ ಹಂತಗಳಲ್ಲಿದ್ದರೆ ಒಳ್ಳೆಯದು. ವಿಸ್ತರಣ ಕಾರ್ಯಕರ್ತನು ವಿಚಾರ ವಿನಿಮಯದ ಸಮಯದಲ್ಲಿ ರೈತರಿಗೆ ಆದ್ಯತೆ ಕೊಡಬೇಕು. ಅವರನ್ನೇ ಹೆಚ್ಚಾಗಿ ಮಾತನಾಡಲು ಪ್ರೋತ್ಸಾಹಿಸಬೇಕು. ತಿಳಿಯದ ವಿಷಯದ ಬಗ್ಗೆ ವಿವರಗಳನ್ನು ಪಡೆಯಲು ಅವಕಾಶಮಾಡಿ ಕೊಡಬೇಕು. ವಿರೋಧಾಭಿಪ್ರಾಯಗಳು ವ್ಯಕ್ತಪಟ್ಟರೆ ಅವುಗಳನ್ನು ಎತ್ತಿಕೊಂಡು ಗಣನೆಗೆ ತೆಗೆದುಕೊಂಡು ವಿಮರ್ಶಿಸಬೇಕು. ಸರಿಯಾದುದನ್ನು ತಿಳಿಸಬೇಕು. ಅವಕ್ಕೆ ಅಲ್ಲಿ ನೆರೆದ ಪರಿಣಿತ ರೈತರಿಂದ ಸೂಕ್ತ ಸ್ಪಷ್ಟನೆ ಕೊಡಿಸಬೇಕು. ಆಧಾರಬದ್ಧವಾದ ಮತ್ತು ಉದಾಹರಣೆಯಿಂದ ಕೂಡಿದ ಮಾಹಿತಿಯನ್ನು ಸಾದರಪಡಿಸಬೇಕು. ನಿರ್ಧರಿ

ಸಿದ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರಲು ಸ್ವಯಂಪ್ರೇರಣೆಯಿಂದ ಮುಂದೆ ಬಂದ ರೈತರೊಡನೆ ಮುಂದಿನ ಕಾರ್ಯಕ್ರಮವನ್ನು ನಿಯೋಜಿಸಬೇಕು.



ಚಿತ್ರ 9 : ವಿಚಾರ ವಿನಿಮಯ ಸಭೆ

ಪ್ರಯೋಜನ ಲಾಭಗಳು :

(1) ವಿಚಾರ ವಿನಿಮಯ ಸಭೆಗಳಲ್ಲಿ ಸುಧಾರಿಸಿದ ಪದ್ಧತಿಗಳ ಬಗ್ಗೆ ನಿರ್ದಿಷ್ಟ ಮಾಹಿತಿ ಕೊಡಬಹುದು.

(2) ವಿಸ್ತರಣ ಕಾರ್ಯಕರ್ತರು ಹಾಗೂ ರೈತರು ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಬಹುದು.

(3) ಗುಂಪಿನ ಆಸಕ್ತಿ ಮತ್ತು ಸಮಸ್ಯೆಗಳ ಪರಿಚಯ ವಿಸ್ತರಣ ಕಾರ್ಯಕರ್ತರು ಹಾಗೂ ತಜ್ಞರಿಗೆ ಆಗುತ್ತದೆ.

(4) ಕ್ರಿಯಾತ್ಮಕ ನಿರ್ಣಯಗಳನ್ನು ಕೈಗೊಳ್ಳಬಹುದು.

(5) ಕಾರ್ಯಕ್ರಮ ಪ್ರಜಾಸತ್ತಾತ್ಮಕವಾಗಿ ಸಿದ್ಧಪಡಿಸಲು ಹಾಗೂ ನೆರವೇರಿಸಲು ಅನುಕೂಲತೆ ಸಾಧ್ಯವಾಗುತ್ತದೆ.

(6) ತೀರ್ಮಾನವಾದ ನಿರ್ಣಯಗಳು ಒಂದು ತೆರನಾದ ಬದ್ಧತೆ ಪಡೆಯುತ್ತವೆ.

(7) ಭಾಗವಹಿಸುವ ರೈತರಲ್ಲಿ ಮುಂದಾಳತ್ವದ ವೃದ್ಧಿಯಾಗುತ್ತದೆ.

ಇತಿಮಿತಿಗಳು :

(1) ವಿಚಾರ ವಿನಿಮಯ ಸಭೆ ನೆರವೇರಿಸುವುದಕ್ಕೆ ವಿಸ್ತರಣ ಕಾರ್ಯಕರ್ತರ ಹೆಚ್ಚು ಸಮಯ ವ್ಯಯವಾಗುವುದು. ಪರಿಣಾಮದೊಂದಿಗೆ ಹೋಲಿಸಿನೋಡಿದಾಗ ಇದು ಅತಿಹೆಚ್ಚು ಸಮಯ ನುಂಗುವ ಪದ್ಧತಿಯು.

(2) ಹಲವು ಸಂದರ್ಭಗಳಲ್ಲಿ ಅನವಶ್ಯಕ ಚರ್ಚೆಗಳಿಗೆ ಆಸ್ಪದ ದೊರೆಯುವ ಸಂಭವವಿದೆ.

(3) ಭಾಗವಹಿಸುವವರ ಸಂಖ್ಯೆಯನ್ನು ಮಿತಿಗೊಳಿಸುವುದು ಕಷ್ಟವಾಗುತ್ತದೆ. ಗುಂಪಿಗೆ ಬದಲು ಸಭೆಯು ಜಂಗುಳಿಯಾಗುವುದೂ ಹಲವಾರು ಸಲ ಸಾಧ್ಯ.

(4) ಕೆಲವೇ ರೈತರು ಚರ್ಚೆಯಲ್ಲಿ ಪ್ರಧಾನಪಾತ್ರ ವಹಿಸಿ ಬೇರೆಯವರು ಅಭಿಪ್ರಾಯಗಳನ್ನು ಸ್ಪಷ್ಟಗೊಳಿಸಲು ಅವಕಾಶ ದೊರೆಯದೇ ಹೋಗಬಹುದಾದ ಸಂದರ್ಭಗಳು ಒದಗಿಬರುವುದುಂಟು.

3. ಪದ್ಧತಿ ಪ್ರಾತ್ಯಕ್ಷಿಕೆ (ಮೆಥಡ್ ಡೆಮೊನ್‌ಸ್ಟ್ರೇಶನ್) :

ಸುಧಾರಿಸಿದ ಪದ್ಧತಿಯಲ್ಲಿರುವ ಚತುರತೆ, ಕೌಶಲ್ಯ ಇಲ್ಲವೆ ಮಾಡಬೇಕಾದ ರೀತಿಗಳನ್ನು ಪ್ರತ್ಯಕ್ಷವಾಗಿ ವಿಸ್ತರಣ ಕಾರ್ಯಕರ್ತನು ಕಲಿಸುವುದು ಮತ್ತು ರೈತರು ಅವುಗಳನ್ನು ಪ್ರಾಯೋಗಿಕವಾಗಿ ಅಭ್ಯಾಸಿಸುವುದು **ಪದ್ಧತಿ ಪ್ರಾತ್ಯಕ್ಷಿಕೆ.** ಸುಧಾರಿಸಿದ ಕೃಷಿಪದ್ಧತಿಗಳಲ್ಲಿನ ಚತುರತೆಗಳನ್ನು ಸ್ಥಳೀಯ ಸನ್ನಿವೇಶಗಳಲ್ಲಿ ರೈತರು ಅಳವಡಿಸುವಂತೆ ಗ್ರಾಮಮಟ್ಟದಲ್ಲಿನ ವಿಸ್ತರಣ ಕಾರ್ಯಕರ್ತರು ಹಲವಾರು ಪದ್ಧತಿ ಪ್ರಾತ್ಯಕ್ಷಿಕೆಗಳನ್ನು ತಮ್ಮ ಕಾರ್ಯದ ಅಂಗವಾಗಿ ಏರ್ಪಡಿಸಬೇಕಾಗುತ್ತದೆ.

ಪದ್ಧತಿ ಪ್ರಾತ್ಯಕ್ಷಿಕೆ ಕೈಗೊಳ್ಳುವಿಕೆ :

ಯಾವುದಾದರೊಂದು ಪದ್ಧತಿ ಪ್ರಾತ್ಯಕ್ಷಿಕೆ ಏರ್ಪಡಿಸುವುದರಲ್ಲಿ ಮುಖ್ಯವಾಗಿ ಸಿದ್ಧತೆ ಹಾಗೂ ಮಾಡಿತೋರಿಸುವಿಕೆ ಹೀಗೆ ಎರಡು ಹಂತಗಳಿರುತ್ತವೆ:

(1) ಸಿದ್ಧತೆ :

(i) ಹೊಸದೊಂದು ಇಲ್ಲವೆ ಸುಧಾರಿಸಿದ ಸಂಗತಿಯನ್ನು ರೈತರಿಗೆ ತೋರಿಸಿ ಕೊಡಲು ನಿಶ್ಚಯಿಸಿದ ವಿಸ್ತರಣ ಕಾರ್ಯಕರ್ತನು ಸ್ಥಳೀಯವಾಗಿ ಆಚರಣೆಯಲ್ಲಿರುವ

(v) ಹೇಳುವ ಮಾತು ನೆರೆದ ಎಲ್ಲ ರೈತರಿಗೂ ಕೇಳುವಂತಿರಬೇಕು; ತೋರಿಸು ವಿಕೆ ಎಲ್ಲ ರೈತರಿಗೂ ಕಾಣುವಂತಿರಬೇಕು.

(vi) ಮುಖ್ಯವಾದ ಅಂಶಗಳನ್ನು ಒತ್ತಿ ಹೇಳಬೇಕು ಮತ್ತು ಪುನಃ ಮಾಡಿ ತೋರಿಸಬೇಕು.

(vii) ನೋಡಿ ತಿಳಿದುಕೊಂಡ ಚತುರತೆಗಳನ್ನು ರೈತರು ಸ್ವತಃ ಪ್ರಾಯೋಗಿಕ ವಾಗಿ ಮಾಡಿನೋಡಲು ಅವಕಾಶ ಹಾಗೂ ಸನ್ನಿವೇಶ ಕಲ್ಪಿಸಿಕೊಡಬೇಕು.

(viii) ಪ್ರಾತ್ಯಕ್ಷಿಕೆಯ ಸಮಯದಲ್ಲಿ ರೈತರು ಕೇಳುವ ಎಲ್ಲ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರ ಕೊಡಬೇಕು ಹಾಗೂ ಅನುಮಾನಗಳಿಗೆ ಯೋಗ್ಯ ಪರಿಹಾರ ದೊರೆಯಬೇಕು.

(ix) ಪ್ರಾತ್ಯಕ್ಷಿಕೆಯಲ್ಲಿ ರೈತರು ಉಪಯೋಗಿಸಲು ದೊರೆಯಬಹುದಾದ ಉಪ ಕರಣ ಹಾಗೂ ವಸ್ತುಗಳನ್ನು ಮಾತ್ರ ಉಪಯೋಗಿಸಬೇಕು.



ಚಿತ್ರ 10 : ಪದ್ಧತಿ ಪ್ರಾತ್ಯಕ್ಷಿಕೆ

(x) ಪ್ರಾತ್ಯಕ್ಷಿಕೆಯ ಕಾಲದಲ್ಲಿ ಸಂಬಂಧಿಸಿದ ಶ್ರವಣಚಕ್ಷುಸಾಧನಗಳನ್ನು ಉಪ ಯೋಗಿಸಬೇಕು. ಮುದ್ರಿತ ಹಸ್ತಪತ್ರಿಕೆ ಮೊದಲಾದುವುಗಳನ್ನು ಸೇರಿಸಿ ಹಂಚಿ ಅವುಗಳ ಉಪಯೋಗ ಮಾಡಲು ತಿಳಿಸಿ ಹೇಳಬೇಕು.

(xi) ಪ್ರಾತ್ಯಕ್ಷಿಕೆಯಲ್ಲಿ ಆಸಕ್ತಿ ತೋರಿಸುವವರ ಹೆಸರನ್ನು ಸಂಗ್ರಹಿಸಿಟ್ಟು ಕೊಳ್ಳಬೇಕು.

(xii) ಅಂತ್ಯದಲ್ಲಿ ಪ್ರಾತ್ಯಕ್ಷಿಕೆಯ ಸಾರಾಂಶವನ್ನು ತಿಳಿಸಬೇಕು.

(xiii) ಹೊರಡುವ ಮುನ್ನ, ಪ್ರಾತ್ಯಕ್ಷಿಕೆ ನೋಡಿದವರು ನಂತರ ಮಾಡ ಬೇಕಾದ ಕಾರ್ಯವಿವರಗಳನ್ನು ಅವರಿಗೆ ನೀಡಲು ಮರೆಯಬಾರದು.

ಪ್ರಯೋಜನ ಲಾಭಗಳು :

(1) ಹೊಸ ಇಲ್ಲವೆ ಸುಧಾರಿಸಿದ ಪದ್ಧತಿಯಲ್ಲಡಗಿರುವ ಚತುರತೆಗಳನ್ನು ನೋಡುವ, ಅವುಗಳ ಬಗ್ಗೆ ವಿವರ ತಿಳಿಯುವ ಮತ್ತು ಅವುಗಳನ್ನು ಕಾರ್ಯರೂಪಕ್ಕೆ ತರುವ ಅವಕಾಶವನ್ನು ಪದ್ಧತಿಗಳು ಒದಗಿಸುತ್ತವೆ.

(2) ವಿಸ್ತರಣ ಕಾರ್ಯಕರ್ತನಲ್ಲಿ ಮತ್ತು ಕೃಷಿ ವಿಜ್ಞಾನದಲ್ಲಿ ರೈತರಿಗೆ ವಿಶ್ವಾಸ ವನ್ನುಂಟುಮಾಡಲು ಪದ್ಧತಿ ಪ್ರಾತ್ಯಕ್ಷಿಕೆಗಳು ಬಹುಮಟ್ಟಿಗೆ ಸಾಧನವಾಗುತ್ತವೆ.

(3) ರೈತರು ಬೇಸಾಯ ಪದ್ಧತಿಗಳಲ್ಲಿ ಅನುಸರಿಸಬೇಕಾದ ಚತುರತೆಗಳನ್ನು ಕಲಿಯಲು ಅವಕಾಶಮಾಡಿಕೊಡುವ ಪದ್ಧತಿ ಪ್ರಾತ್ಯಕ್ಷಿಕೆಗಳು ತುಲನಾತ್ಮಕವಾಗಿ ಅತಿ ಕಡಿಮೆ ವೆಚ್ಚದ ವಿಸ್ತರಣ ಪದ್ಧತಿಯೆಂದು ಹೇಳಬಹುದು.

(4) ವಿಸ್ತರಣ ಕಾರ್ಯಕ್ರಮದ ಪ್ರಚಾರಕ್ಕೆ ಪದ್ಧತಿ ಪ್ರಾತ್ಯಕ್ಷಿಕೆಯು ಒಂದು ಪರಿಣಾಮಕಾರಿಯಾದ ಸಾಧನ.

(5) ಪದ್ಧತಿ ಪ್ರಾತ್ಯಕ್ಷಿಕೆಯು ಅನೇಕ ಸಂದರ್ಭಗಳಲ್ಲಿ ಉಪಯೋಗಿಸಬಲ್ಲ ಪದ್ಧತಿ.

ಇತಿ-ಮಿತಿಗಳು :

(1) ವಿಸ್ತರಣ ಕಾರ್ಯಕರ್ತನು ಸರಿಯಾದ ಪೂರ್ವಸಿದ್ಧತೆ ಮಾಡಿಕೊಂಡಿರ ದಿದ್ದರೆ ಮತ್ತು ಪರಿಣತಿ ಹೊಂದಿರದಿದ್ದರೆ ಪದ್ಧತಿ ಪ್ರಾತ್ಯಕ್ಷಿಕೆ ಯಶಸ್ಸುಗಳಿಸದೆ ಹೋಗುವುದೇ ಹೆಚ್ಚು.

(2) ಸಮರ್ಪಕ ಸಲಕರಣೆ ಇಲ್ಲದಿದ್ದರೆ, ಇದ್ದವುಗಳನ್ನು ಸರಿಯಾಗಿ ಉಪ ಯೋಗಿಸಿಕೊಳ್ಳದೆ ಹೋದರೆ ಪದ್ಧತಿ ಪ್ರಾತ್ಯಕ್ಷಿಕೆಗಳಿಂದ ಕಲಿಸಬೇಕಾದುದನ್ನು ಕಲಿಸ ಲಾಗುವುದಿಲ್ಲ.

4. ಕ್ಷೇತ್ರ ಸಂದರ್ಶನ (ಫೀಲ್ಡ್ ವಿಜಿಟ್, ಫೀಲ್ಡ್ ಟ್ರಿಪ್):

ವಿಸ್ತರಣೆ ಕೆಲಸಗಾರರು ತಮ್ಮ ಕಾರ್ಯಗಳ ಅಂಗವಾಗಿ ಕೆಲವು ಪರಿಣಾಮ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಿರುತ್ತಾರೆ. ಹಲವು ಪ್ರಗತಿಶೀಲ ರೈತರು ಹೊಸ ಪದ್ಧತಿಗಳನ್ನು ಅನುಸರಿಸಿ ತಮ್ಮ ಜಮೀನುಗಳಲ್ಲಿ ಉತ್ತಮ ಬೆಳೆ ಬೆಳೆದಿರುತ್ತಾರೆ. ಸಂಶೋಧನೆ ಇಲ್ಲವೆ ಪರೀಕ್ಷಣೆ ಕೇಂದ್ರಗಳಲ್ಲಿ ಹೊಸ ಬೆಳೆಗಳೋ ಇಲ್ಲವೆ ಹೊಸ ಪದ್ಧತಿಗಳೋ ಪ್ರೇಕ್ಷಣೀಯವಾಗಿರುತ್ತವೆ. ಅಂಥ ಸ್ಥಳಗಳಿಗೆ ವಿಸ್ತರಣ ಕೆಲಸಗಾರರು ಈ ಹೊಸ ಬೆಳೆ ಬೆಳೆಯಬೇಕೆಂದು ಆಸಕ್ತಿಹೊಂದಿರುವ ಇಲ್ಲವೆ ಹೊಸ ಪದ್ಧತಿ ತಿಳಿಯಬಯಸುವ ರೈತರನ್ನು ಇಲ್ಲವೆ ಹಳ್ಳಿಯ ಜನರನ್ನು ಕರೆದುಕೊಂಡು ಹೋಗಿ ಅವುಗಳನ್ನು ನೋಡಿ, ವಿವರ ತಿಳಿದುಕೊಳ್ಳಲು ಅವಕಾಶ ಮಾಡಿಕೊಡುತ್ತಾರೆ. ಇದು ಕ್ಷೇತ್ರ ಸಂದರ್ಶನವು. ಕ್ಷೇತ್ರ ಸಂದರ್ಶನದಿಂದ ಸುಧಾರಿಸಿದ ಕೃಷಿ ಪದ್ಧತಿಯ ಸ್ಥಳೀಯ ಅಳವಡಿಕೆಯನ್ನು ಯಶಸ್ವಿಯಾಗಿ ಮನದಟ್ಟುಮಾಡಿಕೊಳ್ಳಲು ಹಾಗೂ ಸರ್ವಗ್ರಹಣ ಶಕ್ತಿಗಳನ್ನು ಉಪಯೋಗಿಸಿಕೊಳ್ಳುವಂತಹ ಶಿಕ್ಷಣ ಸನ್ನಿವೇಶ ರೈತರಿಗೆ ಏರ್ಪಡುತ್ತದೆ. ಪರಿಣಾಮವಾಗಿ ಅವರಿಗೆಲ್ಲ, ಕೃಷಿ ವಿಜ್ಞಾನ ಹಾಗೂ ಅದರ ಕೊಡಿಗೆಯಲ್ಲಿ ನಂಬುಗೆ ಹುಟ್ಟುವುದು.

ಕ್ಷೇತ್ರ ಸಂದರ್ಶನ ವಿಸ್ತರಣ ಪದ್ಧತಿಯಲ್ಲಿ ಗಮನದಲ್ಲಿಡಬೇಕಾದ ಅಂಶಗಳು:

(1) ಸಂದರ್ಶನದ ತಾಕುಗಳನ್ನು ಜಾಗರೂಕತೆಯಿಂದ ಆರಿಸಬೇಕು.

(2) ಸಂಪೂರ್ಣ ಸುಧಾರಿಸಿದ ಪದ್ಧತಿಗಳನ್ನು ಯಶಸ್ವಿಯಾಗಿ ಪ್ರಯೋಗಿಸಿದ ತಾಕುಗಳನ್ನೇ ಸಂದರ್ಶನಕ್ಕಾಗಿ ಆರಿಸಬೇಕು.

(3) ಬೆಳೆಯ ವಿವಿಧ ಹಂತಗಳಲ್ಲಿ ಸಂದರ್ಶನಗಳನ್ನು ಏರ್ಪಡಿಸುವುದು ಸೂಕ್ತ.

(4) ಸಂದರ್ಶನವೀಯುವ ತಾಕುಗಳ ಮಾಲೀಕರಿಗೆ ಸಂದರ್ಶಕ ರೈತರ ಪರಿಚಯ ಮಾಡಿಕೊಡಬೇಕು.

(5) ಕ್ಷೇತ್ರ ಸಂದರ್ಶನಕ್ಕಾಗಿ, ತದನಂತರ ಸುಧಾರಿಸಿದ ಪದ್ಧತಿಯನ್ನು ಅಂಗೀಕಾರ ಮಾಡುವ ಸಾಮರ್ಥ್ಯವುಳ್ಳ ರೈತರು ಮಾತ್ರ ಭಾಗವಹಿಸುವಂತೆ ಜಾಗ್ರತಿ ವಹಿಸಬೇಕು.

(6) ಕ್ಷೇತ್ರ ಸಂದರ್ಶನದ ದಿನಾಂಕ, ವೇಳೆ, ವಾಹನ ಸೌಕರ್ಯ ಮತ್ತು ಕಾರ್ಯಕ್ರಮ ಇವೇ ಮೊದಲಾದವುಗಳನ್ನು ಮುಂಚಿತವಾಗಿ ನಿರ್ಧರಿಸಬೇಕು.

(7) ಕ್ಷೇತ್ರ ಸಂದರ್ಶನಕ್ಕೆ ಹೊರಡುವ ಮೊದಲು ನೆರೆದ ರೈತರಿಗೆ ಕ್ಷೇತ್ರ ಸಂದರ್ಶನದ ಉದ್ದೇಶ ಮತ್ತು ಇತರ ವಿವರಗಳನ್ನು ತಿಳಿಸಬೇಕು.

(8) ಪ್ಲಾಟುಗಳಿಗೆ ಭೇಟ್ಟಿಕೊಟ್ಟಾಗ ರೈತರು ಬೆಳೆಯನ್ನು ವೀಕ್ಷಿಸಲು ಮತ್ತು ಪ್ರಶ್ನೆಗಳಿಗೆ ಉತ್ತರ ಪಡೆಯಲು ಸರಿಯಾದ ಅವಕಾಶ ಮಾಡಿಕೊಡಬೇಕು.

(9) ಕ್ಷೇತ್ರಸಂದರ್ಶನ ಕಾರ್ಯಕ್ರಮದ ಕೊನೆಯಲ್ಲಿ ಸಂಬಂಧಪಟ್ಟ ಹಸ್ತ ಪತ್ರಿಕೆಗಳನ್ನು ಹಂಚಬೇಕು.

(10) ಕ್ಷೇತ್ರಸಂದರ್ಶನದ ಬಗ್ಗೆ ರೈತರ ಪ್ರತಿಕ್ರಿಯೆಗಳನ್ನು ತಿಳಿದುಕೊಳ್ಳ ಬೇಕು ಹಾಗೂ ಬರೆದಿಡಬೇಕು.

(11) ಕ್ಷೇತ್ರಸಂದರ್ಶನದಲ್ಲಿ ಭಾಗವಹಿಸಿದ ರೈತರನ್ನು ನಂತರ ವೈಯಕ್ತಿಕ ವಾಗಿ ವಿಸ್ತರಣ ಕಾರ್ಯಕರ್ತನು ಭೇಟಿಮಾಡಿ ಸುಧಾರಿಸಿದ ಪದ್ಧತಿಗಳನ್ನು ಅಂಗೀ ಕರಿಸಲು ಪ್ರೋತ್ಸಾಹಿಸಬೇಕು.



ಚಿತ್ರ 11 : ಕ್ಷೇತ್ರ ಸಂದರ್ಶನ

ಪ್ರಯೋಜನ ಲಾಭಗಳು

ಕ್ಷೇತ್ರ ಸಂದರ್ಶನಗಳಿಂದ:

(1) ರೈತರಲ್ಲಿ ಪರಸ್ಪರ ವಿಚಾರ ವಿನಿಮಯಕ್ಕೆ ಅನುಕೂಲವೇರ್ಪಡುತ್ತದೆ.

(2) ರೈತರಲ್ಲಿ ಸುಧಾರಿಸಿದ ಕೃಷಿ ಬಗ್ಗೆ ದೃಢನಂಬಿಕೆ ಮೂಡುತ್ತದೆ.

(3) ಸಂಬಂಧಪಟ್ಟ ಕೃಷಿ ಪದ್ಧತಿಯ ತೀವ್ರ ಅಂಗೀಕಾರಕ್ಕೆ ಅನುವು ದೊರೆಯುತ್ತದೆ.

ಇತಿ-ಮಿತಿಗಳು

(1) ಸಂದರ್ಶಿಸುವ ರೈತರಿಗೂ ಪ್ರಾತ್ಯಕ್ಷಿಕೆ ತಾಕಿನ ಮಾಲೀಕರಿಗೂ ಸರಿ ಹೊಂದುವ ಕಾಲನಿರ್ಣಯ ಮಾಡುವುದು ಹಲವುಸಲ ವಿಸ್ತರಣ ಕಾರ್ಯಕರ್ತನಿಗೆ ತೊಂದರೆದಾಯಕವಾಗಬಹುದು.

(2) ಇತರ ವಿಸ್ತರಣ ಪದ್ಧತಿಗಳಿಗೆ ಹೋಲಿಸಿದಾಗ ಈ ಪದ್ಧತಿಗೆ ತಗಲುವ ವೆಚ್ಚ ಬಹಳ.

5. ಕ್ಷೇತ್ರೋತ್ಸವ (ಫೀಲ್ಡ್ ಡೇ)

ಪರಿಣಾಮ ಪ್ರಾತ್ಯಕ್ಷಿಕೆಗಳ ತಾಕುಗಳಲ್ಲಿ ಅನೇಕ ರೈತರನ್ನು ಸೇರಿಸಿ ಸ್ಥಳೀಯ ಪದ್ಧತಿಯಿಂದ ಬೆಳೆದ ಬೆಳೆಗೂ ಮತ್ತು ಸುಧಾರಿಸಿದ ಪದ್ಧತಿಯಿಂದ ಬೆಳೆದ ಬೆಳೆಗೂ ಇರುವ ವ್ಯತ್ಯಾಸವನ್ನು ಮನದಟ್ಟಾಗುವಂತೆ ರುಜುವಾತುಪಡಿಸುವ ಶಿಕ್ಷಣ ಸನ್ನಿವೇಶಕ್ಕೆ **ಕ್ಷೇತ್ರೋತ್ಸವ**ವೆಂದು ಹೆಸರು. ಆಗ ಹಲವಾರು ತಜ್ಞರು, ಮುಂದಾಳುಗಳು, ರೈತರಿಗೆ ನೆರವೀಯುವ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಸೇರಿರಬಹುದು. ಕ್ಷೇತ್ರೋತ್ಸವಗಳನ್ನು ಅಂತಿಮ ಘಟ್ಟದಲ್ಲಿ ನೆರವೇರಿಸಿದಾಗ ಸುಧಾರಿಸಿದ ಪದ್ಧತಿ ಇಲ್ಲವೆ ಅಧಿಕ ಇಳುವರಿ ತಳಿಗಳ ಮೇಲ್ಮೆ ಬಿಂಬಿಸಲು ಅನುಕೂಲವಾಗುವುದು. ಕ್ಷೇತ್ರೋತ್ಸವಗಳನ್ನು ಸಂಶೋಧನಾ ಕೇಂದ್ರಗಳೂ ಪ್ರತಿವರ್ಷ ಏರ್ಪಡಿಸಿ ರೈತರಿಗೂ, ವಿಸ್ತರಣ ಕಾರ್ಯಕರ್ತರಿಗೂ ಸಂಶೋಧನೆಯ ವಿವಿಧ ಮುಖಗಳ ಪರಿಚಯ ಮಾಡಿ ಕೊಡುವುದುಂಟು.

ಕ್ಷೇತ್ರೋತ್ಸವ ಆಚರಿಸಲು ಮಾಡಿಕೊಳ್ಳುವ ಪೂರ್ವ ಸಿದ್ಧತೆ

(1) ಕ್ಷೇತ್ರೋತ್ಸವದ ದಿನಾಂಕ, ವೇಳೆ, ಅವಧಿಗಳನ್ನು ಹಲವು ವಾರ ಮುಂಚಿತವಾಗಿ ನಿರ್ಧರಿಸಬೇಕು.

(2) ಪ್ರಾತ್ಯಕ್ಷಿಕೆಯ ರೈತ, ಸ್ಥಳೀಯ ಕೆಲವು ಮುಖಂಡರು ಮತ್ತು ವಿಸ್ತರಣ ಕಾರ್ಯಕರ್ತರನ್ನೊಳಗೊಂಡ ಸಮಿತಿಯನ್ನು ಈ ಕಾರ್ಯಕ್ಕಾಗಿ ರಚಿಸಬೇಕು.

(3) ಕ್ಷೇತ್ರೋತ್ಸವಕ್ಕೆ ಆಹ್ವಾನಿಸಲ್ಪಡುವವರ ಪಟ್ಟಿಯನ್ನು ತಯಾರಿಸಿ ಅವರಿಗೆ ಮುಂಚಿತವಾಗಿ ತಿಳಿಸಬೇಕು.

(4) ಕೃಷಿ ವಿಜ್ಞಾನ ತಜ್ಞರಿಗೂ ಬರಲು ಮುಂಚಿತವಾಗಿ ತಿಳಿಸಬೇಕು.

(5) ಪ್ರಾತ್ಯಕ್ಷಿಕೆಯ ಬಗ್ಗೆ ವಿವರಗಳನ್ನು ಕೊಡುವ ನಾಮಫಲಕಗಳನ್ನು ಉಚಿತ ಸ್ಥಳಗಳಲ್ಲಿ ಹಚ್ಚಿರಬೇಕು.

(6) ಭಾಗವಹಿಸುವವರಿಗೆ ಕೊಡಬೇಕಾದ ಮಾಹಿತಿ ಸಿದ್ಧವಾಗಿರಬೇಕು.

(7) ವೃತ್ತಪತ್ರಿಕೆ ಸುದ್ದಿಗಾರರಿಗೆ ಮತ್ತು ಬಾನುಲಿ ವರದಿಗಾರರಿಗೆ ಬರಲು ಮುಂಚಿತವಾಗಿಯೇ ತಿಳಿಸಿರಬೇಕು.

(8) ಸಂಬಂಧಪಟ್ಟ ಶ್ರವಣಚಕ್ಷು ಸಾಧನಗಳನ್ನು ಸಿದ್ಧವಾಗಿಟ್ಟಿರಬೇಕು.

(9) ಕ್ಷೇತ್ರೋತ್ಸವ ಕಾರ್ಯಕ್ರಮ ವಿವರಗಳನ್ನು ಜಾಗ್ರತೆವಹಿಸಿ ಸಿದ್ಧಮಾಡಿರಬೇಕು.

ಕ್ಷೇತ್ರೋತ್ಸವ ನಿರ್ವಹಣೆ

(1) ಸಕಾಲಕ್ಕೆ ಕಾರ್ಯಕ್ರಮವನ್ನು ಆರಂಭಿಸಬೇಕು.

(2) ಆಹ್ವಾನಿತರನ್ನು ಸ್ವಾಗತಿಸಿ, ಆದರದಿಂದ ಬರಮಾಡಿಕೊಳ್ಳಬೇಕು.

(3) ಆಹ್ವಾನಿತರು ಪ್ರಾತ್ಯಕ್ಷಿಕೆ ಪ್ಲಾಟುಗಳಿಗೆ ಮತ್ತು ಪ್ರದರ್ಶನಕ್ಕೆ ಭೇಟಿ ಕೊಟ್ಟು ವಿಚಾರ ವಿನಿಮಯ ಮಾಡಿ ವಿವರಗಳನ್ನು ಪಡೆಯಬೇಕು.

(4) ಪ್ರಾತ್ಯಕ್ಷಿಕೆ ಪ್ಲಾಟಿನ ಮತ್ತು ಸ್ಥಳೀಯ ಪದ್ಧತಿಯ ಪ್ಲಾಟಿನಲ್ಲಿ ಗೊತ್ತುಪಡಿಸಿದ ಪ್ರದೇಶದಲ್ಲಿನ ಬೆಳೆಯನ್ನು ಕಟಾವುಮಾಡಿ ಕಾಳು ಬೇರ್ಪಡಿಸಿ ಆಹ್ವಾನಿತರ ಸಮ್ಮುಖದಲ್ಲಿ ಇಳುವರಿಯ ವ್ಯತ್ಯಾಸವನ್ನು ರುಜುವಾತುಪಡಿಸಬೇಕು (ಅಧಿಕ ಇಳುವರಿ ತಳಿಯ ಪರಿಣಾಮ ಪ್ರಾತ್ಯಕ್ಷಿಕೆಯಾಗಿದ್ದರೆ). ಸುಧಾರಿಸಿದ ತಳಿಯ ಮೇಲ್ಮೆ ವಿವರಿಸಬೇಕು.


(5) ಆಹ್ವಾನಿತ ರೈತರ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಗಳನ್ನು ಹಾಜರಿರುವ ರೈತ ಮುಖಂಡರು ಮತ್ತು ತಜ್ಞರು ಕೊಡಬೇಕು.

(6) ಪ್ರಾತ್ಯಕ್ಷಿಕೆ ರೈತನನ್ನು ಮುಕ್ತಕಂಠದಿಂದ ಯಶಸ್ವಿಪ್ರಾತ್ಯಕ್ಷಿಕೆಗಾಗಿ ಹೊಗಳಬೇಕು. ಹಸ್ತಪತ್ರಿಕೆಗಳನ್ನು ಹಂಚಬೇಕು. ಆಹ್ವಾನಿತರನ್ನು ವಂದಿಸಬೇಕು.

(7) ಸಂಬಂಧಪಟ್ಟ ಹಸ್ತಪತ್ರಿಕೆ ಹಾಗೂ ಚಿಕ್ಕಮಾಹಿತಿ ಪುಸ್ತಕಗಳಿದ್ದರೆ ಬಂದವರಿಗೆಲ್ಲ ಕೊಡಬೇಕು.

(8) ಮೆಚ್ಚಿಕೊಂಡ ಹೊಸಪದ್ಧತಿ ಅನುಸರಿಸಲು ಹಾಗೂ ಹೊಸಬೆಳೆ ಬೆಳೆಯಲು ಭಾಗವಹಿಸಿದ ರೈತರಿಗೆ ತಿಳಿಸಬೇಕು.

(9) ಫಲಿತಾಂಶಗಳನ್ನು ಮುಂದಿನ ವಿಸ್ತರಣ ಕಾರ್ಯಕ್ರಮಗಳಲ್ಲಿ ಉಪಯೋಗಿಸಬೇಕು.



ಚಿತ್ರ 12 : ಕ್ಷೇತ್ರೋತ್ಸವ

ಪ್ರಯೋಜನ ಲಾಭಗಳು

ಕ್ಷೇತ್ರೋತ್ಸವಗಳನ್ನು ಏರ್ಪಡಿಸುವುದರಿಂದ:

(1) ರೈತರಿಗೆ ಪರಸ್ಪರ ವಿಚಾರ ವಿನಿಮಯಕ್ಕೆ ಅವಕಾಶ ದೊರೆಯುತ್ತದೆ.

(2) ಕೃಷಿ ತಜ್ಞರೊಡನೆ ಸ್ಥಳೀಯ ವಾತಾವರಣದಲ್ಲಿ ವಿಚಾರ ವಿನಿಮಯಕ್ಕೆ ರೈತರಿಗೆ ಅವಕಾಶ ದೊರೆಯುತ್ತದೆ.

(3) ಸಾಮೂಹಿಕ ಪದ್ಧತಿಗಳ ಉಪಯೋಗಕ್ಕೆ ಮಾಹಿತಿಯು ದೊರೆಯುತ್ತದೆ.

(4) ಕೃಷಿ ಸಂಶೋಧನೆಗೆ ಸಮಸ್ಯೆಗಳು ದೊರೆಯುತ್ತವೆ.

(5) ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ರೈತರಿಗೆ ಕೃಷಿ ವಿಜ್ಞಾನದ ಮುನ್ನಡಿಯ ಪರಿಚಯಮಾಡಿಕೊಡಲು ಆಸ್ಪದ ದೊರೆಯುತ್ತದೆ.

(6) ಸ್ಥಳೀಯ ಇತರ ವಿಸ್ತರಣ ಕಾರ್ಯಕ್ರಮಗಳಿಗೂ ಉತ್ತೇಜನವು ದೊರೆಯುತ್ತದೆ.

ಇತಿ–ಮಿತಿಗಳು:

(1) ಅತಿ ಹೆಚ್ಚಿನ ಶ್ರಮದ ವಿಸ್ತರಣ ಪದ್ಧತಿಯಿದು.

(2) ಎಲ್ಲ ಆಹ್ವಾನಿತರಿಗೂ ಸೂಕ್ತವಾದ ದಿನಾಂಕ ಮತ್ತು ವೇಳೆಯನ್ನು ಗೊತ್ತುಪಡಿಸುವುದು ಅನೇಕಸಲ ಕಷ್ಟದ ಕೆಲಸ.

(3) ಪ್ರತಿಕೂಲ ಹವಾಮಾನಗಳಿಂದ ಕೆಲವು ಸಲ ಯಶಸ್ವೀ ಕಾರ್ಯಕ್ರಮಕ್ಕೆ ಅಡಚಣೆ ಉಂಟಾಗಬಹುದು.

6. ಶೈಕ್ಷಣಿಕ ಪ್ರವಾಸ (ಎಜ್ಯುಕೇಶನಲ್ ಟೂರ್):

ವಿಸ್ತರಣ ಕಾರ್ಯಕರ್ತನು ರೈತರನ್ನು ಕರೆದುಕೊಂಡು ಪ್ರಾತ್ಯಕ್ಷಿಕೆ, ಸಂಶೋಧನೆ ಕೇಂದ್ರ ಅಥವಾ ಕೃಷಿ ವಸ್ತುಸಂಗ್ರಹಾಲಯಗಳಿಗೆ ಒಂದು ಕಾರ್ಯಕ್ರಮ ಹಾಕಿಕೊಂಡು ನಿರ್ದಿಷ್ಟಪಡಿಸಿದ ಅವಧಿಯಲ್ಲಿ ಭೆಟ್ಟಿಕೊಟ್ಟು ಹೊಸ ಪದ್ಧತಿ ಇಲ್ಲವೆ ಸುಧಾರಿಸಿದ ಸಂಗತಿಗಳನ್ನು ಅವರಿಗೆ ನೋಡಲು ಹಾಗೂ ತಿಳಿದುಕೊಳ್ಳಲು ಅವಕಾಶ ಕಲ್ಪಿಸಿ ಕೊಡುತ್ತಾನೆ. ಇದು **ಶೈಕ್ಷಣಿಕ ಪ್ರವಾಸವು.** ರೈತರು ಕೃಷಿ ಸಂಶೋಧನೆಯ ಫಲಿತಾಂಶ, ಹೊಸ ಉಪಕರಣಗಳ ಬಳಕೆ, ಹೊಸ ತಳಿಗಳಿಗೆ ಉತ್ತಮ ಕೃಷಿ ಪದ್ಧತಿಗಳ ಅನುಸರಣೆ, ಶ್ರೇಷ್ಠಮಟ್ಟದ ಬೆಳೆ ನಿರೀಕ್ಷಣೆ ಮೊದಲಾದ ಅನುಕರಣೀಯ ಹಲವಾರು ಅಂಶಗಳನ್ನು ನೋಡುವುದಕ್ಕೆ, ವಿವಿಧ ಪ್ರದೇಶಗಳಲ್ಲಿಯ ಕೃಷಿ ಪದ್ಧತಿಗಳನ್ನು ತಿಳಿಯಲಿಕ್ಕೆ ಹಾಗೂ ಕೆಲವು ಕೃಷಿ ಸಮಸ್ಯೆಗಳನ್ನು ತುಲನಾತ್ಮಕವಾಗಿ ಅರಿತುಕೊಳ್ಳಲಿಕ್ಕೆ ರೈತರಿಗೆ ಬಿಡುವಿರುವಾಗ ಶೈಕ್ಷಣಿಕ ಪ್ರವಾಸಗಳನ್ನು ಏರ್ಪಡಿಸಲಾಗುತ್ತದೆ.

ಶೈಕ್ಷಣಿಕ ಪ್ರವಾಸ ಏರ್ಪಡಿಸುವಾಗ್ಗೆ ಗಮನಿಸಬೇಕಾದ ಸಂಗತಿಗಳು:

(1) ಪ್ರವಾಸದಲ್ಲಿ ಭೆಟ್ಟಿಕೊಡಬೇಕಾದ ಸ್ಥಳಗಳ ನಿರ್ಧಾರ. ವಿಶಿಷ್ಟ ಶೈಕ್ಷಣಿಕ ಉದ್ದೇಶಗಳಿಗನುಗುಣವಾಗಿ ಈ ನಿರ್ಧಾರಗಳಿರಬೇಕು.

(2) ಪ್ರವಾಸದಲ್ಲಿ ತಿಳಿದುಕೊಳ್ಳಬೇಕಾದ ವಿಷಯಗಳ ಪಟ್ಟಿಯನ್ನು ಮೊದಲಿಗೇನೇ ತಯಾರಿಸಬೇಕು.

(3) ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕೆಂದಿರುವ ಮತ್ತು ಸುಧಾರಿಸಿದ ಪದ್ಧತಿಗಳ ಅಂಗೀಕಾರ ಮಾಡಲು ಅರ್ಹತೆಯಿರುವ ರೈತರನ್ನೇ ಆರಿಸಬೇಕು.

(4) ಪ್ರವಾಸದಲ್ಲಿ ಭಾಗವಹಿಸುವ ರೈತರ ಮನ್ನಣೆಯನ್ನು ಗಳಿಸಿರುವವರನ್ನೇ ಪ್ರವಾಸದ ಮುಖಂಡರನ್ನಾಗಿ ಆರಿಸಬೇಕು.

(5) ಪ್ರವಾಸದಲ್ಲಿ ಭಾಗವಹಿಸುವವರ ಸಂಖ್ಯೆ 20–25 ಇರುವುದು ಸೂಕ್ತ.

(6) ಪ್ರವಾಸದಲ್ಲಿ ಸಂದರ್ಶಿಸತಕ್ಕ ಸ್ಥಳ, ದಿನಾಂಕ, ವೇಳೆ ಮತ್ತಿತರ ವಿವರಗಳಿರುವ ಹಸ್ತಪತ್ರಿಕೆಗಳನ್ನು ಮುದ್ರಿಸಿ ಹೊರಡುವ ದಿವಸ ಭಾಗವಹಿಸುವವರಿಗೆಲ್ಲ ಕೊಡಬೇಕು.

(7) ಭೇಟ್ಟಿಕೊಡುವ ಸ್ಥಳಗಳಿಗೆ ಮುಂಚಿತವಾಗಿ ಪ್ರವಾಸದ ವಿವರಗಳನ್ನು ತಿಳಿಸಿರಬೇಕು.

ಶೈಕ್ಷಣಿಕ ಪ್ರವಾಸ ನಿರ್ವಹಣೆಯಲ್ಲಿ ಗಮನಿಸಬೇಕಾದ ಅಂಶಗಳು:

(1) ಸಕಾಲಕ್ಕೆ ಪ್ರವಾಸವನ್ನು ಆರಂಭಿಸಬೇಕು.

(2) ಗುಂಪಿನ ಅಭಿರುಚಿ ಮತ್ತು ಆಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡಿರಬೇಕು.

(3) ಶೈಕ್ಷಣಿಕ ಕಾರ್ಯಕ್ರಮಗಳಲ್ಲದೆ ಬೇರೆ ಕಾರ್ಯಕ್ರಮಗಳಿಗೆ ಪ್ರಾಮುಖ್ಯತೆ ಸಾಮಾನ್ಯವಾಗಿ ಇರಬಾರದು.

(4) ಭೇಟ್ಟಿಕೊಟ್ಟ ಸ್ಥಳಗಳಲ್ಲಿ ರೈತರು ನೋಡಬೇಕಾದವುಗಳನ್ನು ವೀಕ್ಷಿಸಲು, ತಿಳಿಯಬೇಕಾದುದನ್ನು ಕೇಳಿಕೊಳ್ಳಲು ಮತ್ತು ಸಂಬಂಧಪಟ್ಟವರೊಡನೆ ಚರ್ಚಿಸಲು ಸಾಕಷ್ಟು ಅವಕಾಶ ಮಾಡಿಕೊಡಬೇಕು.

(5) ರೈತರ ವೈಯಕ್ತಿಕ ಪ್ರಶ್ನೆಗಳಿಗೆ ಸಮಂಜಸ ಉತ್ತರ ದೊರೆಯುವಂತೆ ನೋಡಿಕೊಳ್ಳಬೇಕು.

(6) ಬರಹಬಲ್ಲ ರೈತರಿದ್ದರೆ ಅವರಿಗೆ ಅನುಕರಣೀಯ ಇಚ್ಛಿತ ವಿಷಯಗಳ ಬಗ್ಗೆ ಟಿಪ್ಪಣಿ ಮಾಡಿಕೊಳ್ಳಲು ಆಗಾಗ ಒತ್ತಿಹೇಳಬೇಕು.

(7) ಕಾರ್ಯಕ್ರಮವು ಬೇಸರತರದಂತೆ ನೋಡಿಕೊಳ್ಳಬೇಕು. ಈ ಉದ್ದೇಶ ಸಾಧನೆಗಾಗಿ ಜೊತೆಗೆ ಹಿತಮಿತವಾಗಿ ಮನರಂಜಿಸುವ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟ್ಟಿಗಳು ಈ ಕಾರ್ಯಕ್ರಮದಲ್ಲಿ ಸೇರಬಹುದು.

(8) ಭಾಗವಹಿಸಿದವರಿಗೆಲ್ಲ ಪ್ರವಾಸಕಾಲದಲ್ಲಿ ಎಲ್ಲ ಸೌಕರ್ಯ, ಸವಲತ್ತುಗಳು ದೊರೆತವೊ ಇಲ್ಲವೊ ಎಂಬ ಬಗ್ಗೆ ವಿಚಾರಿಸಿಕೊಳ್ಳಬೇಕು. ದೊರೆಯದವುಗಳನ್ನು ದೊರಕಿಸಿಕೊಡಲು ನಿರ್ವಾಹಕರು ಯತ್ನಿಸಬೇಕು.

(9) ಪ್ರವಾಸ ಮುಕ್ತಾಯದ ಹಂತದಲ್ಲಿ ಭಾಗವಹಿಸಿದ ರೈತರೊಂದಿಗೆ ಮುಂದೆ ಅವರು ಅನುಸರಿಸಬೇಕಾದ ಕ್ರಿಯಾತ್ಮಕ ಕಾರ್ಯಕ್ರಮದ ವಿವರ ಚರ್ಚಿಸಬೇಕು.



ಚಿತ್ರ 13: ಶೈಕ್ಷಣಿಕ ಪ್ರವಾಸ.

ಪ್ರಯೋಜನ-ಲಾಭಗಳು:

ಶೈಕ್ಷಣಿಕ ಪ್ರವಾಸ:

(1) ಇತರ ಪ್ರದೇಶಗಳಲ್ಲಿನ ಬೇಸಾಯಗಾರರು ಹಾಗೂ ಅವರ ಅನುಭವಗಳನ್ನು ತಿಳಿಯಲು ಮತ್ತು ಅವರು ಅನುಸರಿಸಿದ ಹೊಸಪದ್ಧತಿಗಳ ಅಂಗೀಕಾರ ಮಾಡಲು ರೈತರಿಗೆ ಸಹಾಯಕವಾಗುತ್ತದೆ.

(2) ಸ್ಥಳೀಯ ಕೃಷಿ-ಮುಖಂಡತ್ವವನ್ನು ಬಲಗೊಳಿಸಲು ಸಾಧನವಾಗುತ್ತದೆ.

(3) ಸುಧಾರಿಸಿದ ಪದ್ಧತಿಯ ತುಲನಾತ್ಮಕ ವಿಮರ್ಶೆಗೆ ಅವಕಾಶವೀಯುತ್ತದೆ.

(4) ರೈತರ ಮತ್ತು ವಿಸ್ತರಣ ಕಾರ್ಯಕರ್ತರ ನಡುವೆ ನಿಕಟ ಸಂಬಂಧ ವೇರ್ಪಡಲು ನೆರವು ನೀಡುತ್ತದೆ.

(5) ಒಂದೇ ಸುಧಾರಿಸಿದ ಪದ್ಧತಿಯ ಬಗ್ಗೆ ಹಲವು ಬಾರಿ, ಹಲವು ಕಡೆ ಮಾಹಿತಿ ದೊರಕಿಸಲು ಅನುವುಮಾಡಿಕೊಡುತ್ತದೆ.

ಇತಿ–ಮಿತಿಗಳು

(1) ಶೈಕ್ಷಣಿಕ ಪ್ರವಾಸ ಇತರ ವಿಸ್ತರಣ ಪದ್ಧತಿಗಳಿಗೆ ಹೋಲಿಸಿದಾಗ ವೆಚ್ಚದ ಪದ್ಧತಿಯೆನಿಸುವುದು.

(2) ಎಲ್ಲರಿಗೂ ಅನುಕೂಲವಾಗುವ ಪ್ರವಾಸದ ಕಾರ್ಯಕ್ರಮವನ್ನು ಸಿದ್ಧ ಪಡಿಸುವುದು ಅನೇಕ ಸಂದರ್ಭಗಳಲ್ಲಿ ಕಷ್ಟವಾಗುತ್ತದೆ.

(3) ವಸತಿಸೌಕರ್ಯ ಮತ್ತು ಸಾರಿಗೆಸೌಕರ್ಯಗಳ ಅನಾನುಕೂಲತೆಗಳು ಶೈಕ್ಷಣಿಕ ಪ್ರವಾಸವೇರ್ಪಡಿಸಲು ಅಡಚಣೆಯನ್ನುಂಟುಮಾಡುತ್ತವೆ.

(4) ಶೈಕ್ಷಣಿಕ ಉದ್ದೇಶಗಳಿಗಿಂತ ಬೇರೆ ಅಭಿರುಚಿಗಳು ಹೆಚ್ಚಾದಲ್ಲಿ, ಪ್ರವಾಸದ ಯಶಸ್ಸೇ ಕುಕ್ಕರಿಸುತ್ತದೆ.

ಅಧ್ಯಾಯ 5

ಸಾಮೂಹಿಕ ಪದ್ಧತಿಗಳು

ಯಾವುದೊಂದು ವಿಷಯವನ್ನು ಅಧಿಕ ಸಂಖ್ಯೆಯ ರೈತರಿಗೆ ತಿಳಿಯಪಡಿಸಲು ಸಾಮೂಹಿಕ ಪದ್ಧತಿಗಳನ್ನು ಉಪಯೋಗಿಸಬೇಕಾಗುವುದು. ಹೊಸ ವಿಷಯವನ್ನು ಪರಿಚಯಮಾಡಿಕೊಡುವ ಕಾರ್ಯದಲ್ಲಿ ಸಾಮೂಹಿಕ ಪದ್ಧತಿಗಳು ವಿಶೇಷ ಸಹಕಾರಿಯಾಗುತ್ತವೆ. ಅತಿ ಬೇಗನೆ ಹೆಚ್ಚಿನ ಜನರಿಗೆ ತಿಳಿವಳಿಕೆ ಕೊಡುವ ಸುಲಭ ಸಾಧನಗಳೇ **ಸಾಮೂಹಿಕ ಪದ್ಧತಿ**ಗಳು. ಹೊಸ ಪದ್ಧತಿಯನ್ನು ರೈತರಿಗೆ ಪ್ರಪ್ರಥಮವಾಗಿ ತಿಳಿಯಪಡಿಸಲು ಈ ಪದ್ಧತಿಗಳು ಪರಿಣಾಮಕಾರಿಯಾಗುತ್ತವೆ. ಎಲ್ಲ ಕಾರ್ಯಗಳನ್ನು ಪ್ರಾರಂಭಿಸಲು ಹಾಗೂ ಮುಂದುವರಿಸಲು ಈ ಪದ್ಧತಿಗಳು ವಿಶೇಷ ನೆರವಾಗುತ್ತವೆ. ವೈಯಕ್ತಿಕ ಮತ್ತು ಗುಂಪು ವಿಸ್ತರಣ ಶಿಕ್ಷಣ ಪದ್ಧತಿಗಳೊಂದಿಗೆ ಸರಿಯಾದ ಜೋಡಣೆಯಲ್ಲಿ ಈ ಪದ್ಧತಿಗಳು ಮಹತ್ವದ ಪಾತ್ರವಹಿಸುತ್ತವೆ.

ಸಾಮೂಹಿಕ ಪದ್ಧತಿಗಳು ಹಲವಾರು. ಕೃಷಿ ವಿಸ್ತರಣ ಕಾರ್ಯದಲ್ಲಿ ಪ್ರಯೋಜನಕಾರಿಯಾದ ಕೆಲವು ಇಂತಿವೆ:

(1) ವರ್ತಮಾನ ಪತ್ರಿಕೆ

(2) ಬಾನುಲಿ (ರೇಡಿಯೋ)

(3) ಚಲನಚಿತ್ರ

(4) ವಸ್ತುಪ್ರದರ್ಶನ

(5) ಹಸ್ತಪತ್ರಿಕೆ

(6) ಸುತ್ತೋಲೆ

(7) ಟೆಲಿವಿಷನ್

(8) ಭಿತ್ತಿಪತ್ರ

1. ವರ್ತಮಾನ ಪತ್ರಿಕೆ (ನ್ಯೂಸ್ ಪೇಪರ್)

ನಿಶ್ಚಿತವಾದ ಮತ್ತು ಅಧಿಕ ಸಂಖ್ಯೆಯ ಜನರಿಗೆ ಸಕಾಲಕ್ಕೆ ವಿವಿಧ ರೀತಿಯ ಸುದ್ದಿಗಳನ್ನು ಪರಿಣಾಮಕಾರಿಯಾಗಿ ಮುದ್ರಿತ ರೂಪದಲ್ಲಿ ಒದಗಿಸುವ ಅತಿ ಮುಖ್ಯ ಸಾಧನ ವೃತ್ತಪತ್ರಿಕೆ (ವರ್ತಮಾನ ಪತ್ರಿಕೆ) ಯಾಗಿರುತ್ತದೆ. ವಿಸ್ತರಣ ಕಾರ್ಯಕರ್ತರು ರೈತರಿಗೆ ವಿಧವಿಧವಾದ ಮಾಹಿತಿ ಒದಗಿಸಲು ಹಲವಾರು ರೀತಿಯಲ್ಲಿ ವೃತ್ತಪತ್ರಿಕೆ ಸಹಕಾರಿ

ಯಾಗುತ್ತದೆ. ವರ್ತಮಾನ ಪತ್ರಿಕೆಗಳು ಎಲ್ಲ ಕಡೆಗೂ ಹೋಗುತ್ತವೆ. ಬಹುಮಂದಿ ಅಕ್ಷರಸ್ಥರು ಅವುಗಳನ್ನು ಓದುತ್ತಾರೆ. ಅನಕ್ಷರಸ್ಥರೂ ಕೂಡ ಅನೇಕರು ಇತರರಿಂದ ಅವುಗಳಲ್ಲಿನ ವಿಷಯ ಕೇಳಿ ತಿಳಿದುಕೊಳ್ಳುತ್ತಾರೆ. ಅಂತೆಯೇ ವರ್ತಮಾನ ಪತ್ರಗಳು



ಚಿತ್ರ 14 : ವರ್ತಮಾನ ಪತ್ರ

ಅತಿ ಹೆಚ್ಚಿನ ಜನರಿಗೆ ಸಕಾಲದಲ್ಲಿ, ಶೀಘ್ರವಾಗಿ, ಸುಲಭ ದರದಲ್ಲಿ ಸುದ್ದಿ ಮುಟ್ಟಿಸುವ ಸಾಧನಗಳಾಗಿವೆ. ಸರಿಯಾದ ಮತ್ತು ಪ್ರಮಾಣಬದ್ಧವಾದ, ತಜ್ಞರಿಂದ ವಿಮರ್ಶಿಸಲ್ಪಟ್ಟ ಸುದ್ದಿಗಳನ್ನು ಮುಟ್ಟಿಸುವುದಕ್ಕೆ ಈ ವರ್ತಮಾನ ಪತ್ರಗಳು ಯೋಗ್ಯ ಮಾಧ್ಯಮಗಳು. ಉಚಿತ ಛಾಯಾಚಿತ್ರ (ಫೋಟೋ), ರೇಖಾಚಿತ್ರ ಮುಂತಾದ ಸಾಧನಗಳನ್ನು ಉಪಯೋಗಿಸಿಕೊಂಡು ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಲೇಖನಗಳನ್ನು ಬರೆದಾಗ ವಿಷಯ ಹೆಚ್ಚು ಮನದಟ್ಟಾಗುತ್ತದೆ. ಪ್ರಕಟಣೆಗಳ ಮೂಲಕವೂ ವಿಸ್ತರಣ ಕಾರ್ಯಕರ್ತನು ವಿವಿಧ ರೂಪದಲ್ಲಿ ರೈತರಿಗೆ ಬೇಕಾದ ಮಾಹಿತಿಯನ್ನು ಒದಗಿಸಬಹುದು. ಈ ಕೆಲವು ರೂಪಗಳ ಬಗ್ಗೆ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

(i) **ಕೃಷಿ ಸುದ್ದಿ ಸಂಗ್ರಹ**: ಬೇಸಾಯ ಪದ್ಧತಿಗಳ ಬಗ್ಗೆ ರೈತರಿಗೆ ಸೂಕ್ತವಾದ ವಿವಿಧ ಮಾಹಿತಿಗಳನ್ನು ಪ್ರಕಟಿಸುವುದೇ **ಕೃಷಿ ಸುದ್ದಿ ಸಂಗ್ರಹ.** ಇದನ್ನು ಸಕಾಲದಲ್ಲಿ ಪ್ರಕಟಿಸಿದರೆ ಅದನ್ನು ಉಪಯೋಗಿಸಿಕೊಳ್ಳಲು ರೈತರಿಗೆ ಸಹಾಯಕವಾಗುವುದು.

ಸುದ್ದಿ ಸಂಗ್ರಹದಲ್ಲಿ ಗಮನಿಸಬೇಕಾದ ಅಂಶಗಳು:

ಸುದ್ದಿಯು :

(ಅ) ನವೀನವಾಗಿರಬೇಕು.

(ಆ) ಇತ್ತೀಚಿನದಾಗಿರಬೇಕು.

(ಇ) ಸಕಾಲಿಕವಾಗಿರಬೇಕು.

(ಈ) ಸ್ಥಳೀಯ ಪ್ರಮುಖ ವಿಷಯಕ್ಕೆ ಸಂಬಂಧಿಸಿದ್ದಾಗಿರಬೇಕು.

(ಉ) ಅತಿ ಹೆಚ್ಚಿನ ಜನರಿಗೆ ಉಪಯೋಗವಾಗುವಂತಿರಬೇಕು.

(ಊ) ಅಸಾಧಾರಣವಾಗಿರಬೇಕು.

(ಋ) ಮಾನವೀಯತೆಯಿಂದ ಕೂಡಿರಬೇಕು.

(ೠ) ಸೂಕ್ತವಾಗಿರಬೇಕು.

(ಎ) ಸಂಕ್ಷಿಪ್ತವಾಗಿರಬೇಕು.

(ಏ) ಸರಳವಾಗಿರಬೇಕು.

(ii) **ವಿಶೇಷ ಸುದ್ದಿ ಲೇಖನ:** ವಿಶೇಷ ಸುದ್ದಿ ಲೇಖನವು ಕೃಷಿ ಸುದ್ದಿ ಸಂಗ್ರಹಕ್ಕಿಂತ ವಿಭಿನ್ನವಾಗಿರುತ್ತವೆ. ವಿಶೇಷ ಸುದ್ದಿ ಲೇಖನಗಳು ಕೇವಲ ಸುದ್ದಿಗಳ ಸಂಗ್ರಹಗಳಲ್ಲ. ಇವು ವಿಸ್ತರಣ ಕಾರ್ಯಕರ್ತರು ಅಥವಾ ತಜ್ಞರು ಬರೆದ ಲೇಖನಗಳು. ಉದಾಹರಣೆ ಹಾಗೂ ಅನುಭವಗಳೊಂದಿಗೆ ಕೃಷಿ ಬಗ್ಗೆ ಹಲವು ಸಮಾಚಾರಗಳನ್ನು ಒಳಗೊಂಡ ಲೇಖನಗಳಿವು. ತುಲನಾತ್ಮಕ ವಿಮರ್ಶೆಯೂ ಇವುಗಳಲ್ಲಿ ಇರುತ್ತದೆ.

ವಿಶೇಷ ಸುದ್ದಿ ಲೇಖನದಲ್ಲಿ ಗಮನದಲ್ಲಿಡಬೇಕಾದ ಅಂಶಗಳು:

(ಅ) ಲೇಖನಕ್ಕೆ ಬೇಕಾದ ಎಲ್ಲ ಮಾಹಿತಿಯನ್ನು ವಿವರವಾಗಿ ಸಂಗ್ರಹಿಸಬೇಕು.

(ಆ) ಲೇಖನದ ವಿಷಯವು ಸಂಬಂಧಪಟ್ಟ ಎಲ್ಲ ತೆರನಾದ ರೈತರಿಗೆ ಅನ್ವಯಿಸುವಂತಿರಬೇಕು.

(ಇ) ಲೇಖನದಲ್ಲಿ ಕೊಡತಕ್ಕ ಮಾಹಿತಿಗೆ ಪೂರಕವಾಗಿ ಸೂಕ್ತ ನಿದರ್ಶನಗಳು ಮತ್ತು ತಜ್ಞರ ಅಭಿಪ್ರಾಯಗಳಿರಬೇಕು.

(ಈ) ಲೇಖನದಲ್ಲಿ ಗಾದೆ, ನಾಣ್ನುಡಿ ಮತ್ತು ಹೇಳಿಕೆಗಳನ್ನು ಉಪಯೋಗಿಸುವುದು ಸೂಕ್ತ.

(ಉ) ಲೇಖನದಲ್ಲಿ, ಛಾಯಾಚಿತ್ರ, ನಕ್ಷೆ, ನಿರೂಪಣೆ ಹಾಗೂ ದೃಷ್ಟಾಂತಗಳನ್ನು ಉಪಯೋಗಿಸಬಹುದು.

(ಊ) ಲೇಖನದಲ್ಲಿ ಮುಖ್ಯಾಂಶಗಳನ್ನು ಒತ್ತಿ ಹೇಳಬೇಕು

(ಋ) ಲೇಖನದಲ್ಲಿ ಮುಕ್ತಾಯ ಹಂತದಲ್ಲಿ ಸಾರಾಂಶ ಕೊಡದೇಕು.

(iii) **ವಿಶಿಷ್ಟ ಲೇಖನಗಳು**: ವೃತ್ತಪತ್ರಿಕೆಯಲ್ಲಿ ನಿರ್ದಿಷ್ಟ ಸ್ಥಳದಲ್ಲಿ ಮತ್ತು ನಿರ್ದಿಷ್ಟ ದಿನಗಳಲ್ಲಿ ನಿರ್ದಿಷ್ಟ ತಜ್ಞರಿಂದ ಬರೆಯಲ್ಪಟ್ಟು, ಪ್ರಕಟಿಸಲ್ಪಟ್ಟವು **ವಿಶಿಷ್ಟ ಲೇಖನಗಳು.** ಈ ಲೇಖನಗಳು ರೈತರಿಗಿಂತ, ವಿಸ್ತರಣ ಕಾರ್ಯಕರ್ತರಿಗೆ ಬಹಳ ಉಪಯುಕ್ತ ಮತ್ತು ಪ್ರಚೋದಕಗಳಾಗುತ್ತವೆ. ಸಾಮಾನ್ಯ ರೈತರಿಗಿಂತ ಪ್ರಗತಿಪರ ರೈತರಿಗೆ ಈ ಲೇಖನಗಳಿಂದ ಹೆಚ್ಚಿನ ಪ್ರಯೋಜನವಾಗುವುದು.

ವಿಶಿಷ್ಟ ಲೇಖನಗಳನ್ನು ಬರೆಯುವಲ್ಲಿ ಗಮನಿಸಬೇಕಾದ ಅಂಶಗಳು :

(ಅ) ವಿಶಿಷ್ಟ ಲೇಖನಗಳನ್ನು ವಿಶೇಷ ತಜ್ಞರು ಮಾತ್ರ ಬರೆಯಬೇಕು.

(ಆ) ಲೇಖನದ ಶೈಲಿ ಸರಳವಾಗಿರಬೇಕು.

(ಇ) ಲೇಖನವು ವಿಚಾರ ಪ್ರಚೋದಕವಾಗಿರಬೇಕು.

ಕೃಷಿಗೆ ಸಂಬಂಧಪಟ್ಟ ಮಾಹಿತಿ ಪ್ರಕಟಿಸುವುದಕ್ಕೇನೆ ಕೆಲವು ವೃತ್ತಪತ್ರಿಕೆಗಳಲ್ಲಿ ಒಂದೋ ಇಲ್ಲವೆ ಹಲವು ಪುಟಗಳಲ್ಲಿ ಅಗತ್ಯತೆಗನುಗುಣವಾಗಿ ನಿರ್ದಿಷ್ಟ ದಿನಗಳಲ್ಲಿ ಪ್ರಕಟಿಸುವ ವ್ಯವಸ್ಥೆಯಿರುತ್ತದೆ. ಸುದ್ದಿ ಸಂಗ್ರಹ, ಸುದ್ದಿಲೇಖನ, ವಿಶೇಷ ಲೇಖನ ಹಾಗೂ ರೈತರ ವಿವಿಧ ಪ್ರಶ್ನೆ ಮತ್ತು ಸಮಸ್ಯೆಗಳಿಗೆ ಸೂಕ್ತವಾದ ಪರಿಹಾರೋಪಾಯ ಈ ಕೆಲವು ವಿಷಯಗಳು ಈ ಪುಟಗಳಲ್ಲಿ ಪ್ರಕಟವಾಗುತ್ತವೆ. ಇವುಗಳನ್ನು ವಿಸ್ತರಣ ಕಾರ್ಯಕರ್ತ, ತಜ್ಞ, ಅಥವಾ ಪರಿಣಿತ ಮತ್ತು ಪ್ರಗತಿಪರ ರೈತರು ಬರೆಯಬಹುದು. ಛಾಯಾಚಿತ್ರ, ನಕ್ಷೆ ಹಾಗೂ ರೇಖಾಚಿತ್ರಗಳನ್ನು ಹೇರಳವಾಗಿ ಉಪಯೋಗಿಸಿದರೆ ಲೇಖನಗಳು ಹೆಚ್ಚು ಆಕರ್ಷಕವೂ ಪರಿಣಾಮಕಾರಿಯೂ ಆಗುತ್ತವೆ. ಪ್ರಗತಿಪರ ರೈತರ ಛಾಯಾಚಿತ್ರಗಳೊಂದಿಗೆ ಅವರ ಪರಿಚಯ ಲೇಖನ ಪ್ರಕಟವಾದರೆ ಆ ರೈತರಿಗೆ ಮನ್ನಣೆ ಕೊಡುವುದರ ಜೊತೆಗೆ ಅವರ ಸಾಧನೆಯನ್ನು ಇತರರಿಗೆ ಪರಿಚಯಮಾಡಿ ಕೊಡಲೂ ಸಾಧ್ಯವಾಗುವುದು.

ಪ್ರಯೋಜನ–ಲಾಭಗಳು :

(1) ಅಧಿಕ ಸಂಖ್ಯೆಯಲ್ಲಿ ಓದುಗರಿಗೆ ಸುದ್ದಿ ಮುಟ್ಟುತ್ತದೆ.

(2) ದಿನದಿನವೂ ಸುದ್ದಿ ಮುಟ್ಟಿಸುವ ಸಾಧನವಿದು.

(3) ಸುಲಭ ದರದಲ್ಲಿ, ಸಕಾಲದಲ್ಲಿ ಅತಿ ಹೆಚ್ಚು ಜನರಿಗೆ ಅತಿ ಹೆಚ್ಚು ಮಾಹಿತಿಯು ಒದಗಿಸುತ್ತದೆ.

(4) ವಿಶೇಷವಾದ ಮತ್ತು ಇಚ್ಛಿತ ರೈತರು ಅರಿಯಬೇಕೆಂದಿರುವ ಸುದ್ದಿಗಳನ್ನು ಬೇಕಾದಾಗ ತಿಳಿಸಬಹುದು.

(5) ಬಹಳ ವೇಗವಾಗಿ ಸುದ್ದಿಯನ್ನು ರೈತರಿಗೆ ತಲುಪಿಸಬಹುದು.

(6) ಸುದ್ದಿಯು ಪರಿಣಾಮಕಾರಿಯಾಗಿರಲು ಅವಶ್ಯವಾದ ಛಾಯಾಚಿತ್ರ, ನಕ್ಷೆ, ಪಟ್ಟಿ ಇತ್ಯಾದಿಗಳನ್ನು ಉಪಯೋಗಿಸಬಹುದು.

(7) ಸಾಮಾನ್ಯವಾಗಿ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಗಳನ್ನು ಕಂಡಾಗ ರೈತರು ಅದರ ಬಗ್ಗೆ ಒಂದು ಬಗೆಯ ವಿಶ್ವಾಸ ಮತ್ತು ನಂಬಿಕೆಯನ್ನು ಹೊಂದಲು ಸಾಧ್ಯ.

ಇತಿ-ಮಿತಿಗಳು :

(1) ಜನಸಾಮಾನ್ಯರಲ್ಲಿ ನಿರಕ್ಷರತೆ ಜಾಸ್ತಿ ಇರುವಾಗ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಿದ ಕೃಷಿ ಸುದ್ದಿಯ ಉಪಯೋಗ ಕಡಿಮೆಯಾಗಬಹುದು.

(2) ವಿಶೇಷ ಲೇಖನಗಳನ್ನು ಬರೆಯಲು ಪರಿಣಿತ ತಜ್ಞರು ಸಿಗುವುದು ಕಠಿಣ.

2. ಬಾನುಲಿ (ರೇಡಿಯೋ)

ಅತಿ ವೇಗವಾಗಿ, ಅತ್ಯಧಿಕ ಸಂಖ್ಯೆಯ ಜನರಿಗೆ ಸುದ್ದಿ ತಲುಪಿಸುವ ಶ್ರವಣ ಸಾಧನ ಇಲ್ಲವೆ ಮಾಧ್ಯಮ **ಬಾನುಲಿ**. ಸಾಮಾನ್ಯವಾಗಿ ರೇಡಿಯೋ ಕೇಂದ್ರಗಳು ಜನತೆಗೆ ಶಿಕ್ಷಣ ನೀಡುವ, ಮನರಂಜನೆ ಒದಗಿಸುವ ಮತ್ತು ವಾರ್ತಾ ಬಿತ್ತರಿಸುವ ಕಾರ್ಯ ಮಾಡುತ್ತವೆ. ಇತ್ತೀಚಿನ ದಿನಗಳಲ್ಲಿ ಕೃಷಿ ವಿಸ್ತರಣ ಶಿಕ್ಷಣ ಕಾರ್ಯಕ್ರಮಗಳಲ್ಲಿ ರೇಡಿಯೋದ ಪಾತ್ರ ಮಹತ್ವದ್ದೂ ಗಮನಾರ್ಹವೂ ಆಗಿದೆ. ರೇಡಿಯೋದ ಮೂಲಕವಾಗಿ ಮಾತ್ರ ಸಕಾಲದಲ್ಲಿ ಜರೂರು ಮಾಹಿತಿಯನ್ನು ಒದಗಿಸುವುದಕ್ಕೆ ಸಾಧ್ಯ. ಪ್ರತಿದಿನವೂ ರೈತರಿಗಾಗಿಯೇ ಬೆಳಗಿನಲ್ಲಿ ಹಾಗೂ ಸಾಯಂಕಾಲಗಳಲ್ಲಿ ನಿರ್ದಿಷ್ಟಪಡಿಸಿದ ಕಾಲಗಳಲ್ಲಿ ಸುದ್ದಿ ಸಮಾಚಾರ ಹಾಗೂ ಶಿಕ್ಷಣಗಳ ವ್ಯವಸ್ಥೆಯಿರುತ್ತದೆ.

ಬಾನುಲಿ ಪ್ರಸಾರಗಳು ಸುಧಾರಿಸಿದ ಪದ್ಧತಿಗಳ ಅಂಗೀಕಾರಕ್ಕೆ ಪೂರಕವಾಗಿ, ರೈತರನ್ನು ಸಿದ್ಧಪಡಿಸುತ್ತವೆ.

ವಿಸ್ತರಣ ಕಾರ್ಯಕ್ರಮದಲ್ಲಿ ಬಾನುಲಿಯ ಉಪಯೋಗ ಹಲವಾರು ರೀತಿಯಲ್ಲಿ ಸಾಧ್ಯ.

ಬಾನುಲಿಯಲ್ಲಿ ಆಗಾಗ್ಗೆ ಸುಧಾರಿಸಿದ ಪದ್ಧತಿ ಅಥವಾ ಕೃಷಿ ವಿಜ್ಞಾನದ ಪರಿಚಯ ಮಾಡಿಕೊಡುವ ಬಗ್ಗೆ ತಜ್ಞರಿಂದ ಭಾಷಣ ಏರ್ಪಡಿಸಲಾಗುತ್ತದೆ. ರೈತರ ಸಮಸ್ಯೆಗಳಿಗೆ ಉತ್ತರ ಕೊಡುವ ಕಾರ್ಯಕ್ರಮಗಳಿರುತ್ತವೆ. ಇದರಿಂದ ತಜ್ಞರ ಮತ್ತು ರೈತರ ನಡುವೆ ವಿಚಾರ ವಿನಿಮಯ ನಡೆಯಲು ಸಾಧ್ಯವಾಗುತ್ತದೆ. ಬಾನುಲಿಯಲ್ಲಿಯ ಹಲವಾರು ಕಾರ್ಯಕ್ರಮಗಳು ರೈತರ ಮತ್ತು ವಿಸ್ತರಣ ಕಾರ್ಯಕರ್ತರ ನಡುವೆ ವಿಚಾರ ವಿನಿಮಯವೇರ್ಪಡಿಸಲು ನೆರವೀಯುತ್ತವೆ. ಬಾನುಲಿಯಲ್ಲಿ ಅನುಭವಿಕ ರೈತರಿಂದ ಭಾಷಣಗಳೂ ಏರ್ಪಡಿಸಲ್ಪಟ್ಟಿರುತ್ತವೆ. ದಿನದಿನವೂ ಕೃಷಿಗೆ ಸಂಬಂಧಪಟ್ಟ ಹವಾಮಾನ ಮತ್ತು ಪೇಟೆವಾರ್ತೆಗಳ ವರದಿಗಳು ಬಿತ್ತರಿಸಲ್ಪಡುತ್ತವೆ. ಭಾಷಣ, ಚರ್ಚೆ, ವರದಿವಾಚನಗಳಲ್ಲದೆ ನಾಟಕ, ಲಾವಣಿ ಮತ್ತು ಇತರ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಆಧುನಿಕ ಕೃಷಿಯ ಬಗ್ಗೆ ಪರಿಚಯ, ಬಾನುಲಿ ಮುಖಾಂತರ ನಡೆಯುತ್ತದೆ. ರೈತ ಮಹಿಳೆಯರಿಗೂ ಮತ್ತು ಗ್ರಾಮೀಣ ಯುವಕರಿಗೂ ಆಗಾಗ ಕೃಷಿಗೆ ಸಂಬಂಧಪಟ್ಟ ವಿಶೇಷ ಕಾರ್ಯಕ್ರಮಗಳನ್ನು ಬಾನುಲಿ ವ್ಯವಸ್ಥಾಪಕರು ಏರ್ಪಡಿಸಿರುತ್ತಾರೆ.

ಬಾನುಲಿ ಬಿತ್ತರಣೆ, ವಿಸ್ತರಣ ಕಾರ್ಯಕ್ರಮದಲ್ಲಿ ಪರಿಣಾಮಕಾರಿಯಾಗಬೇಕಾದಲ್ಲಿ ಗಮನದಲ್ಲಿಡಬೇಕಾದ ಅಂಶಗಳು:

(1) ವಿಸ್ತರಣ ಶಿಕ್ಷಣ ಕಾರ್ಯಕ್ರಮದಲ್ಲಿ ಬಾನುಲಿ ಕಾರ್ಯಕ್ರಮಗಳನ್ನು ಯಾವ ಹಂತಗಳಲ್ಲಿ ಏರ್ಪಡಿಸಬೇಕೆಂಬುದನ್ನು ಪೂರ್ವಭಾವಿಯಾಗಿ ನಿರ್ಧರಿಸಬೇಕು.

(2) ಬಾನುಲಿ ಪ್ರಸಾರದ ಉದ್ದೇಶ ಸ್ಪಷ್ಟವಾಗಿರಬೇಕು.

(3) ಸಂಬಂಧಪಟ್ಟ ಶ್ರೋತೃಗಳ ಆಸಕ್ತಿ ಮತ್ತು ಅವಶ್ಯಕತೆಗಳಿಗೆ ಅನುಗುಣವಾದ ಕಾರ್ಯಕ್ರಮಗಳನ್ನು ರೂಪಿಸಬೇಕು.

(4) ಪ್ರಸಾರಕ್ಕೋಸ್ಕರ ಪ್ರಚಲಿತ ವಿಷಯಗಳನ್ನು ಆರಿಸಿಕೊಳ್ಳಬೇಕು.

(5) ರೈತರ ಬಿಡುವಿನ ವೇಳೆಯಲ್ಲಿ ಕೃಷಿ ಮಾಹಿತಿಯನ್ನು ಪ್ರಸಾರಮಾಡಿದರೆ ಅವುಗಳನ್ನು ಕೇಳಲು ಅವರಿಗೆ ಸಾಧ್ಯವಾಗುವುದು.

(6) ಬಾನುಲಿ ಕಾರ್ಯಕ್ರಮದ ರೂಪರೇಷೆಗಳನ್ನು ಮುಂಗಡವಾಗಿ ನಿರ್ಧರಿಸಿ ಸಂಬಂಧಪಟ್ಟವರಿಗೆ ವಿವರಗಳನ್ನು ಸಕಾಲದಲ್ಲಿ ತಲುಪಿಸಬೇಕು.


(7) ಪ್ರಸಾರದ ಪ್ರತಿಯನ್ನು ಮುಂಚಿತವಾಗಿ ಸಿದ್ಧಪಡಿಸಬೇಕು. ಪ್ರತಿಯು ಸ್ಪಷ್ಟವಾಗಿರಬೇಕು; ಸರಳವಾಗಿರಬೇಕು; ತಜ್ಞರಿಂದ ಪರಿಷ್ಕೃತವಾಗಿರಬೇಕು; ಸ್ಥಳೀಯ ಭಾಷೆಯಲ್ಲಿರಬೇಕು ಮತ್ತು ಸ್ಥಳೀಯ ನಿದರ್ಶನಗಳನ್ನೊಳಗೊಂಡಿರಬೇಕು.

(8) ನಿರ್ದಿಷ್ಟ ಕಾಲದಲ್ಲಿ ಪ್ರಸಾರ ಮುಕ್ತಾಯ ಮಾಡಬೇಕು.

(9) ಗ್ರಾಮೀಣ ಕಾರ್ಯಕ್ರಮಗಳನ್ನು ಕೇಳಲು ರೈತರನ್ನು ಪ್ರೋತ್ಸಾಹಿಸಬೇಕು.

(10) ಕಾರ್ಯಕ್ರಮಗಳ ಬಗ್ಗೆ ರೈತರ ಅಭಿಪ್ರಾಯ ಸಲಹೆಗಳನ್ನು ಬಾನುಲಿ ಕೇಂದ್ರಕ್ಕೆ ಕಳಿಸುವಂತೆ ಪ್ರೋತ್ಸಾಹಿಸಬೇಕು.

(11) ಬಾನುಲಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಅರ್ಹತೆಯುಳ್ಳ ರೈತರನ್ನು ಪ್ರೋತ್ಸಾಹಿಸಬೇಕು.



ಚಿತ್ರ 15 : ಬಾನುಲಿ—ರೈತ ಕುಟುಂಬ ಬಾನುಲಿ ಕಾರ್ಯಕ್ರಮ ಆಲಿಸುತ್ತಿದೆ.

ಪ್ರಯೋಜನ-ಲಾಭಗಳು :

(1) ಬಾನುಲಿ ಕಾರ್ಯಕ್ರಮಗಳು ರೈತರ ಮನೋಭಾವದ ಇಚ್ಛಿತ ಬದಲಾವಣೆಗೆ ಪ್ರಭಾವ ಬೀರುತ್ತವೆ.

2) ಬಾನುಲಿಯ ಬಿತ್ತರಣೆಗಳಿಂದ ಸಕಾಲಕ್ಕೆ ಜರೂರು ಮಾಹಿತಿಗಳನ್ನು ತತ್‌ಕ್ಷಣದಲ್ಲಿ ಅಸಂಖ್ಯಾತ ರೈತರಿಗೆ ಅತಿ ವೇಗವಾಗಿ ಮುಟ್ಟಿಸಬಹುದು.

(3) ಭೌತಿಕ ಅಡಚಣೆಗಳಿದ್ದರೂ ಸಹ ಮಾಹಿತಿಯನ್ನು ಶ್ರೋತೃಗಳಿಗೆ ತಲುಪಿಸುವ ವ್ಯವಸ್ಥೆ ಬಾನುಲಿ ಪ್ರಸಾರದಿಂದ ನಡೆಯುತ್ತದೆ.

(4) ಯಾವ ಸ್ಥಳದಲ್ಲಾಗಲಿ, ಯಾವ ಸಮಯದಲ್ಲಾಗಲಿ, ವಿಸ್ತರಣ ಬಾನುಲಿ ಕಾರ್ಯಕ್ರಮಗಳನ್ನು ಶ್ರೋತೃಗಳು ಕೇಳಲು ಸಾಧ್ಯ (ಬಿತ್ತರಣೆ ಸಮಯವಾಗಿರಬೇಕು; ರೇಡಿಯೋ ಇಲ್ಲವೆ ಟ್ರಾನ್ಸಿಸ್ಟರ್ ಹೊಂದಿರಬೇಕು).

(5) ಅನಕ್ಷರಸ್ಥ ರೈತರಿಗೆ ಮತ್ತು ಸಂಸಾರಗಳಿಗೂ ಸಹ ಮಾಹಿತಿಯನ್ನು ಬಾನುಲಿ ಪ್ರಸಾರ ಮೂಲಕ ಒದಗಿಸಬಹುದು.

(6) ಕೃಷಿ ವಿಜ್ಞಾನದ ಬಗ್ಗೆ ಪ್ರಮುಖ ರೈತ ವ್ಯಕ್ತಿಯ ಅನುಭವಗಳನ್ನು ಬಾನುಲಿಯಲ್ಲಿ ಪ್ರಸಾರಿಸುವುದರ ಮೂಲಕ ಹಲವಾರು ರೈತರನ್ನು ಸುಧಾರಿಸಿದ ಪದ್ಧತಿಗಳನ್ನು ಅಂಗೀಕರಿಸಲು ಹುರಿದುಂಬಿಸಬಹುದು.



ಚಿತ್ರ 15 (a) : ಬಾನುಲಿಯಲ್ಲಿ ಕೃಷಿತಜ್ಞರೊಬ್ಬರು ಭಾಷಣ ಮಾಡುತ್ತಿದ್ದಾರೆ.

ಇತಿ–ಮಿತಿಗಳು :

(1) ಬಾನುಲಿಯಿಂದ ಪ್ರಸಾರವಾದ ಮಾಹಿತಿಯನ್ನು ಕೇವಲ ಒಂದೇ ಬಾರಿ ಮಾತ್ರ ಕೇಳಲು ಸಾಧ್ಯ. ಸರಿಯಾಗಿ ಕೇಳಿಸದಾಗ ಇಲ್ಲವೆ ಸರಿಯಾಗಿ ತಿಳಿಯದೆ ಇದ್ದಾಗ ಆ ಮಾಹಿತಿ ಪುನಃ ಕೇಳಿ ತಿಳಿಯಲು ಇಲ್ಲವೆ ವಿವರಣೆ ಪಡೆಯಲು ಸಾಧ್ಯವಾಗುವುದಿಲ್ಲ.

(2) ಈ ವಿಸ್ತರಣ ಪದ್ಧತಿ ಕೇವಲ ಶ್ರವಣೇಂದ್ರಿಯವನ್ನು ಉಪಯೋಗಿಸಿ ಕೊಳ್ಳುತ್ತದೆ.

(3) ವಿಸ್ತರಣ ಕಾರ್ಯಕರ್ತನು ಇಚ್ಛೆಪಟ್ಟಾಗ ಬಾನುಲಿ ಕಾರ್ಯಕ್ರಮವನ್ನು ಏರ್ಪಡಿಸುವುದು ಸಾಧ್ಯವಿಲ್ಲ. ಬಾನುಲಿಯು ಅವಕಾಶಕೊಟ್ಟಾಗ 'ಕಾಕತಾಲೀಯ ನ್ಯಾಯ'ದಂತೆ ರೈತರಿಗೆ ಸಲಹೆಯ ಪ್ರಯೋಜನವನ್ನು ವಿಸ್ತರಣ ಕಾರ್ಯಕರ್ತರು ಇಲ್ಲವೆ ತಜ್ಞರು ಮಾಡಿಕೊಡಲು ಸಾಧ್ಯ.

(4) ಕಾರ್ಯಕ್ರಮಗಳ ಪರಿಣಾಮಗಳನ್ನು ಅಳೆಯುವುದು ಕಠಿಣ.

(5) ಎಲ್ಲ ರೈತರು ಬಾನುಲಿ ಪ್ರಸಾರ ಪ್ರಯೋಜನ ಹೊಂದಲು ಸಾಧ್ಯವಿಲ್ಲ. ಅವರೆಲ್ಲರಲ್ಲಿ ರೇಡಿಯೋ ಇಲ್ಲವೆ ಟ್ರಾನ್ಸಿಸ್ಟರ್ ಇರಲಿಕ್ಕಿಲ್ಲ. ಇದ್ದವರಿಗೂ ಕೂಡ ಪ್ರಸಾರ ವೇಳೆಗಳಲ್ಲಿ ಕೆಲಸಗಳಲ್ಲಿ ತೊಡಗಿದ್ದರೆ ಕೇಳುವುದಕ್ಕೆ ಅವಕಾಶ ತಪ್ಪಿಹೋಗ ಬಹುದು.

(6) ರೇಡಿಯೋ ಇಲ್ಲವೆ ಟ್ರಾನ್ಸಿಸ್ಟರ್‌ಗಳ ನಾದುರಸ್ತಿ, ವಿದ್ಯುಚ್ಛಕ್ತಿ ಇಲ್ಲವೆ ಬ್ಯಾಟರಿಗಳ ಲಭ್ಯತೆಯಲ್ಲಿ ತೊಂದರೆಯುಂಟಾದಾಗ ಈ ಪದ್ಧತಿಯ ಪ್ರಯೋಜನ ರೈತರಿಗೆ ನಡೆಯಲಾಗ.ವುದಿಲ್ಲ.

3. ಚಲನಚಿತ್ರ (ಫಿಲ್ಮ್ಸ್‌-ಮೂವೀಸ್) :

ಚಲನಚಿತ್ರ ಒಂದು ವಿಶೇಷ ಸಾಮೂಹಿಕ ಪದ್ಧತಿ. ರೈತರಿಗೆ ಸುಲಭವಾಗಿ ಅರ್ಥ ತಿಳಿಯಪಡಿಸಲು ಮತ್ತು ಮನರಂಜನೆ ಒದಗಿಸಲು ಇದರಿಂದ ಸಹಾಯ ವಾಗುತ್ತದೆ. ಈ ಮಾಧ್ಯಮದ ಮೂಲಕ ತಿಳಿಸಿದ ವಿಷಯಗಳು ರೈತರಿಗೆ ನಂಬುಗೆ ಹುಟ್ಟಿಸುತ್ತವೆ ಹಾಗೂ ಅವುಗಳನ್ನು ದೀರ್ಘಕಾಲದವರೆಗೆ ಅವರು ನೆನೆಪಿನಲ್ಲಿಟ್ಟು ಕೊಳ್ಳುತ್ತಾರೆ. ಅನುಕ್ರಮವಾಗಿ ಜೋಡಿಸಲ್ಪಟ್ಟ ಪಾರದರ್ಶಕ ಸ್ಥಿರಚಿತ್ರಗಳನ್ನು ಪರದೆಯ ಮೇಲೆ ವೇಗವಾಗಿ ಬಿಂಬಿಸುವುದೇ **ಚಲನಚಿತ್ರ**ದ ತಾಂತ್ರಿಕತೆ. ಧ್ವನಿಯ ಸಂಯೋಜನೆಯೂ ಇರುವುದರಿಂದ ಪರಿಣಾಮ ಅಧಿಕಗೊಳ್ಳುವುದು. ಚಿತ್ರವನ್ನು ಬಿಂಬಿಸಲು ಪ್ರೊಜೆಕ್ಟರ್, ಪರದೆ ಹಾಗೂ ಇತರ ಸಾಧನಗಳು ಅತ್ಯವಶ್ಯಕ. ನಿರ್ದಿಷ್ಟ ವಿಸ್ತರಣ ಕಾರ್ಯಕ್ರಮಗಳ ಬಗ್ಗೆ ರೈತರಲ್ಲಿ ಜಾಗೃತಿಯನ್ನುಂಟುಮಾಡಿ ಸುಧಾರಿಸಿದ ಪದ್ಧತಿಗಳ ಅಂಗೀಕಾರಕ್ಕೆ ಪ್ರೇರೆಪಿಸುವುದಕ್ಕೆ ಚಲನಚಿತ್ರ ಪದ್ಧತಿಯು ಪ್ರಯೋಜನಕಾರಿ. ಸಾಮಾನ್ಯ ಸಭೆಗಳಿಗೆ ಪೂರಕವಾಗಿ ಸಂಬಂಧಪಟ್ಟ ಚಲನಚಿತ್ರಗಳನ್ನು ಉಪಯೋಗಿಸಿ ದಾಗ ಹೆಚ್ಚಿನ ಪರಿಣಾಮ ತೋರಿಬರುತ್ತವೆ.

ವಿಸ್ತರಣ ಶಿಕ್ಷಣ ಕಾರ್ಯಕ್ರಮದಲ್ಲಿ ಚಲನಚಿತ್ರಗಳ ಪಾತ್ರ :

ಸುಧಾರಿಸಿದ ಪದ್ಧತಿಗಳನ್ನು ಚಿತ್ರೀಕರಿಸಿ ಆ ಚಿತ್ರಗಳನು ರೈತರಿಗೆ ಪ್ರದರ್ಶಿಸಲು ಚಲನಚಿತ್ರ ಉತ್ತಮ ಸಾಧನವಾಗುವುದು. ಉದಾಹರಣೆಗೆ, ಹೈಬ್ರಿಡ್ ಮುಸುಕಿನ

ಜೋಳ ಬೆಳೆಯುವ ಎಲ್ಲ ಹಂತಗಳನ್ನು ಚಿತ್ರೀಕರಿಸಿ ರೈತರಿಗೆ ಪ್ರದರ್ಶಿಸುವಿಕೆ. ವಿಶೇಷ ಸಂಶೋಧನೆ ಕಾರ್ಯಕ್ರಮ ಮತ್ತು ವಿಸ್ತರಣ ಕಾರ್ಯಕ್ರಮಗಳನ್ನು ಚಿತ್ರೀಕರಿಸಿ ಅವುಗಳನ್ನು ರೈತರಿಗೆ ಪ್ರದರ್ಶಿಸುವುದರ ಮೂಲಕ ಅವರನ್ನು ಪ್ರೇರೇಪಿಸಬಹುದು.

ಚಲನಚಿತ್ರ ಪ್ರದರ್ಶನದಲ್ಲಿ ಗಮನಿಸಬೇಕಾದ ಅಂಶಗಳು :

(1) ಚಲನಚಿತ್ರವು ಪ್ರಚಲಿತ ವಿಸ್ತರಣ ಶಿಕ್ಷಣ ಕಾರ್ಯಕ್ರಮಕ್ಕೆ ಅನುಗುಣವಾಗಿರಬೇಕು.

(2) ಚಲನಚಿತ್ರದ ಪ್ರದರ್ಶನದ ಸ್ಥಳ ದಿನಾಂಕ ಮತ್ತು ವೇಳೆಯನ್ನು ಮುಂಚಿತವಾಗಿ ರೈತರಿಗೆ ತಿಳಿಸಬೇಕು.

(3) ವಿಸ್ತರಣ ಕಾರ್ಯಕರ್ತನು ಚಿತ್ರವನ್ನು ಮುಂಚಿತವಾಗಿ ಪರೀಕ್ಷಿಸಿರಬೇಕು.

(4) ಪ್ರದರ್ಶನಕ್ಕೆ ಬೇಕಾದ ಸಲಕರಣೆಗಳನ್ನು ಮುಂಚಿತವಾಗಿ ಸಿದ್ಧಪಡಿಸಿ ಕೊಂಡಿರಬೇಕು.



ಚಿತ್ರ 16 : ಚಲನ ಚಿತ್ರ

(5) ವಿಸ್ತರಣ ಕಾರ್ಯಕರ್ತನು ತಾನೇ ಚಿತ್ರ ತೋರಿಸುವನಾದ ಪಕ್ಷದಲ್ಲಿ ಚಿತ್ರಪ್ರದರ್ಶಿಸುವುದರಲ್ಲಿ ಸೂಕ್ತ ತರಬೇತಿ ಹೊಂದಿರಬೇಕು.

(6) ಚಲನಚಿತ್ರ ಪ್ರದರ್ಶನಕ್ಕೆ ಮುಂಚಿತವಾಗಿ ವಿಸ್ತರಣ ಕಾರ್ಯಕರ್ತನು ಸಭೆಯನ್ನುದ್ದೇಶಿಸಿ ಸಭೆಯ ಉದ್ದೇಶ ಮತ್ತು ಚಲನಚಿತ್ರದ ಬಗ್ಗೆ ಸಂಕ್ಷಿಪ್ತ ಮಾಹಿತಿ ಕೊಡಬೇಕು.

(7) ಚಲನಚಿತ್ರ ಪ್ರದರ್ಶನದ ನಂತರ ಚಿತ್ರದ ಬಗ್ಗೆ ರೈತರೊಡನೆ ಚರ್ಚಿಸಿ ಮುಂದಿನ ಕಾರ್ಯಕ್ರಮಗಳನ್ನು ನಿಯೋಜಿಸಬೇಕು.

ಪ್ರಯೋಜನ-ಲಾಭಗಳು :

(1) ಚಲನಚಿತ್ರಗಳಲ್ಲಿ ಚಲನೆ ಹಾಗೂ ಧ್ವನಿಯಿರುವುದರಿಂದ ಜೀವಂತತೆಯ ಪ್ರತ್ಯೀಕವೆನಿಸಿ ನೋಡುಗರಲ್ಲಿ ಅಚ್ಚಳಿಯದ ಪರಿಣಾಮವನ್ನುಂಟುಮಾಡುತ್ತದೆ.

(2) ಚಲನಚಿತ್ರದ ಮುಖಾಂತರ ನೀಡಿದ ವಿವರಣೆ, ಅನಕ್ಷರಸ್ಥರಿಗೂ ಸಹ ಜ್ಞಾನ ಸಂಪಾದಿಸುವುದರಲ್ಲಿ ಸಹಕಾರಿಯಾಗುತ್ತದೆ.

(3) ಚಲನಚಿತ್ರಗಳಲ್ಲಿ ನಡೆದ ಘಟನೆಗಳನ್ನು ವಾಸ್ತವಿಕವಾಗಿ ಚಿತ್ರೀಕರಿಸಿ ಬಹಳ ಕಾಲದವರೆಗೂ ಸಂದರ್ಭಕ್ಕನುಗುಣವಾಗಿ ಉಪಯೋಗಿಸಬಹುದು.

(4) ಚಲನಚಿತ್ರಗಳಲ್ಲಿ ಬೇರೆ ಬೇರೆ ಮತ್ತು ದೂರದ ಸ್ಥಳಗಳಲ್ಲಿ ನಡೆದ ವಾಸ್ತವಿಕ ಘಟನೆಗಳನ್ನು ಚಿತ್ರೀಕರಿಸಿ ಬೇಕಾದಲ್ಲಿ ಪ್ರದರ್ಶಿಸಬಹುದು.

(5) ಚಲನಚಿತ್ರದಲ್ಲಿ ಚಲನೆಯನ್ನು ಬೇಕಾದ ಕಡೆ, ತೀವ್ರ ಅಥವಾ ನಿಧಾನ ಗೊಳಿಸಬಹುದು.

(6) ಸಂಬಂಧಪಟ್ಟ ಅನೇಕ ದೃಗ್ಗೋಚರ ಸಾಧನೆಗಳನ್ನು ಚಲನಚಿತ್ರದಲ್ಲಿ ಪರಿಣಾಮಕಾರಿಯಾಗಿ ಹೊಂದಿಸಿ ಉಪಯೋಗಿಸಿಕೊಳ್ಳಬಹುದು.

(7) ಪರಿಣಾಮ ಪ್ರಾತ್ಯಕ್ಷಿಕೆಗಳನ್ನು ಚಿತ್ರೀಕರಣಗೊಳಿಸಿ, ಬೇರೆ ಬೇರೆ ಸ್ಥಳ ಗಳಲ್ಲಿರುವ ರೈತರ ಅನುಕೂಲಕ್ಕಾಗಿ ಪುನಃ ಉಪಯೋಗಿಸಬಹುದು.

(8) ಚಲನಚಿತ್ರಗಳ ಮುಖಾಂತರ ಅತ್ಯಲ್ಪ ಕಾಲಾವಕಾಶದಲ್ಲಿ ಹೆಚ್ಚಿನ ಮಾಹಿತಿ ಯನ್ನು ಪ್ರೇಕ್ಷಕರಿಗೆ ಒದಗಿಸಬಹುದು.

ಇತಿ-ಮಿತಿಗಳು :

(1) ಚಲನಚಿತ್ರಗಳನ್ನು ಸಾಮಾನ್ಯಸ್ಥಿತಿಯಲ್ಲಿ ಕತ್ತಲಾದ ಮೇಲೆ ಮತ್ತು ವಿದ್ಯುಚ್ಛಕ್ತಿ ಇರುವೆಡೆಗಳಲ್ಲಿಯೇ ಉಪಯೋಗಿಸಬೇಕಾಗುವುದು; ಇಲ್ಲವೆ, ಪ್ರದರ್ಶನದ ಸ್ಥಳ ಕತ್ತಲುಗೊಳಿಸಬೇಕಾಗುವುದು. ಇದು ಹಳ್ಳಿಗಳಲ್ಲಿ ಸಾಧ್ಯವಾಗುವುದಿಲ್ಲ.

(2) ಚಲನಚಿತ್ರ ಸಲಕರಣೆಗಳ ಸಾಗಾಣಿಕೆ ಕ್ಲಿಷ್ಟಕರ.

(3) ಚಲನಚಿತ್ರ ನಿರ್ಮಾಣದ ವೆಚ್ಚ ಅಧಿಕ. ಪರಿಣಾಮವಾಗಿ ಈ ಪದ್ಧತಿ ಭಾರೀ ವೆಚ್ಚದ್ದಾಗುವುದು.

(4) ಈ ಪದ್ಧತಿಯನ್ನು ಉಪಯೋಗಿಸಲು ವಿಸ್ತರಣ ಕಾರ್ಯಕರ್ತನಿಗೆ ಪ್ರತ್ಯೇಕ ತರಬೇತಿ ಅವಶ್ಯ.

(5) ಸ್ಥಳೀಯವಾಗಿ ಪ್ರದರ್ಶಿಸಲು ಸೂಕ್ತವಾದ ಸ್ಥಳೀಯವಾಗಿಯೇ ಚಿತ್ರಿಸಿದ ಚಲನಚಿತ್ರ ದೊರಕುವುದು ವಿರಳ.

(6) ಪ್ರೊಜೆಕ್ಟರ್ ನಾದುರಸ್ತ ಆದಲ್ಲಿ ಅದನ್ನು ಸರಿಪಡಿಸಲು ಯಾವುದಾದರೂ ಸೂಕ್ಷ್ಮ ಸಲಕರಣೆ ಕೆಟ್ಟರೆ ಅದನ್ನು ದೊರಕಿಸುವುದು ಅನೇಕ ಸಲ ಕಷ್ಟವಾಗುತ್ತದೆ.

(7) ಚಲನಚಿತ್ರಗಳು ಹೆಚ್ಚುಕಾಲ ಬಾಳಿಕೆ ಬರುವುದಿಲ್ಲ.

4. ವಸ್ತುಪ್ರದರ್ಶನ (ಎಗ್ಜಿಬಿಷನ್)

ಇತ್ತೀಚೆಗೆ ಕೃಷಿ ವಿಸ್ತರಣ ಕಾರ್ಯಕ್ರಮದಲ್ಲಿ ವಸ್ತುಪ್ರದರ್ಶನವು ಪ್ರಾಮುಖ್ಯ ಸ್ಥಾನಗಳಿಸಿದೆ. ಒಂದು ಸ್ಥಳದಲ್ಲಿ, ಗೊತ್ತಾದ ಕೃಷಿ ವಿಷಯದ ಬಗ್ಗೆ ಅನೇಕ ಶಿಕ್ಷಣ ಸಾಧನಗಳಾದ ನೈಜವಸ್ತು, ಮಾದರಿ, ನಕ್ಷೆ, ಛಾಯಾಚಿತ್ರ, ಮತ್ತಿತರ ಸಲಕರಣೆಗಳನ್ನು ಕ್ರಮವಾಗಿ ಪ್ರದರ್ಶಿಸುವುದೇ **ವಸ್ತುಪ್ರದರ್ಶನವು** ಸುಧಾರಿಸಿದ ಪದ್ಧತಿಯ ಅಂಗೀಕಾರಕ್ಕೆ ರೈತರಲ್ಲಿ ಜಾಗೃತಿ, ಆಸಕ್ತಿ ಮತ್ತು ಇಚ್ಛೆಯನ್ನುಂಟುಮಾಡುವುದಕ್ಕಾಗಿ, ಕೃಷಿ ವಿಸ್ತರಣ ಕಾರ್ಯಕ್ರಮದ ಮುನ್ನಡೆಯನ್ನು ಪರಿಣಾಮಕಾರಿಯಾಗಿ ವಿವಿಧ ರೀತಿಯ ರೈತರಿಗೆ ಪರಿಚಯ ಮಾಡಿಕೊಡುವುದಕ್ಕಾಗಿ ವಸ್ತುಪ್ರದರ್ಶನಗಳು ತುಂಬ ಸಹಕಾರಿಯಾಗುತ್ತವೆ.

ವಸ್ತುಪ್ರದರ್ಶನವನ್ನು ಏರ್ಪಡಿಸಿ, ಉಪಯೋಗಿಸುವಾಗ ಗಮನದಲ್ಲಿಡಬೇಕಾದ ಅಂಶಗಳು :


(1) ಪ್ರದರ್ಶನದ ಉದ್ದೇಶ ಮತ್ತು ರೂಪರೇಷೆಗಳನ್ನು ಮೊದಲೇ ನಿರ್ಧರಿಸಿ ಅದಕ್ಕನುಗುಣವಾಗಿ ಏರ್ಪಡಿಸಬೇಕು.

(2) ಪ್ರದರ್ಶನದ ವಿಷಯ ಬಿಂಬಿಸಬೇಕಾದ ವಿಷಯ ಹಾಗೂ ಪರಿಸ್ಥಿತಿಗನುಗುಣವಾಗಿಯೇ ಇರಬೇಕು.

(3) ಪ್ರದರ್ಶಿಸಲ್ಪಡುವ ವಸ್ತು ಹಾಗೂ ಸಲಕರಣೆಗಳ ಪಟ್ಟಿಯನ್ನು ಸಿದ್ಧಪಡಿಸಿ ಅವುಗಳನ್ನು ಸಕಾಲದಲ್ಲಿ ದೊರಕಿಸಿಕೊಳ್ಳಬೇಕು.

(4) ಬಳಕೆಯಲ್ಲಿರುವ ಸ್ಥಳೀಯ ವಸ್ತುಗಳನ್ನು ಪ್ರದರ್ಶಿತಗಳಾಗಿ ಉಪಯೋಗಿಸಬೇಕು.

(5) ಪ್ರದರ್ಶನದಲ್ಲಿ ಸ್ಥಳಾವಕಾಶಕ್ಕನುಗುಣವಾಗಿ, ಕ್ರಮವಾಗಿ ವಸ್ತುಗಳ ಜೋಡಣೆಯಿರಬೇಕು.



ಚಿತ್ರ 17: ವಸ್ತುಪ್ರದರ್ಶನ — (ಮೇಲ್ಗಡೆ) ನಗರದ ವಾರ್ಷಿಕ ವಸ್ತು ಪ್ರದರ್ಶನದಲ್ಲಿ ಕೃಷಿ ವಿಶ್ವವಿದ್ಯಾನಿಲಯದ ಮಳಿಗೆಯ ಬಾಗಿಲು. (ಕೆಳಗಡೆ) ಪ್ರಗತಿಪರ ರೈತರೊಬ್ಬರು ಪೂರ್ಣರಾಗಿ ಬೆಳೆಯನ್ನು ನಿರೀಕ್ಷಿಸುತ್ತಿದ್ದಾರೆ.

(6) ಪ್ರದರ್ಶನ ನಡೆಯುವ ಸ್ಥಳ, ದಿನಾಂಕ ಮತ್ತು ಸಾರ್ವಜನಿಕರಿಗೆ ತೆರೆದಿರುವ ವೇಳೆಯ ಬಗ್ಗೆ ಮುಂಚಿತವಾಗಿ ಪ್ರಕಟಿಸಬೇಕು.

(7) ವಸ್ತುಪ್ರದರ್ಶನದಲ್ಲಿ ಪ್ರದರ್ಶಿತ ಎಲ್ಲ ವಸ್ತುಗಳ ಬಗ್ಗೆ ಸೂಕ್ತ ತಲೆಬರಹಗಳನ್ನು ಸ್ಥಳೀಯ ಭಾಷೆಯಲ್ಲಿ ಬರೆದಿರಬೇಕು. ಪ್ರದರ್ಶಿತ ವಸ್ತುಗಳ ಬಗ್ಗೆ ಸೂಕ್ತ ಮಾಹಿತಿಯನ್ನು ಕೊಡಲು ತರಬೇತಿ ಪಡೆದ ಕಾರ್ಯಕರ್ತರಿರಬೇಕು.

(8) ರೈತರು ವಸ್ತುಪ್ರದರ್ಶನದಿಂದ ಹಿಂತಿರುಗುವ ಮುನ್ನ ಸೂಕ್ತ ಹಸ್ತಪತ್ರಿಕೆಗಳನ್ನು ಅವರಿಗೆ ಒದಗಿಸಬೇಕು.

(9) ವಸ್ತುಪ್ರದರ್ಶನಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸಿದ ರೈತರಿಗೆ ಮರುಭೆಟ್ಟಿ ಕೊಟ್ಟು ಪ್ರದರ್ಶನದಲ್ಲಿ ನಿರ್ದೇಶಿತ ಪದ್ಧತಿ ಅಂಗೀಕಾರದ ಬಗ್ಗೆ ಬೇರೆ ಬೇರೆ ಶಿಕ್ಷಣ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

(10) ಪ್ರದರ್ಶನ ಒಂದು ತಮಾಷೆಯೆಂಬ ಭಾವನೆ ನೋಡುಗರಲ್ಲಿ ಹುಟ್ಟಬಾರದು.

ಪ್ರಯೋಜನ-ಲಾಭಗಳು :

(1) ವಸ್ತುಪ್ರದರ್ಶನಗಳು ಹೆಚ್ಚಿನ ಜನರಿಗೆ ಮಾಹಿತಿ ಒದಗಿಸುವುದರಲ್ಲಿ ಸಹಕಾರಿಯಾಗುತ್ತವೆ.

(2) ವಸ್ತುಪ್ರದರ್ಶನಗಳು ವಿವಿಧ ವಸ್ತುಗಳ ಸಂಯೋಜನೆಯಿಂದಾಗಿ ವೀಕ್ಷಕರಿಗೆ ಹೆಚ್ಚಿನ ಆಸಕ್ತಿಯನ್ನುಂಟುಮಾಡಿ ಆಚರಣೆಗೆ ಪ್ರೇರಣೆಯನ್ನುಂಟುಮಾಡುತ್ತವೆ.

(3) ವಿಸ್ತರಣ ಕಾರ್ಯಕರ್ತನಿಗೆ ಪರಿಚಯವಿಲ್ಲದ ರೈತರೂ ಕೂಡ ವಸ್ತುಪ್ರದರ್ಶನದಲ್ಲಿ ಭಾಗವಹಿಸಿ ಮುಂದಿನ ವಿಸ್ತರಣ ಕಾರ್ಯಕ್ರಮದಲ್ಲಿ ಆಸಕ್ತಿವಹಿಸಬಲ್ಲರು.

(4) ಕೃಷಿ ಸಂಶೋಧನೆಯ ಮುನ್ನಡೆಯ ಬಗ್ಗೆ ವಸ್ತುಪ್ರದರ್ಶನಗಳು ಮಾಹಿತಿ ಒದಗಿಸುತ್ತದೆ.

ಇತಿ-ಮಿತಿಗಳು :

(1) ವಸ್ತುಪ್ರದರ್ಶನವನ್ನು ಏರ್ಪಡಿಸುವುದರಲ್ಲಿ ವಿಸ್ತರಣ ಕಾರ್ಯಕರ್ತನ ಹೆಚ್ಚಿನ ಸಮಯ ವ್ಯಯವಾಗುತ್ತದೆ.

(2) ವಸ್ತುಪ್ರದರ್ಶನದ ಸಂಘಟನೆಗೆ ವೆಚ್ಚ ಅಧಿಕ.

(3) ವಸ್ತುಪ್ರದರ್ಶನಕ್ಕೆ ಬೇಕಾದ ವಸ್ತು ಮತ್ತು ಸಲಕರಣೆಗಳನ್ನು ಒದಗಿಸಿಕೊಳ್ಳುವುದು ಕಷ್ಟದ ಕೆಲಸ.

(4) ವಸ್ತುಪ್ರದರ್ಶನಗಳನ್ನು ಪದೇಪದೇ ಉಪಯೋಗಿಸುವುದು ಸಾಧ್ಯವಿಲ್ಲ.

5. ಮಡಿಕೆ ಹಸ್ತಪತ್ರಿಕೆ (ಫೋಲ್ಡರ್)

ಒಂದು ನಿರ್ದಿಷ್ಟ ವಿಷಯದ ಬಗ್ಗೆ ಸಮಂಜಸ ಮತ್ತು ನಿಶ್ಚಿತ ಅಂಶಗಳನ್ನೊಳಗೊಂಡ ಸರಳ ಭಾಷೆಯಲ್ಲಿ ಮುದ್ರಿತ ಮಡಿಕೆ ಹಾಕಲು ಬರುವಂತಿರುವ ಲಘುಪತ್ರಿಕೆ **ಮಡಿಕೆ ಹಸ್ತಪತ್ರಿಕೆ.** ಈ ಪ್ರಕಟಣೆಯಲ್ಲಿ ಆ ವಿಷಯಕ್ಕೆ ಸಂಬಂಧಪಟ್ಟ ಎಲ್ಲ ಮುಖ್ಯವಾದ ಅಂಶಗಳನ್ನು ಕೊಟ್ಟಿರುತ್ತದೆ; ಈ ಹಸ್ತಪತ್ರಿಕೆಗಳು ನಿಖರವಾದ ವೈಜ್ಞಾನಿಕ ಮಾಹಿತಿಯನ್ನು ಕಡಿಮೆ ವೆಚ್ಚದಲ್ಲಿ ಒದಗಿಸಲು ನೆರವಾಗುತ್ತವೆ.

ಹಸ್ತಪತ್ರಿಕೆಗಳ ಸಿದ್ಧತೆ ಹಾಗೂ ಉಪಯೋಗಿಸುವಿಕೆಗಳಲ್ಲಿ ಗಮನಿಸಬೇಕಾದ ಅಂಶಗಳು:

(1) ಹಸ್ತಪತ್ರಿಕೆಗಳಲ್ಲಿನ ವಿಷಯುಗಳು ಪ್ರಚಲಿತ ಸಮಸ್ಯೆ ಅಥವಾ ಸುಧಾರಿಸಿದ ಪದ್ಧತಿಗಳ ಬಗ್ಗೆ ಇರಬೇಕು.

(2) ಹಸ್ತಪತ್ರಿಕೆಗಳ ವಿಷಯಗಳಿಗೆ ಸಂಶೋಧನೆಯ ಫಲಿತಾಂಶಗಳ ಆಧಾರವಿರಬೇಕು.

(3) ಹಸ್ತಪತ್ರಿಕೆಗಳ ಭಾಷೆ ಸರಳವಾಗಿರಬೇಕು ಹಾಗೂ ಸ್ಥಳೀಯ ಜನರು ಆಡುವ ನುಡಿಗಳನ್ನು ಒಳಗೊಂಡಿರಬೇಕು.

(4) ಹಸ್ತಪತ್ರಿಕೆಯ ಬರವಣಿಗೆಯ ಶೈಲಿ ಗ್ರಾಮೀಣವಾಗಿರಬೇಕು.

(5) ಹಸ್ತಪತ್ರಿಕೆಗಳಲ್ಲಿ ಮುಖ್ಯಾಂಶಗಳನ್ನು ಒತ್ತಿಹೇಳಬೇಕು, ಅಂಥ ವಿಷಯಗಳನ್ನು ದಪ್ಪ ಅಕ್ಷರಗಳಲ್ಲಿ ಮುದ್ರಿಸಬೇಕು.

(6) ಹಸ್ತಪತ್ರಿಕೆಗಳಲ್ಲಿ ಅಗತ್ಯವಿದ್ದರೆ ಚಿತ್ರ ಅಥವಾ ರೇಖಾಚಿತ್ರಗಳನ್ನು ಕೊಡಬೇಕು.

(7) ಹಸ್ತಪತ್ರಿಕೆಯ ಕೊನೆಯಲ್ಲಿ ಸಾರಾಂಶ ಕೊಡಬೇಕು.

(8) ಹಸ್ತಪತ್ರಿಕೆಗಳನ್ನು ಮುಖ್ಯವಾಗಿ ಗುಂಪುಸಭೆ, ಪ್ರದರ್ಶನ, ಕ್ಷೇತ್ರಸಂದರ್ಶನ, ಕ್ಷೇತ್ರೋತ್ಸವ ಮತ್ತು ವೈಯುಕ್ತಿಕ ಭೆಟ್ಟಿ ಸಮಯಗಳಲ್ಲಿ ರೈತರಿಗೆ ಕೊಡಬೇಕು.



ಚಿತ್ರ 18 : ಮಡಿಕೆ ಹಸ್ತಪತ್ರಿಕೆ

(9) ಶಿಫಾರಸ್ಸುಗಳು ಬದಲಾದಾಗ ಹಸ್ತಪತ್ರಿಕೆಗಳಲ್ಲಿ ಯೋಗ್ಯ ಬದಲಾವಣೆಗಳನ್ನು ಮಾಡಬೇಕು. ಹಿಂದಿನವುಗಳನ್ನೇ ಕೊಡಬಾರದು. ಅಲ್ಪ ಬದಲಾವಣೆಗಳಿದ್ದರೆ ಕೈಯಿಂದ ಬದಲಾವಣೆ ಮಾಡಬೇಕು. ಹೆಚ್ಚಿದ್ದರೆ ಹಳೆಯವುಗಳನ್ನು ರದ್ದುಗೊಳಿಸಿ ಹೊಸವನ್ನು ಮುದ್ರಿಸಬೇಕು.

ಪ್ರಯೋಜನ-ಲಾಭಗಳು :

(1) ಹಸ್ತಪ್ರತಿಗಳು ಹೆಚ್ಚಿನ ಜನರಿಗೆ ಕಡಿಮೆ ವೆಚ್ಚದಲ್ಲಿ ಇಚ್ಛಿತ ಮಾಹಿತಿಯನ್ನೊದಗಿಸುತ್ತದೆ.

(2) ವಿಸ್ತರಣ ಕಾರ್ಯಕರ್ತನ ಗೈರುಹಾಜರಿಯಲ್ಲಿಯೂ ರೈತರು ನಿಖರ ಮಾಹಿತಿಯನ್ನು ಉತ್ತಮವಾದ ಹಸ್ತಪತ್ರಿಕೆಯಿಂದ ಪಡೆಯಬಹುದು.

(3) ಹಸ್ತಪತ್ರಿಕೆಗಳು ವಿಸ್ತರಣ ಸಂಸ್ಥೆ ಮತ್ತು ವೈಯುಕ್ತಿಕ ರೈತರ ನಡುವೆ ಸಂಬಂಧವನ್ನು ಅಧಿಕಗೊಳಿಸುತ್ತವೆ.

(4) ಹಸ್ತಪತ್ರಿಕೆಗಳು ವಿಶ್ವಾಸನೀಯ ಶೈಕ್ಷಣಿಕ ಸಂಸ್ಥೆಯಿಂದ ಹೊರಬಿದ್ದಾಗ ಅವುಗಳಲ್ಲಿನ ವಿಷಯಗಳಲ್ಲಿ ನಂಬಿಗೆ ಹುಟ್ಟುತ್ತದೆ.

(5) ಹಸ್ತಪತ್ರಿಕೆಯಲ್ಲಿನ ವಿಷಯಗಳನ್ನು ಓದಿದ ರೈತರು ತಮ್ಮಲ್ಲಿ ವಿಚಾರ ವಿನಿಮಯ ಮಾಡಲು ಪ್ರಾರಂಭಿಸುವರು.

ಇತಿ-ಮಿತಿಗಳು :


(1) ಅನಕ್ಷರಸ್ಥ ರೈತರಿಗೆ ಹಸ್ತಪತ್ರಿಕೆಗಳಿಂದ ಯಾವ ಪ್ರಯೋಜನವೂ ಆಗ ಲಾರದು. ರೈತರಲ್ಲಿ ಅನಕ್ಷರಸ್ಥರೇ ಬಹುಮಂದಿ.

(2) ಹಸ್ತಪತ್ರಿಕೆಗಳನ್ನು ಪುಕ್ಕಟೆಯಾಗಿ, ಎಲ್ಲೆಡೆಯಲ್ಲಿಯೂ ಪೂರೈಸುವುದರಿಂದ ಅವುಗಳ ಮಹತ್ವ ಅಷ್ಟೆನಿಸುವುದಿಲ್ಲ.

(3) ಹಸ್ತಪತ್ರಿಕೆಗಳನ್ನು ಓದುವಾಗ ಅನುಮಾನಗಳೇನಾದರೂ ಉಂಟಾದರೆ ಓದುಗರು ಗೊಂದಲಕ್ಕೀಡಾಗುವರು. ಅದರಲ್ಲಿನ ವಿಷಯಗಳನ್ವಯ ಆಚರಣೆ ನಡೆಯು ಬಾರದು.

6. ಸುತ್ತೋಲೆ (ಸರ್ಕ್ಯೂಲರ್ ಲೆಟರ್) :

ರೈತರನೇಕರಿಗೆ ವಿಶೇಷ ಸಂದರ್ಭಗಳಲ್ಲಿ ಕಳಿಸುವ ಪತ್ರ **ಸುತ್ತೋಲೆ.**



ಚಿತ್ರ 19: ಸುತ್ತೋಲೆ

ಸುತ್ತೋಲೆಯ ವಿಷಯ ಸರ್ವರಿಗೂ ಸಾಮಾನ್ಯವಾಗಿದ್ದು, ವೈಯಕ್ತಿಕವಾಗಿ ಎಲ್ಲರಿಗೂ

ಬರೆದಂತಿರುತ್ತದೆ. ಇದು ಕಲ್ಲಚ್ಚು ಮಾಡಿದ್ದಾಗಿರಬಹುದು; ಇಲ್ಲವೆ ಅತಿ ಹೆಚ್ಚಿನ ಜನರಿಗೆ ಕಳಿಸುವ ಸಂದರ್ಭಗಳಲ್ಲಿ ಮುದ್ರಿತವಾದದ್ದಿರಬಹುದು. ಈ ಸುತ್ತೋಲೆಗಳ ಮೂಲಕ ರೈತರಿಗೆ ವಿಸ್ತರಣ ಕಾರ್ಯಕ್ರಮದಲ್ಲಿ ಆಸಕ್ತಿ ಹುಟ್ಟಿಸಿ ಆ ಕಾರ್ಯಕ್ರಮ ಗಳಲ್ಲಿ ಭಾಗವಹಿಸಲು ಅವರನ್ನು ಮಾನಸಿಕವಾಗಿ ಪ್ರೇರೇಪಿಸುವುದು ಸಾಧ್ಯ. ರೈತ ರೊಡನೆ ನಿರಂತರ ಸಂಪರ್ಕವನ್ನೇರ್ಪಡಿಸುವುದಕ್ಕೆ ಆಗಾಗ ವಿಸ್ತರಣ ಕಾರ್ಯಕರ್ತರು, ತಜ್ಞರು ಸುತ್ತೋಲೆಗಳನ್ನು ಕಳುಹಿಸಬೇಕಾಗುತ್ತದೆ.

ಸುತ್ತೋಲೆಗಳನ್ನು ಬರೆಯುವುದರಲ್ಲಿ ಹಾಗೂ ಉಪಯೋಗಿಸುವುದರಲ್ಲಿ ಗಮನದಲ್ಲಿಡಬೇಕಾದ ಅಂಶಗಳು :

(1) ಸುತ್ತೋಲೆಗಳು ಸರಳವಾಗಿ, ಸಂಕ್ಷಿಪ್ತವಾಗಿರುವುದರ ಜೊತೆಗೆ ಮತ್ತು ಸೌಜನ್ಯಪೂರಿತವಾಗಿರಬೇಕು.

(2) ಒಂದು ಸುತ್ತೋಲೆ ಒಂದೇ ಒಂದು ವಿಷಯಕ್ಕೆ ಸಂಬಂಧಪಟ್ಟದ್ದಾಗಿರ ಬೇಕು.

(3) ಸುತ್ತೋಲೆಗಳನ್ನು ವಿಸ್ತರಣ ಕಾರ್ಯಕ್ರಮಗಳ ಅಂಗವಾಗಿ, ಆಗಾಗ ಹೊರಡಿಸುತ್ತಿರಬೇಕು.

(4) ಸುತ್ತೋಲೆಯಲ್ಲಿನ ವಿಷಯ ಕಾರ್ಯರೂಪಕ್ಕೆ ತರಲು ಪ್ರೇರೇಪಿಸು ವಂಥದೂ, ನೆರವಾಗುವುದೂ ಆಗಿರಬೇಕು.

(5) ಸುತ್ತೋಲೆಗಳನ್ನು ಪದೇಪದೇ ಬರೆಯಬಾರದು: ಸಂದರ್ಭೋಚಿತವಾಗಿ ಆಗೊಮ್ಮೆ ಈಗೊಮ್ಮೆ ಉಪಯೋಗಿಸಬೇಕು.

ಪ್ರಯೋಜನ–ಲಾಭಗಳು :

(1) ಕೆಲವು ವಿಶೇಷ ಸಂದರ್ಭಗಳಲ್ಲಿ ಯಾವುದಾದರೂ ಪ್ರಚಲಿತ ಸಮಸ್ಯೆಯ ಬಗ್ಗೆ ಪರಿಹಾರೋಪಾಯಗಳನ್ನು ಸುತ್ತೋಲೆಯ ಮೂಲಕ ಸಂಬಂಧಪಟ್ಟ ರೈತರಿಗೆ ತಲುಪಿಸಬಹುದಾಗಿದೆ.

(2) ಹಲವಾರು ವಿಷಯಗಳನ್ನು ಸಂಬಂಧಪಟ್ಟ ರೈತರಿಗೆ ಸುತ್ತೋಲೆಗಳ ಮೂಲಕ ಸಕಾಲದಲ್ಲಿ ತಿಳಿಸಬಹುದಾಗಿದೆ.

(3) ಸುತ್ತೋಲೆಗಳನ್ನು ಉಪಯೋಗಿಸುವುದರಿಂದ ವಿಸ್ತರಣ ಕಾರ್ಯಕರ್ತರ ವೇಳೆಯಲ್ಲಿ ಉಳಿತಾಯವಾಗುತ್ತದೆ.

(4) ಹಲವು ಬಗೆಯ ವಿಷಯಗಳನ್ನು ರೈತರಿಗೆ ತಿಳಿಸಲು ಸುತ್ತೋಲೆಗಳನ್ನು ಉಪಯೋಗಿಸಬಹುದು.

ಇತಿ-ಮಿತಿಗಳು :

(1) ಸುತ್ತೋಲೆಗಳ ಉಪಯೋಗವನ್ನು ಅಕ್ಷರಸ್ಥ ರೈತರು ಮಾತ್ರ ಪಡೆಯುತ್ತಾರೆ.

(2) ಸುತ್ತೋಲೆಗಳನ್ನು ಪಡೆಯದ ರೈತರಲ್ಲಿ ಮಾನಸಿಕವಾಗಿ ವಿಸ್ತರಣ ಸಂಸ್ಥೆಯ ಬಗ್ಗೆ ಪಕ್ಷಪಾತ ಭಾವನೆ ಉಂಟಾಗಬಹುದಾಗಿದೆ.

7. ಟೆಲಿವಿಷನ್ :

ಟೆಲಿವಿಷನ್ ರೇಡಿಯೋದಂಥ ಒಂದು ಸಾಧನ. ಇದರಲ್ಲಿನ ಪರದೆಯಂಥ ಸಾಧನದ ಮೇಲೆ ಚಿತ್ರಗಳು ಮೂಡಿಬರುವ ವ್ಯವಸ್ಥೆ ಇರುತ್ತದೆ. ಜೊತೆಗೆ ಧ್ವನಿಯೂ ಸೇರಿರುತ್ತದೆ. ಅಂತೆಯೇ ಟೆಲಿವಿಷನ್‌ನಲ್ಲಿ ಜೀವಂತ ಸನ್ನಿವೇಶ ನಿರ್ಮಾಣ ಸಾಧ್ಯವಿದೆ. ಇದರಲ್ಲಿ ಕಣ್ಣು ಹಾಗೂ ಕಿವಿಗಳೆರಡಕ್ಕೂ ಚಲನಚಿತ್ರಗಳಲ್ಲಿನಂತೆ ಜ್ಞಾನಪ್ರಸಾರ ನಡೆಯುತ್ತದೆ. ಇದನ್ನು ರೇಡಿಯೋದಂತೆ ಎಲ್ಲೆಡೆಗಳಲ್ಲಿಯೂ ಇಟ್ಟುಕೊಂಡು ಪ್ರಯೋಜನ ಹೊಂದಬಹುದು. ಒಂದೇ ಸಮಯದಲ್ಲಿ ಹಲವಾರು ಜನರಿಗೆ ಕಂಡು, ಮಾಡಿ, ತೋರಿಸಿ, ಹೇಳಿದಂತೆ ಕಾರ್ಯವು ಈ ಸಾಧನದ ಮುಖಾಂತರ ನಡೆಯುತ್ತದೆ.

ವಿಶ್ವದಲ್ಲಿಯ ಟೆಲಿವಿಷನ್ ಒಂದು ವಿಶಿಷ್ಟ ವಿಸ್ತರಣ ಪದ್ಧತಿಯಾಗಿ ರೈತರಿಗೆ ಬಹು ಪರಿಣಾಮಕಾರಿಯಾಗಿ ಜ್ಞಾನ, ಕುಶಲತೆಗಳನ್ನು ನೀಡುತ್ತಲಿದೆ. ಟೆಲಿವಿಷನ್ನಿನಿಂದ ಇಚ್ಚಿತ ಮಾಹಿತಿಯನ್ನು ಜೀವಿತ ಸನ್ನಿವೇಶಗಳನ್ನು ಉಪಯೋಗಿಸಿಕೊಂಡು ಜನರಿಗೆ ಕೊಡುವುದು ಸಾಧ್ಯ. ತುರ್ತು ಮಾಹಿತಿಯನ್ನು ತೀವ್ರವಾಗಿ ಒಳ್ಳೆಯ ಪರಿಣಾಮಕಾರಿಯಾಗಿ ಟೆಲಿವಿಷನ್ನಿನಿಂದ ಬಿತ್ತರಿಸಬಹುದಾಗಿದೆ.

ಟೆಲಿವಿಷನ್ ಉಪಯೋಗಿಸುವಾಗ ಗಮನದಲ್ಲಿಡಬೇಕಾದ ಅಂಶಗಳು :

(1) ಸುಯೋಜಿತ ಯೋಜನೆ ಅತ್ಯಗತ್ಯ.


(2) ಸನ್ನಿವೇಶಗಳು ಮತ್ತು ಮಾಹಿತಿ ಸಕಾಲಿತವಾಗಿರಬೇಕು.

(3) ಸನ್ನಿವೇಶಗಳು ವೈವಿಧ್ಯಮಯವಾಗಿರಬೇಕು.

(4) ಸ್ಥಳೀಯ ಸನ್ನಿವೇಶಗಳನ್ನು ಉಪಯೋಗಿಸಿಕೊಳ್ಳಬೇಕು.

(5) ಮುಖ್ಯಾಂಶಗಳಿಗೆ ಪ್ರಾಮುಖ್ಯತೆ ಕೊಡಬೇಕು.

(6) ಕಾರ್ಯಕ್ರಮಗಳನ್ನು ಬಿತ್ತರಿಸುವಾಗ ರೈತರ ವೇಳೆ ಮತ್ತು ಅನುಕೂಲತೆಗಳನ್ನು ಗಮನಿಸಬೇಕು.



ಚಿತ್ರ 20 : ಟೆಲಿವಿಷನ್

(7) ಕಾರ್ಯಕ್ರಮಗಳು ವೀಕ್ಷಕರ ಆಸಕ್ತಿ ಮತ್ತು ಅವಶ್ಯಕತೆಗಳನ್ನು ಗಮನದಲ್ಲಿಟ್ಟಿರಬೇಕು.

ಪ್ರಯೋಜನ-ಲಾಭಗಳು :

(1) ಟೆಲಿವಿಷನ್ನಿನಲ್ಲಿ ವೈವಿಧ್ಯಮಯ ಸನ್ನಿವೇಶಗಳನ್ನು ಉಪಯೋಗಿಸಿಕೊಳ್ಳಬಹುದಾಗಿದೆ.

(2) ಹಲವಾರು ವಿಸ್ತರಣ ಪದ್ಧತಿಗಳಾದ ಗುಂಪು ಸಭೆ, ಪ್ರಾತ್ಯಕ್ಷಿಕೆ, ಪ್ರದರ್ಶನ ಕ್ಷೇತ್ರೋತ್ಸವ ಮತ್ತು ಇತರ ಪದ್ಧತಿಗಳನ್ನು ಉಪಯೋಗಿಸಿಕೊಂಡು ಟೆಲಿವಿಷನ್ ಮೂಲಕ ರೈತರಿಗೆ ಮಾಹಿತಿ ಕೊಡಲು ಸಾಧ್ಯ.

(3) ಟೆಲಿವಿಷನ್ನಿನಲ್ಲಿ ನೇತ್ರ ಹಾಗೂ ಕರ್ಣ ಈ ಎರಡೂ ಇಂದ್ರಿಯಗಳಿಗೂ ತರಬೇತಿ ಕೊಡಬಹುದು.

ಅಧ್ಯಾಯ 6

ಚಕ್ಷು ಸಾಧನಗಳು

ವಿಸ್ತರಣ ಕಾರ್ಯಕರ್ತನ ವಿಷಯ ಬಿತ್ತರಣೆಯ ಕುಶಲತೆಯ ಮೇಲೆ ವಿಸ್ತರಣ ಶಿಕ್ಷಣದ ಪರಿಣಾಮವು ಬಹುಮಟ್ಟಿಗೆ ಅವಲಂಬಿಸಿರುತ್ತದೆ. ಮೂಲಭೂತವಾಗಿ ಮೂರು ವಿಧವಾದ ವಿಷಯ ಬಿತ್ತರಣೆಗಳಿವೆ:

(1) ಲಿಖಿತ ಬಿತ್ತರಣೆ

(2) ಮೌಖಿಕ ಬಿತ್ತರಣೆ

(3) ಚಾಕ್ಷಿಕ ಬಿತ್ತರಣೆ

ಲಿಖಿತ ಬಿತ್ತರಣೆ ಮತ್ತು ಮೌಖಿಕ ಬಿತ್ತರಣೆ ಎರಡು ಮುಖ್ಯ ರೂಪಗಳು. ಚಾಕ್ಷಿಕ ಸಾಧನಗಳು ಖಚಿತವಾದ ನೆರವು ನೀಡುತ್ತವೆ.

ಮಾನವರಲ್ಲಿ ಯಾವುದೇ ಜ್ಞಾನ ಸಂಪಾದನೆಯು ಪಂಚೇಂದ್ರಿಯಗಳ ಮೂಲಕ ಆಗುವುದಾದರೂ ಬಹು ಭಾಗ ಕಣ್ಣು ಹಾಗೂ ಕಿವಿಗಳ ಮೂಲಕ ಸಾಧ್ಯ. ಇದರಲ್ಲೂ ಶೇಕಡ 85 ರಷ್ಟು, ನೇತ್ರೇಂದ್ರಿಯ (ಕಣ್ಣು) ಮೂಲಕ ಆಗುತ್ತದೆ.

ಸಾಮಾನ್ಯವಾಗಿ ಬಹುಪಾಲು ವಿಸ್ತರಣ ಕಾರ್ಯಕರ್ತರು, ವಿಸ್ತರಣ ಕಾರ್ಯ ಕ್ರಮಗಳಲ್ಲಿ ನೇತ್ರೇಂದ್ರಿಯ ಸಾಧನಗಳನ್ನು ಉಪಯೋಗಿಸುತ್ತಾರೆ. ಅವುಗಳ ಮಹತ್ವ ಹೆಚ್ಚು.

ನೇತ್ರೇಂದ್ರಿಯ ಸಾಧನಗಳನ್ನು ವಿಸ್ತರಣ ಪದ್ಧತಿಗಳಲ್ಲಿ ಅಳವಡಿಸುವುದರಿಂದ ಅನೇಕ ವಿಧದ ಮೂಲಭೂತ ಉಪಯುಕ್ತತೆಗಳನ್ನು ಪಡೆಯಬಹುದು. ಅವು ಈ ಕೆಳಗಿನಂತಿವೆ:

(1) ನೇತ್ರೇಂದ್ರಿಯ (ಚಕ್ಷು) ಸಾಧನಗಳಿಂದ ಶಿಕ್ಷಣಾರ್ಥಿಗಳು ಅಲ್ಪ ಅವಧಿಯಲ್ಲಿ ಹೆಚ್ಚಿಗೆ ಕಲಿಯುತ್ತಾರೆ.

(2) ಶಿಕ್ಷಣಾರ್ಥಿಗಳೆಲ್ಲರೂ ಸಮಮಟ್ಟದಲ್ಲಿ ಕಲಿಯಲು ನೇತ್ರೇಂದ್ರಿಯ ಸಾಧನಗಳಿಂದ ಅನುಕೂಲತೆ ಏರ್ಪಡುತ್ತದೆ.

(4) ಟೆಲಿವಿಜನ್ನುಗಳಿಂದ ಸ್ಥಳೀಯ ಸನ್ನಿವೇಶಗಳನ್ನು ಉಪಯೋಗಿಸಿಕೊಂಡು ಮನರಂಜನೆಯ ಮೂಲಕ ಶಿಕ್ಷಣ ಕೊಡಲು ಸಾಧ್ಯವಾಗುತ್ತದೆ.

(5) ಸನ್ನಿವೇಶಗಳ ನೋಡುವಿಕೆ ಮತ್ತು ಅವುಗಳ ಬಗೆಗೆ ವಿವರ ಕೇಳುವಿಕೆ ಟೆಲಿವಿಷನ್ ಕಾರ್ಯಕ್ರಮಗಳಲ್ಲಿ ಏಕಕಾಲದಲ್ಲಿ ನಡೆಯುವುದರಿಂದ ವೀಕ್ಷಕರಿಗೆ ಹೆಚ್ಚಿನ ನಂಬಿಕೆ ಉಂಟಾಗುತ್ತದೆ.

(6) ಗತಕಾಲದ ಸನ್ನಿವೇಶಗಳನ್ನು ಪುನರಾವರ್ತನೆಗೊಳಿಸಲೂ ಟೆಲಿವಿಷನ್ ಗಳಿಂದ ಸಾಧ್ಯ.

(7) ಅನಕ್ಷರಸ್ಥರಿಗೂ, ಅಲ್ಪ ಜ್ಞಾನಿಗಳಿಗೂ ಟೆಲಿವಿಷನ್ ಮುಖಾಂತರ ಅತ್ಯಂತ ಪರಿಣಾಮಕಾರಿಯಾಗಿ ಜ್ಞಾನ ಕೊಡಬಹುದು.

ಇತಿ–ಮಿತಿಗಳು :

(1) ಟೆಲಿವಿಷನ್ ಕಾರ್ಯಕ್ರಮ ನಡೆಯಿಸಲು ಹೆಚ್ಚು ವೆಚ್ಚ ತಗಲುವುದು.

(2) ವಿದ್ಯುಚ್ಛಕ್ತಿ ಇರುವೆಡೆಗಳಲ್ಲಿ ಟೆಲಿವಿಷನ್ ಕಾರ್ಯಕ್ರಮ ಸಾಧ್ಯ.

(3) ಟೆಲಿವಿಷನ್ನಿನ ವೀಕ್ಷಕಪಟಲದ ಅಳತೆ ಚಿಕ್ಕದಾಗಿರುವುದರಿಂದ ಪ್ರೇಕ್ಷಕರಿಗೆ ಬೇಸರಬರಬಹುದಾಗಿದೆ.

8. ಭಿತ್ತಿಪತ್ರ :

ವಿವಿಧ ಆಕರ್ಷಕ ಬಣ್ಣಗಳಿಂದ ಕೂಡಿದ ಮತ್ತು ಕೆಲವೇ ಪದಗಳಿರುವ ಚಿತ್ರ ರೂಪದ ವಿಸ್ತರಣ ಶಿಕ್ಷಣ ಪದ್ಧತಿಯು. ಭಿತ್ತಿಪತ್ರವು ದಾರಿಯಲ್ಲಿ ಹೋಗುವವರ ಗಮನವನ್ನು ಸೆಳೆದು ಅತ್ಯಲ್ಪ ವೇಳೆಯಲ್ಲಿ ಒಂದು ಮುಖ್ಯ ಸಂದೇಶವನ್ನು ಅವರ ಮನಸ್ಸಿನಲ್ಲಿ ಅಚ್ಚೊತ್ತುವಂತೆ ಮಾಡುತ್ತದೆ. **ಭಿತ್ತಿಪತ್ರ** ಒಂದು ಚಿತ್ರರೂಪದ ಸಾಂಕೇತಿಕ ಘೋಷಣೆ.

ಭಿತ್ತಿಪತ್ರದ ವಿಶೇಷ ಗುಣಧರ್ಮಗಳು :


(1) ಭಿತ್ತಿಪತ್ರದಲ್ಲಿ ದಾರಿಯಲ್ಲಿ ಹೋಗುವವರ ಗಮನ ಸೆಳೆಯಲು ಸ್ಪಷ್ಟ ಚಿತ್ರವಿರಬೇಕು.

(2) ಭಿತ್ತಿಪತ್ರದಲ್ಲಿ ಒಂದೇ ನೋಟದಲ್ಲಿ ವೀಕ್ಷಕರಿಗೆ ಮುಖ್ಯವಾದ ಸಂದೇಶ ಸಿಗಬೇಕು.

(3) ಭಿತ್ತಿಪತ್ರದಲ್ಲಿ ಪದಗಳು ವಿರಳವಾಗಿ ಮತ್ತು ಸರಳವಾಗಿರಬೇಕು.

(4) ಭಿತ್ತಿಪತ್ರದಲ್ಲಿ ಕೇವಲ ಒಂದೇ ವಿಚಾರದ ಬಗ್ಗೆ ಸಂದೇಶವಿರಬೇಕು.

(5) ಭಿತ್ತಿಪತ್ರದಲ್ಲಿ ಮನಸೆಳೆಯುವ, ಆಕರ್ಷಕ ವರ್ಣಸಂಯೋಜನೆಯಿರಬೇಕು.



ಚಿತ್ರ 21 : ಭಿತ್ತಿಪತ್ರ — ರೈತರಿಬ್ಬರೂ ತರಕಾರಿ ಬೆಳೆಯ ಬಗೆಗಿನ ಭಿತ್ತಿಪತ್ರವೊಂದನ್ನು ಈಕ್ಷಿಸುತ್ತಿದ್ದಾರೆ.

(6) ಭಿತ್ತಿಪತ್ರದ ಅಳತೆ ಸೂಕ್ತ ಅಂದರೆ ಸಾಮಾನ್ಯವಾಗಿ 30 ಅಂಗಲು ಉದ್ದ 20 ಅಂಗುಲ ಅಗಲವಾದದ್ದಿರಬೇಕು.

(7) ಭಿತ್ತಿಪತ್ರದ ಸಂದೇಶ ಸಕಾಲಿಕವಾಗಿರಬೇಕು.

ಭಿತ್ತಿಪತ್ರವು ಮುಖ್ಯವಾಗಿ ಸಾಮೂಹಿಕ ಶಿಕ್ಷಣ ಪದ್ಧತಿಯು. ಇದು ಬೆಳೆ-ಆಂದೋಲನ ಮತ್ತು ಹಲವಾರು ಸುಧಾರಿಸಿದ ಪದ್ಧತಿಗಳ ಅನುಸರಣೆಯ ಮೊದಲನೇ ಹಂತ ಸಾಧನೆಗೆ ಉಪಯುಕ್ತವೆನಿಸುವುದು.

ಪ್ರಯೋಜನ–ಲಾಭಗಳು :

(1) ಭಿತ್ತಿಪತ್ರವು ವೀಕ್ಷಕರ ಗಮನ ಸೆಳೆದು ಸಂದೇಶ ಮುಟ್ಟಿಸುತ್ತದೆ.

(2) ಭಿತ್ತಿಪತ್ರವು ಸುಧಾರಿಸಿದ ಪದ್ಧತಿಗಳ ಅನುಸರಣೆಗೆ ಉತ್ಸುಕತೆ ಹುಟ್ಟಿಸುತ್ತದೆ ಮತ್ತು ಪ್ರೇರೇಪಿಸುತ್ತದೆ.

(3) ಭಿತ್ತಿಪತ್ರದ ಸಂದೇಶ, ಹೊಸ ಪದ್ಧತಿ ಕಾರ್ಯರೂಪಕ್ಕೆ ತರಲು ನೆನಪು ಕೊಡುತ್ತದೆ.

(4) ಭಿತ್ತಿಪತ್ರವು ಹೊಸ ಪದ್ಧತಿಗಳ ಅನುಸರಣೆಗೆ ಸೂಕ್ತ ಮತ್ತು ಪ್ರೇರೇಪಿಸುವ ವಾತಾವರಣವನ್ನು ಕಲ್ಪಿಸಿಕೊಡುತ್ತದೆ.

(5) ಭಿತ್ತಿಪತ್ರ ವಿಸ್ತರಣ ಕಾರ್ಯಕರ್ತರು ಇಲ್ಲದೆ ಸಂದೇಶ ತಲುಪಿಸಬಲ್ಲ ಪದ್ಧತಿಯಾಗಿದೆ.

(6) ಭಿತ್ತಿಪತ್ರ ವಿಸ್ತರಣ ಶಿಕ್ಷಣ ಪದ್ಧತಿಗೆ ವೆಚ್ಚ ಕಡಿಮೆ.

(7) ಭಿತ್ತಿಪತ್ರ ವಿಸ್ತರಣ ಶಿಕ್ಷಣ ಪದ್ಧತಿಯನ್ನು ಹಲವಾರು ವಿಸ್ತರಣ ಕಾರ್ಯ ಸಾಧನೆಗಳಿಗಾಗಿ ಅನೇಕ ಕಡೆಗಳಲ್ಲಿ ಉಪಯೋಗಿಸಬಹುದು.

ಇತಿ–ಮಿತಿಗಳು :

(1) ಭಿತ್ತಿಪತ್ರದ ಮೂಲಕ ಕೇವಲ ಒಂದೇ ವಿಚಾರದ ಬಗ್ಗೆ ಮಾಹಿತಿಯನ್ನು ಕೊಡುವುದು ಸಾಧ್ಯ.

(2) ಭಿತ್ತಿಪತ್ರವನ್ನು ಚಿತ್ರಿಸಲು ಸೂಕ್ತ ತರಬೇತಿ ಅವಶ್ಯವಿದೆ.

(3) ಪ್ರತಿಕೂಲ ವಾತಾವರಣದಲ್ಲಿ ಭಿತ್ತಿಪತ್ರದ ಶಿಕ್ಷಣದ ಮೌಲ್ಯ ಕಡಿಮೆಯಾಗುತ್ತದೆ.

ಅಧ್ಯಾಯ 6

ಚಕ್ಷು ಸಾಧನಗಳು

ವಿಸ್ತರಣ ಕಾರ್ಯಕರ್ತನ ವಿಷಯ ಬಿತ್ತರಣೆಯ ಕುಶಲತೆಯ ಮೇಲೆ ವಿಸ್ತರಣ ಶಿಕ್ಷಣದ ಪರಿಣಾಮವು ಬಹುಮಟ್ಟಿಗೆ ಅವಲಂಬಿಸಿರುತ್ತದೆ. ಮೂಲಭೂತವಾಗಿ ಮೂರು ವಿಧವಾದ ವಿಷಯ ಬಿತ್ತರಣೆಗಳಿವೆ:

(1) ಲಿಖಿತ ಬಿತ್ತರಣೆ

(2) ಮೌಖಿಕ ಬಿತ್ತರಣೆ

(3) ಚಾಕ್ಷಿಕ ಬಿತ್ತರಣೆ

ಲಿಖಿತ ಬಿತ್ತರಣೆ ಮತ್ತು ಮೌಖಿಕ ಬಿತ್ತರಣೆ ಎರಡು ಮುಖ್ಯ ರೂಪಗಳು. ಚಾಕ್ಷಿಕ ಸಾಧನಗಳು ಖಚಿತವಾದ ನೆರವು ನೀಡುತ್ತವೆ.

ಮಾನವರಲ್ಲಿ ಯಾವುದೇ ಜ್ಞಾನ ಸಂಪಾದನೆಯು ಪಂಚೇಂದ್ರಿಯಗಳ ಮೂಲಕ ಆಗುವುದಾದರೂ ಬಹು ಭಾಗ ಕಣ್ಣು ಹಾಗೂ ಕಿವಿಗಳ ಮೂಲಕ ಸಾಧ್ಯ. ಇದರಲ್ಲೂ ಶೇಕಡ 85 ರಷ್ಟು ನೇತ್ರೇಂದ್ರಿಯ (ಕಣ್ಣು) ಮೂಲಕ ಆಗುತ್ತದೆ.

ಸಾಮಾನ್ಯವಾಗಿ ಬಹುಪಾಲು ವಿಸ್ತರಣ ಕಾರ್ಯಕರ್ತರು, ವಿಸ್ತರಣ ಕಾರ್ಯಕ್ರಮಗಳಲ್ಲಿ ನೇತ್ರೇಂದ್ರಿಯ ಸಾಧನಗಳನ್ನು ಉಪಯೋಗಿಸುತ್ತಾರೆ. ಅವುಗಳ ಮಹತ್ವ ಹೆಚ್ಚು.

ನೇತ್ರೇಂದ್ರಿಯಂ ಸಾಧನಗಳನ್ನು ವಿಸ್ತರಣ ಪದ್ಧತಿಗಳಲ್ಲಿ ಅಳವಡಿಸುವುದರಿಂದ ಅನೇಕ ವಿಧದ ಮೂಲಭೂತ ಉಪಯುಕ್ತತೆಗಳನ್ನು ಪಡೆಯಬಹುದು. ಅವು ಈ ಕೆಳಗಿನಂತಿವೆ:

(1) ನೇತ್ರೇಂದ್ರಿಯ (ಚಕ್ಷು) ಸಾಧನಗಳಿಂದ ಶಿಕ್ಷಣಾರ್ಥಿಗಳು ಅಲ್ಪ ಅವಧಿಯಲ್ಲಿ ಹೆಚ್ಚಿಗೆ ಕಲಿಯುತ್ತಾರೆ.

(2) ಶಿಕ್ಷಣಾರ್ಥಿಗಳೆಲ್ಲರೂ ಸಮಮಟ್ಟದಲ್ಲಿ ಕಲಿಯಲು ನೇತ್ರೇಂದ್ರಿಯ ಸಾಧನಗಳಿಂದ ಅನುಕೂಲತೆ ಏರ್ಪಡುತ್ತದೆ.

(3) ಶಿಕ್ಷಣಾರ್ಥಿಗಳು ನೇತ್ರೇಂದ್ರಿಯ ಸಾಧನಗಳಿಂದ ಕಲಿತ ವಿಷಯವನ್ನು ದೀರ್ಘಕಾಲದವರೆಗೂ ಜ್ಞಾಪಕದಲ್ಲಿಟ್ಟುಕೊಂಡಿರುತ್ತಾರೆ.

(4) ಶಿಕ್ಷಣಾರ್ಥಿಗಳು ಚಕ್ಷುಸಾಧನಗಳ ನೆರವಿನಿಂದ ತ್ವರಿತಗತಿಯಿಂದ ಕಲಿಯುತ್ತಾರೆ.

(5) ನೇತ್ರೇಂದ್ರಿಯ ಸಾಧನಗಳನ್ನು ಉಪಯೋಗಿಸುವುದರಿಂದ ಜ್ಞಾನಾರ್ಜನೆ ಸನ್ನಿವೇಶದಲ್ಲಿ ಹೆಚ್ಚಿನ ಗಮನಕೊಟ್ಟು ಕಲಿಯುತ್ತಾರೆ.

(6) ವಿಸ್ತರಣ ಕಾರ್ಯಕರ್ತನು ತನ್ನ ವಿಸ್ತರಣ ಕಾರ್ಯಕ್ರಮವನ್ನು ಚಕ್ಷು ಸಾಧನಗಳ ನೆರವಿನಿಂದ ಕ್ರಮಬದ್ಧವಾಗಿ ವ್ಯವಸ್ಥೆಗೊಳಿಸಬಹುದು.

(7) ನೇತ್ರೇಂದ್ರಿಯ ಸಾಧನಗಳ ಉಪಯೋಗ ವಿಸ್ತರಣ ಶಿಕ್ಷಣ ಸನ್ನಿವೇಶಕ್ಕೆ ವಾಸ್ತವಿಕತೆ ಮತ್ತು ಮೆರುಗನ್ನು ಕೊಡುತ್ತದೆ.

(8) ಭಾಷೆಯ ಅಡ್ಡಿಆತಂಕವನ್ನು ಚಕ್ಷುಸಾಧನಗಳು ಬಹುವಾಗಿ ದೂರುಮಾಡುತ್ತದೆ.

(9) ನೇತ್ರೇಂದ್ರಿಯ ಸಾಧನಗಳು ಅನಕ್ಷರತೆಯ ತೊಂದರೆಯನ್ನು ಬಹು ಮಟ್ಟಿಗೆ ಮೆಟ್ಟನಿಲ್ಲುತ್ತವೆ. ಅನಕ್ಷರಸ್ಥರೂ ವಿಷಯಗಳನ್ನು ಪರಿಣಾಮಕಾರಿಯಾಗಿ ಗ್ರಹಿಸಬಲ್ಲರು.

(10) ಚಕ್ಷುಸಾಧನಗಳ ಉಪಯೋಗವು ಶಿಕ್ಷಕನ ಮತ್ತು ಶಿಕ್ಷಣಾರ್ಥಿಗಳ ವೇಳೆ ಹಾಗೂ ವೆಚ್ಚಗಳಲ್ಲಿ ಗಣನೀಯ ಉಳಿತಾಯ ಒದಗಿಸುತ್ತದೆ.

ಚಕ್ಷುಸಾಧನಗಳ ಗುಣಧರ್ಮಗಳು :

(1) ಚಕ್ಷುಸಾಧನಗಳು ವಿಸ್ತರಣ ಶಿಕ್ಷಣ ಸನ್ನಿವೇಶಕ್ಕೆ ಯೋಗ್ಯವಾಗಿರಬೇಕು.

ವಿಸ್ತರಣ ಶಿಕ್ಷಣ ಕಾರ್ಯಕ್ರಮಕ್ಕೆ ಅನುಗುಣವಾದ ಚಕ್ಷುಸಾಧನಗಳನ್ನೇ ಆರಿಸಬೇಕು. ಅವು ಸಾದರಪಡಿಸುವ ವಿಷಯಕ್ಕೆ ಹೊಂದಿಕೊಂಡಿರಬೇಕು. ಶಿಕ್ಷಣಾರ್ಥಿಗಳ ವಯಸ್ಸು, ಅನುಭವ, ವಿದ್ಯಾರ್ಹತೆ, ಸಂಖ್ಯೆ ಮತ್ತು ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳ ಆಯ್ಕೆಮಾಡಬೇಕು.

(2) ಚಕ್ಷುಸಾಧನಗಳು ವಿರಳವಾಗಿರಬೇಕು.

ಎಲ್ಲ ಚಕ್ಷುಸಾಧನಗಳು ಶಿಕ್ಷಣಾರ್ಥಿಗಳಿಗೆ ಸುಲಭವಾಗಿ ಅರ್ಥವಾಗುವಂತಿರಬೇಕು. ಒಂದು ಸಾಧನ ಒಂದೇ ವಿಷಯವನ್ನು ತಿಳಿಯಾಗಿ ನಿರೂಪಿಸಬೇಕು. ಅತಿ ದೊಡ್ಡ ಹಾಗೂ ಉದ್ದ ನಕ್ಷೆ ಇಲ್ಲವೆ ಪಟ್ಟಿ ಹೆಚ್ಚಾಗಿ ಉಪಯೋಗಿಸಬಾರದು.

(3) ಚಕ್ಷುಸಾಧನಗಳಲ್ಲಿ ತಪ್ಪಿರಬಾರದು.

ನಿರೂಪಣೆಗೆ ಆಯ್ಕೆಮಾಡಿದ ಚಕ್ಷುಸಾಧನಗಳಲ್ಲಿನ ಅಂಕಿಅಂಶ, ಚಿತ್ರ, ಇತ್ಯಾದಿ ಸರಿಯಾಗಿರಬೇಕು.

(4) ಚಕ್ಷುಸಾಧನಗಳು ಆಕರ್ಷಕವಾಗಿರಬೇಕು.

ಆಯ್ಕೆಮಾಡಿದ ಚಕ್ಷುಸಾಧನಗಳು ಶಿಕ್ಷಣಾರ್ಥಿಗಳ ಗಮನವನ್ನು ಸೆಳೆಯುವಂತಿರಬೇಕು. ಒಪ್ಪುವಂಥ ಬಣ್ಣಗಳ ಮತ್ತು ಪದಗಳ ಸಂಯೋಜನೆ ಮತ್ತು ಆಕರ್ಷಕ ಬರವಣಿಗೆಯಿಂದ ಕೂಡಿರಬೇಕು.

(5) ಚಕ್ಷುಸಾಧನಗಳನ್ನು ಅವಶ್ಯಕ ಸಂದರ್ಭಗಳಲ್ಲಿ ಮಾತ್ರ ಉಪಯೋಗಿಸಬೇಕು.

ಪ್ರತಿಯೊಂದು ಚಕ್ಷುಸಾಧನಗಳ ಉಪಯೋಗವು ನಿಶ್ಚಿತ ಉದ್ದೇಶದಿಂದ ಕೂಡಿರಬೇಕು; ಶಿಕ್ಷಣ ಕಾರ್ಯಕ್ರಮದ ಉದ್ದೇಶ ಸಾಧನೆಗೆ ಪೂರಕವಾಗಿರಬೇಕು.

ಚಕ್ಷುಸಾಧನಗಳನ್ನು ಮೂರು ರೀತಿಗಳಲ್ಲಿ ವರ್ಗೀಕರಿಸಬಹುದು:

(1) ಅಪ್ರಕ್ಷೇಪಣ ಚಕ್ಷುಸಾಧನಗಳು

(2) ಪ್ರಕ್ಷೇಪಣ ಚಕ್ಷುಸಾಧನಗಳು

(3) ಇತರ ಚಕ್ಷುಸಾಧನಗಳು

1. ಅಪ್ರಕ್ಷೇಪಣ ಸಾಧನಗಳು :

ಪ್ರಕ್ಷೇಪಕ (ಪ್ರೊಜೆಕ್ಟರ್)ಗಳ ನೆರವಿಲ್ಲದೆ ಉಪಯೋಗಿಸುವ ವಿಧಾನಗಳು ಅಪ್ರಕ್ಷೇಪಣ ಚಕ್ಷುಸಾಧನಗಳು. ವಿಸ್ತರಣ ಕಾರ್ಯಕರ್ತನು ಈ ಸಾಧನಗಳನ್ನು ನೇರವಾಗಿ ಉಪಯೋಗಿಸಬಹುದು. ಇವುಗಳ ಉಪಯೋಗಕ್ಕೆ ಯಾವುದೇ ವಿಧ ವಿಶಿಷ್ಟ ಉಪಕರಣಗಳ ಅವಶ್ಯಕತೆ ಇರುವುದಿಲ್ಲ. ಇವು ಹಲವಾರು. ಇವುಗಳೆಂದರೆ:

(i) ನೈಜ ವಸ್ತು (ಸ್ಪೆಸಿಮೆನ್)

(ii) ಕಪ್ಪುಹಲಗೆ (ಬ್ಲ್ಯಾಕ್‌ಬೋರ್ಡ್)

(iii) ಪ್ರಕಟಣೆ ಹಲಗೆ (ಬುಲಿಟಿನ್ ಬೋರ್ಡ್)

(iv) ಆಕೃತಿ (ಡೈಗ್ರಾಮ್)

(v) ರೇಖಾಪಟ (ಚಾರ್ಟ್)

(vi) ನಕ್ಷೆ (ಮ್ಯಾಪ್)

(vii) ಚಿತ್ರಾಲೇಖನ (ಪಿಕ್ಟೋರಿಯಲ್ ಗ್ರಾಫ್)

(viii) ಮಿಂಚುಪಟ ಸಂಕಲನ (ಫ್ಲ್ಯಾಶ್‌ಕಾರ್ಡ್ಸ್)

(ix) ಉರುಟುಬಟ್ಟೆ ಆಲೇಖನ (ಫ್ಲಾನಲ್ ಗ್ರಾಫ್)

(x) ಮಾದರಿ (ಮಾಡೆಲ್)

(xi) ಛಾಯಾಚಿತ್ರ (ಫೋಟೋಗ್ರಾಫ್)

(xii) ವ್ಯಂಗ್ಯಚಿತ್ರ (ಕಾರ್ಟೂನ್)

2. ಪ್ರಕ್ಷೇಪಣ ಸಾಧನಗಳು :

ಪ್ರಕ್ಷೇಪಣ (ಪ್ರೊಜೆಕ್ಟರ್)ಗಳ ನೆರವಿನಿಂದ ಉಪಯೋಗಿಸುವ ಸಾಧನಗಳೆ **ಪ್ರಕ್ಷೇಪಣ ಚಕ್ಷುಸಾಧನಗಳು**. ವಿಸ್ತರಣ ಕಾರ್ಯಕರ್ತನು ಈ ಸಾಧನಗಳನ್ನು ಪ್ರೊಜೆಕ್ಟರ್‌ಗಳ ನೆರವಿನಿಂದ ಪರದೆಯ ಮೇಲೆ ಮಾಡಿಸಿ ಉಪಯೋಗಿಸುತ್ತಾನೆ. ಇವು ಗಳೆಂದರೆ:

(1) ಪಾರದರ್ಶಕ ಚಿತ್ರ (ಸ್ಲೈಡ್)

(2) ಲಘು ಪಾರದರ್ಶಕ ಚಿತ್ರಪಟ್ಟಿ (ಫಿಲ್ಮ್‌ಸ್ಟ್ರಿಪ್)


3. ಇತರ ಚಕ್ಷು ದೃಷ್ಟಿಗೋಚರ ಅಥವಾ ನೇತ್ರೇಂದ್ರಿಯ ಸಾಧನಗಳು:

(1) ಪ್ರಾತ್ಯಕ್ಷಿಕೆ (ಡೆಮೊನ್‌ಸ್ಟ್ರೇಶನ್)

(2) ವಸ್ತುಪ್ರದರ್ಶನ (ಎಕ್ಸಿಬಿಷನ್)

1. ನೈಜವಸ್ತುಗಳು

ನೈಸರ್ಗಿಕವಾಗಿ ದೊರೆಯುವ, ಇಲ್ಲವೆ ನೈಜರೂಪದಲ್ಲಿನ ಪದಾರ್ಥಗಳು **ನೈಜವಸ್ತು**ಗಳು. ಉದಾಹರಣೆಗೆ, ಸಸ್ಯ, ಮಣ್ಣು, ಗೊಬ್ಬರ, ಕೀಟ, ತೆನೆಕೀಟ ಹಾಗೂ ತೆನೆರೋಗಗಳಿಗೆ ತುತ್ತಾದ ಬೆಳೆಯ ಭಾಗ ಇತ್ಯಾದಿ.



ಚಿತ್ರ 22: ನೈಜವಸ್ತು ಮುಸುಕಿನ ಜೋಳದ ಗಿಡ ಚಿಕ್ಕದಿರುವಾಗಲೇ ಅದರ ಬೇರುಗಳು ನೆಲದಲ್ಲಿ ಆಳವಾಗಿ ಇಳಿದಿರುತ್ತವೆ.

ನೈಜವಸ್ತುಗಳ ಸಹಾಯದಿಂದ ಶಿಕ್ಷಣ ಸನ್ನಿವೇಶವನ್ನು ಶಿಕ್ಷಣಪ್ರಧಾನವಾಗಿ ಮಾಡಬಹುದು. ರೈತರನ್ನು ವೈಯುಕ್ತಿಕವಾಗಿ, ಗುಂಪುಗಳಲ್ಲಿ ಭೆಟ್ಟಿಮಾಡಿದಾಗ ಇವುಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಬಹುದು. ಇದಲ್ಲದೆ, ಸಾಮೂಹಿಕ ಪದ್ಧತಿಗಳಾದ ಚಲನಚಿತ್ರ, ವಸ್ತುಪ್ರದರ್ಶನ ಮತ್ತು ಟೆಲಿವಿಷನ್‌ಗಳಲ್ಲಿ ನೈಜವಸ್ತುಗಳನ್ನು ಉಪಯೋಗಿಸಬಹುದು.

ಪ್ರಯೋಜನ-ಲಾಭಗಳು :

(1) ನೈಜವಸ್ತುಗಳನ್ನುಪಯೋಗಿಸುವುದರಿಂದ ಶಿಕ್ಷಣ ಸನ್ನಿವೇಶದಲ್ಲಿ ವಾಸ್ತವಿಕ ಪರಿಸ್ಥಿತಿ ಉಂಟಾಗುತ್ತದೆ.

(2) ಸಾಮಾನ್ಯವಾಗಿ ನೈಜವಸ್ತುಗಳು ಎಲ್ಲೆಡೆಯಲ್ಲಿಯೂ ಸುಲಭವಾಗಿ ಸಿಕ್ಕುತ್ತವೆ.

(3) ನೈಜವಸ್ತುಗಳಿಗೆ ವೆಚ್ಚ ತೀರ ಕಡಿಮೆ; ಹಲವವುಗಳಿಗೆ ವೆಚ್ಚ ತಗಲುವುದೇ ಇಲ್ಲ.

(4) ನೈಜವಸ್ತುಗಳನ್ನು ಸುಧಾರಿಸಿದ ಪದ್ಧತಿ ಅನುಸರಣೆಯ ಯಾವುದೇ ಹಂತದಲ್ಲಿ ಉಪಯೋಗಿಸಬಹುದು.

ಇತಿ-ಮಿತಿಗಳು :

(1) ಬಹು ಚಿಕ್ಕ ನೈಜವಸ್ತುಗಳನ್ನು ವೀಕ್ಷಿಸಲು ಕಷ್ಟವಾಗುತ್ತದೆ.

(2) ದೊಡ್ಡ ನೈಜವಸ್ತುಗಳು ಸಾಗಾಣಿಕೆಗೆ ತೊಂದರೆಯಾಗುತ್ತವೆ.


2. ಕಪ್ಪು ಹಲಗೆ

ಸುಣ್ಣ (ಚಾಕ್‌ಪೀಸ್) ಕಟ್ಟಿಗೆಯ ಹಲಗೆ ರಟ್ಟು ಮತ್ತು ತಗಡಿಗೆ ಕಪ್ಪು ಬಣ್ಣ ಬಳೆದು ಸೀಮೆಸುಣ್ಣದಿಂದ ಬರೆಯಲು ಉಪಯೋಗಿಸುವ ಸಾಧನಕ್ಕೆ **ಕಪ್ಪು ಹಲಗೆ**

ಯೆಂದು ಹೆಸರು. ಕಪ್ಪುಹಲಗೆಯು ಪೂರ್ವಕಾಲದಿಂದಲೂ ಅತಿ ಹೆಚ್ಚಾಗಿ ಶಿಕ್ಷಕರಿಂದ ಬಳಸಲ್ಪಡುತ್ತಿರುವ ಒಂದು ಸಾಧನ. ವಿಸ್ತರಣ ಶಿಕ್ಷಣ ಕಾರ್ಯಕ್ರಮಗಳಲ್ಲಿ ಕಪ್ಪುಹಲಗೆಗಳ ಬಳಕೆ ಬಹಳ ಮಹತ್ವದ್ದಾಗಿದೆ. ಈ ಸಾಧನವು ವಿಚಾರ ವಿನಿಮಯ ಸಭೆಗಳಲ್ಲಿ ಹೆಚ್ಚಿಗೆ ಉಪಯೋಗವಾಗುತ್ತದೆ. ಗೊತ್ತಾದ ಮಾಹಿತಿಯನ್ನು ಚಿತ್ರ, ಲೇಖಾಚಿತ್ರ, ನಕ್ಷೆಗಳೊಂದಿಗೆ ಕಪ್ಪುಹಲಗೆಯ ಮೂಲಕ ಬರೆಯುವುದರ ಮೂಲಕ ಶಿಕ್ಷಣವನ್ನು ಪರಿಣಾಮಕಾರಿಯಾಗಿ ಮಾಡಬಹುದು.

ವಿಸ್ತರಣ ಕಾರ್ಯಕರ್ತನು ಈ ಸಾಧನವನ್ನು ಉಪಯೋಗಿಸುವಾಗ ಕೆಲವು ಅಂಶಗಳನ್ನು ಗಮನದಲ್ಲಿಡಬೇಕು. ಅವು ಈ ಕೆಳಗಿನಂತಿವೆ:

(1) ಕಪ್ಪುಹಲಗೆಯ ಮೇಲೆ ಬರೆದ ಬರೆಹ ಸರಳವಾಗಿರಬೇಕು: ಸಾಲುಗಳ ಮಧ್ಯೆ ಸೂಕ್ತ ಅಂತರವಿರಬೇಕು. ಅಕ್ಷರಗಳು ದಪ್ಪವಾಗಿರಬೇಕು.



ಚಿತ್ರ 23 : ಕಪ್ಪು ಹಲಗೆ—ಗೃಹವಿಜ್ಞಾನ ಅಧ್ಯಾಪಿಕೆಯೊಬ್ಬರು ಗ್ರಾಮದ ರೈತಮಹಿಳೆಯರ ಶಿಬಿರದಲ್ಲಿ ಸಿಹಿಪುರಿ ತಯಾರಿಸಲು ಬೇಕಾದ ಸಾಮಾನುಗಳ ವಿವರ ಕಪ್ಪು ಹಲಗೆಯಮೇಲೆ ಬರೆದು ವಿವರಿಸುತ್ತಿದ್ದಾರೆ,

(2) ಪದಗಳನ್ನು ಒತ್ತಾಗಿ ಬರೆಯಬಾರದು.

(3) ಮುಖ್ಯಾಂಶಗಳನ್ನು ತಿಳಿಸಲು ಬಣ್ಣದ ಸೀಮೆಸುಣ್ಣ (ಖಡು)ವನ್ನು ಉಪಯೋಗಿಸಬೇಕು.

(4) ವಿವರ ನೀಡಿದ ನಂತರ ಆಯಾಪದಗಳನ್ನು ಅಳಿಸಬೇಕು.

(5) ಚಿತ್ರಗಳನ್ನು ಪೂರ್ವಭಾವಿಯಾಗಿ ಬರೆಯುವುದು ಸೂಕ್ತ.

ಪ್ರಯೋಜನ–ಲಾಭಗಳು :

(1) ಕಪ್ಪುಹಲಗೆ ಅತಿ ಸುಲಭವಾಗಿ, ಸಾಮಾನ್ಯವಾಗಿ ಎಲ್ಲ ಹಳ್ಳಿಗಳಲ್ಲಿ ಒದಗುವ ಸಾಧನ.

(2) ಕಪ್ಪುಹಲಗೆ ಅತಿ ಕಡಿಮೆ ವೆಚ್ಚದ ಸಾಧನ.

(3) ಕಪ್ಪುಹಲಗೆಯನ್ನು ವಿಸ್ತರಣ ಕಾರ್ಯಕ್ರಮಗಳಲ್ಲಿ ಹಲವಾರು ಸಂದರ್ಭಗಳಲ್ಲಿ ಉಪಯೋಗಿಸಬಹುದು.

ಇತಿ–ಮಿತಿ :

(1) ಕಪ್ಪುಹಲಗೆಯ ಮೇಲೆ ಬರೆದ ಮಾಹಿತಿಯನ್ನು ಕೇವಲ ಕೆಲವೇ ಜನರು ಓದಬಹುದು.

(2) ಓದುಬರಹ ತಿಳಿಯದ ಜನರಿಗೆ ಕಪ್ಪುಹಲಗೆಯ ಬರಹ ನಿರುಪಯೋಗಿ.

ಇತ್ತೀಚೆಗೆ ಕಪ್ಪುಹಲಗೆಗಳು ಹಳದಿ ಮತ್ತು ಹಸುರು ಬಣ್ಣಗಳಲ್ಲಿ ಸಿಕ್ಕುತ್ತವೆ. ಆದರೂ ಅವುಗಳಿಗೆ ಬ್ಲಾಕ್‌ಬೋರ್ಡ್‌ಗಳೆಂದೇ ಹೆಸರು. ಅಲ್ಲದೇ ಲೋಹಚುಂಬಕಗಳಿಂದ ಕೂಡಿದ ಕಪ್ಪುಹಲಗೆಗಳು ಸಿಕ್ಕುತ್ತವೆ. ಬಟ್ಟೆಗೆ ಬಣ್ಣಹಾಕಿ ಸುತ್ತುವ ವ್ಯವಸ್ಥೆ ಕೂಡ ಕೆಲವವುಗಳಲ್ಲಿರುತ್ತದೆ. ಇವು 'ರೋಲ್‌ಅಪ್ ಬ್ಲಾಕ್‌ಬೋರ್ಡ್'ಗಳು.

3. ಪ್ರಕಟಣೆ ಹಲಗೆ

ಪ್ರಕಟಣ ಹಲಗೆ ಸರಳವಾದ ಮತ್ತು ಮೃದುವಾದ ಮೇಲ್ಮೈಯಿಂದ ಕೂಡಿದ ಒಂದು ಸಪಾಟ ವಸ್ತು. ಇದರ ಮೇಲೆ ಹೆಚ್ಚಾಗಿ ಲಘು ಪ್ರಕಟಣೆಗಳನ್ನು ಪ್ರದರ್ಶಿಸುವುದರಿಂದ **ಲಘುಪ್ರಕಟಣ** ಇಲ್ಲವೆ **ಪ್ರಕಟಣ ಹಲಗೆ**ಯೆಂದು ಹೆಸರು. ಇದು ಕಟ್ಟಿಗೆ, ತಗಡು, ರಟ್ಟು ಮೊದಲಾದ ವಸ್ತುಗಳಿಂದ ಮಾಡಿದ್ದಾಗಿರಬಹುದು. ಪ್ರಕಟಣ ಹಲಗೆ ಮೇಲೆ ಮಾಹಿತಿಯನ್ನು ವಿಧವಿಧವಾಗಿ ಪ್ರದರ್ಶಿಸಬಹುದು. ಈ ಹಲಗೆಯನ್ನು ವಿಸ್ತರಣ ಕಾರ್ಯಕರ್ತನ ಕಛೇರಿಯಲ್ಲಿ ಅಥವಾ ಹೆಚ್ಚಾಗಿ ಜನರು ಸೇರುವ ಸ್ಥಳಗಳಲ್ಲಿ (ಪಂಚಾಯಿತಿ ಕಾರ್ಯಾಲಯ, ಸಹಕಾರ ಸಂಘ ಇತ್ಯಾದಿ) ಬಯಸಿದಷ್ಟು ಕಾಲದವರೆಗೆ ಇಡಬಹುದು. ಪ್ರಕಟಣೆ ಹಲಗೆಯ ಮೇಲೆ ಛಾಯಾಚಿತ್ರ, ವಾರ್ತಾಪತ್ರಿಕೆ ಮತ್ತು ಇತರ ಸಂಚಿಕೆಗಳಿಂದ ಆಯ್ದ ಮಾಹಿತಿ, ರೇಖಾಚಿತ್ರ, ಭಿತ್ತಿಪತ್ರ

ಕೆಲವು ಸಲ ನೈಜವಸ್ತುಗಳನ್ನು ಪ್ರದರ್ಶಿಸಬಹುದು. ಈ ಸಾಧನಗಳನ್ನು ಹೆಚ್ಚಾಗಿ ಗುಂಪು ಮತ್ತು ಸಾಮೂಹಿಕ ವಿಸ್ತರಣ ಪದ್ಧತಿಗಳಲ್ಲಿ ಬಳಸಲಾಗುತ್ತದೆ.



ಚಿತ್ರ 24 : ಪ್ರಕಟಣೆ ಹಲಗೆ

ಪ್ರಯೋಜನ–ಲಾಭಗಳು :

(1) ಸ್ಥಳೀಯ ರೈತರಿಗೆ ಅನುಕೂಲವಾಗುವಂಥ ಮಾಹಿತಿಯನ್ನು ಸಕಾಲದಲ್ಲಿ ಸೂಕ್ತ ಸ್ಥಳಗಳಲ್ಲಿ, ನಿರ್ದಿಷ್ಟ ಕಾಲದವರೆಗೆ ಪ್ರಕಟಗೊಳಿಸಲು ಪ್ರಕಟಣಾ ಹಲಗೆಗಳು ತುಂಬ ಸಹಕಾರಿಯಾಗಬಲ್ಲವು.

(2) ಸ್ಥಳೀಯ ವಿಸ್ತರಣ ಕಾರ್ಯಕ್ರಮಗಳನ್ನು ಬಿಂಬಿಸುವ ಛಾಯಾಚಿತ್ರ ಇತ್ಯಾದಿಗಳನ್ನು ಪ್ರಕಟಣಾ ಹಲಗೆಗಳ ಮೇಲೆ ಕಾಲಕಾಲಕ್ಕೆ ಪ್ರದರ್ಶಿಸಬಹುದು.

(3) ಪ್ರಾತ್ಯಕ್ಷಿಕೆ, ಕ್ಷೇತ್ರೋತ್ಸವ ಹಾಗೂ ವಸ್ತುಪ್ರದರ್ಶನಗಳ ಕಾಲಗಳಲ್ಲಿ ಪ್ರಕಟಣ ಹಲಗೆಗಳ ಉಪಯೋಗವು ಹೆಚ್ಚಾಗಿ ಆಗುತ್ತದೆ.


ಇತಿ–ಮಿತಿಗಳು :

(1) ಪ್ರಕಟಣ ಹಲಗೆಯ ಉಪಯೋಗ ವ್ಯವಸ್ಥಿತವಾಗಿಯೂ ಪರಿಣಾಮ ಕಾರಿಯಾಗಿಯೂ ಆಗಲು ದೀರ್ಘಯೋಜನೆ ಮತ್ತು ಅದಕ್ಕೆ ಅಂಟಿಸಲು ವೆಚ್ಚದ ಸಾಧನಗಳು ಬೇಕು.

(2) ಪ್ರತಿಕೂಲ ಹವಾಮಾನವಿದ್ದರೆ ಪ್ರಕಟಣ ಹಲಗೆಯನ್ನು ಎಲ್ಲೆಡೆಗಳಲ್ಲಿ ಉಪಯೋಗಿಸುವುದು ಕಷ್ಟಸಾಧ್ಯವಾಗಬಹುದು.

4. ಆಕೃತಿ

ಆಕೃತಿಯು ಯಾವುದಾದರೊಂದು ವಸ್ತುವಿನ ಗೆರೆಗಳಿಂದ ಕೂಡಿದ ಚಿತ್ರ



ಚಿತ್ರ 25 : ಆಕೃತಿ – ಇಂಗಾಲವೃತ್ತ

ವಿಸ್ತರಣ ಕಾರ್ಯಕ್ರಮಗಳಲ್ಲಿ ಆಕೃತಿಗಳ ಉಪಯೋಗ ಕದಿಮೆಯಾದರೂ ಹಲವು ಸಂದರ್ಭಗಳಲ್ಲಿ ಇವು ಅತ್ಯಂತ ಪರಿಣಾಮಕಾರಿಯೆನಿಸಬಹುದು. ಇವುಗಳನ್ನು ವೈಯುಕ್ತಿಕ ಹಾಗೂ ಗುಂಪು ಪದ್ಧತಿಗಳಲ್ಲಿ ಉಪಯೋಗಿಸಬಹುದು.

5. ರೇಖಾಪಟ

ಯಾವುದೊಂದು ವಿಷಯ ನಿರೂಪಣೆಯನ್ನು ಅನುಕ್ರಮವಾಗಿ, ಪರಸ್ಪರ ಸಂಬಂಧವನ್ನು ಕಲ್ಪಿಸುವಂತೆ ರೇಖಾಪಟದಲ್ಲಿ ಚಿತ್ರಿಸಲಾಗಿರುತ್ತದೆ. ರೇಖಾಪಟಗಳ ಮೂಲಕ ಯಾವುದೊಂದು ಮಾಹಿತಿಯನ್ನು ಸರಳವಾಗಿ ಮತ್ತು ಸಂಕ್ಷಿಪ್ತರೂಪದಲ್ಲಿ ಕೊಡಬಹುದು. ಅನೇಕ ರೀತಿಯ ರೇಖಾಪಟಗಳು ಬಳಕೆಯಲ್ಲಿರುತ್ತವೆ. ಅವುಗಳಲ್ಲಿ ಮುಖ್ಯವಾದವು ಕೆಳಗಿನಂತಿವೆ :

(1) ಕೋಷ್ಟಕ ರೇಖಾಪಟ (ಟೇಬಲ್ ಚಾರ್ಟ್)

(2) ಪ್ರವಹಿಸುವ ರೇಖಾಪಟ (ಫ್ಲೊಚಾರ್ಟ್)

(3) ವೃಕ್ಷ ರೇಖಾಪಟ (ಟ್ರಿಚಾರ್ಟ್)


(4) ಎಳೆ ರೇಖಾಪಟ (ಸ್ಟ್ರಿಪ್ ಚಾರ್ಟ್)

(5) ವೇಳೆ ರೇಖಾಪಟ (ಟೈಮ್ ಚಾರ್ಟ್)


(6) ಫ್ಲಿಪ್ ರೇಖಾಪಟ (ಫ್ಲಿಪ್ ಚಾರ್ಟ್)

ವಿಸ್ತರಣ ಶಿಕ್ಷಣದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಅತಿ ಹೆಚ್ಚಾಗಿ ಬಳಕೆಯಲ್ಲಿರುವ ರೇಖಾಪಟಗಳೆಂದರೆ ಕೋಷ್ಟಕ ಮತ್ತು ಫ್ಲಿಪ್ ರೇಖಾಪಟಗಳು. ಇನ್ನುಳಿದ ವಿಧಗಳನ್ನು ಸಾಂಪ್ರದಾಯಿಕ ಶಿಕ್ಷಣದಲ್ಲಿ, ವಿಸ್ತರಣ ಕಛೇರಿ ವಾರ್ತಾಕೇಂದ್ರಗಳಲ್ಲಿ ಹಾಗೂ ಮತ್ತಿತರ ಕಡೆಗಳಲ್ಲಿ ಉಪಯೋಗಿಸಲಾಗುವುದು.


ಕೋಷ್ಟಕ ರೇಖಾಪಟದಲ್ಲಿ ವಿಷಯ ವಿವರಣೆಯು ಕೆಲವು ಸ್ಥಂಬ (ಕಾಲಂ)ಗಳಲ್ಲಿ ಕೊಡಲ್ಪಟ್ಟಿರುತ್ತದೆ. ಉತ್ತಮ ಕೋಷ್ಟಕ ರೇಖಾಪಟವು ಯೋಗ್ಯ ತಲೆಬರಹವನ್ನೊಳಗೊಂಡಿರುತ್ತದೆ. ಪ್ರಥಮ ಸ್ಥಂಭವು ಅನುಕ್ರಮ ಸಂಖ್ಯೆಗಳನ್ನೊಳಗೊಂಡಿರುತ್ತದೆ. ಎರಡನೆಯದು ವಿಷಯ ವಿವರಗಳನ್ನೊಳಗೊಂಡಿರುತ್ತದೆ. ವಿವಿಧ ಪದ್ಧತಿಗಳಲ್ಲಿನ ಹೋಲಿಕೆ ಹಾಗೂ ವ್ಯತ್ಯಾಸಗಳ ವಿವರಣೆಗೂ ಈ ರೇಖಾಪಟವನ್ನು ಉಪಯೋಗಿಸಬಹುದು. ರೇಖಾಪಟಗಳ ಉಪಯೋಗ ವಿಚಾರವಿನಿಮಯಸಭೆ ಮತ್ತು ವಸ್ತು ಪ್ರದರ್ಶನಗಳಲ್ಲಿ ಹೆಚ್ಚು.




ಚಿತ್ರ 26 (a) : ಕೋಷ್ಟಕ ರೇಖಾಪಟ



ಚಿತ್ರ 26 (b) : ಪ್ರವಹಿಸುವ ರೇಖಾಪಟ




ಚಿತ್ರ 26 (c) : ವೃಕ್ಷ ರೇಖಾಪಟ



ಚಿತ್ರ 26 (d) : ಪಟ್ಟಿ ರೇಖಾಪಟ

ಫ್ಲಿಪ್ ರೇಖಾಪಟವನ್ನು ಮಹತ್ವದ ಮಾಹಿತಿಯನ್ನು ಅನುಕ್ರಮವಾಗಿ ಶಿಕ್ಷಣಾರ್ಥಿಗಳಿಗೆ ತಿಳಿಯಪಡಿಸಲು ಉಪಯೋಗಿಸಿಕೊಳ್ಳಲಾಗುತ್ತದೆ. ಈ ಸಾಧನದಲ್ಲಿ ಐದರಿಂದ ಎಂಟರವರೆಗೆ ಸಾಮಾನ್ಯವಾಗಿ 20" × 15" ಅಳತೆಯ ದಪ್ಪ ಹಾಳೆಗಳಿರುತ್ತವೆ. ಪ್ರತಿಯೊಂದು ಹಾಳೆಯಲ್ಲಿಯೂ ಮಹತ್ವದ ಮಾಹಿತಿಯನ್ನು ಸಂಕ್ಷಿಪ್ತವಾಗಿ ಬರೆಯಲಾಗಿರುತ್ತದೆ. ಈ ಮಾಹಿತಿಯು ಆಕೃತಿ, ರೇಖಾಪಟ ಅಥವಾ




ಚಿತ್ರ 26 (e) : ಫ್ಲಿಪ್‌ರೇಖಾಪಟ — ಕೃಷಿ ವಿಶ್ವವಿದ್ಯಾನಿಲಯ ಸಹಾಯಕ ಪ್ರಾಧ್ಯಾಪಕರೊಬ್ಬರು ಮುಸುಕಿನ ಜೋಳದ ಸಾಗುವಳಿ ಬಗೆಗಿನ ಫ್ಲಿಪ್ ಚಾರ್ಟ್ ಒಂದನ್ನು ಉಪಯೋಗಿಸುತ್ತಿದ್ದಾರೆ.

ಚಿತ್ರಗಳಿಂದ ಒಳಗೊಂಡಿರಬಹುದು. ಎಲ್ಲ ಹಾಳೆಗಳನ್ನು ಕ್ರಮವಾಗಿ ಜೋಡಿಸಿಡಲಾಗಿರುತ್ತದೆ. ವಿಸ್ತರಣ ಕಾರ್ಯಕರ್ತನು ಒಂದಾದ ಮೇಲೊಂದರಂತೆ ಹಾಳೆಗಳನ್ನು ತಿರುವಿ ಹಾಕಿ ಮಾಹಿತಿಯನ್ನು ಶಿಕ್ಷಣಾರ್ಥಿಗಳಿಗೆ ಕೊಡುತ್ತಾನೆ. ಈ ಸಾಧನದ ಉಪಯೋಗ ಮುಖ್ಯವಾಗಿ ವಿಚಾರವಿನಿಮಯ ಸಭೆಗಳಲ್ಲಿ ಹೆಚ್ಚು. ಹಂತ ಹಂತವಾಗಿ ಮಾಹಿತಿಯನ್ನೊದಗಿಸಲು ಈ ಸಾಧನವು ಹೆಚ್ಚು ಪ್ರಯೋಜನಕಾರಿ. ಇದು ಸಾಗಾಣಿಕೆಗೆ ಅನುಕೂಲ.

6. ನಕ್ಷೆ (ಮ್ಯಾಪ್)

ನಕ್ಷೆಗಳ ಮೂಲಕ ನಿಗದಿಯಾದ ಪ್ರದೇಶದ ಮಾಹಿತಿ, ಕೃಷಿ ಹಾಗೂ ವಿವಿಧ

ಬೆಳೆಗಳ ಅಭಿವೃದ್ಧಿ ಮತ್ತು ಸುಧಾರಿಸಿದ ಪದ್ಧತಿಗಳ ಆಚರಣೆ ಇತ್ಯಾದಿಗಳ ಬಗ್ಗೆ ಮಾಹಿತಿಯನ್ನು ಕೊಡಬಹುದು.



ಚಿತ್ರ 27: ನಕ್ಷೆ — ಕೃಷಿ ವಿಶ್ವವಿದ್ಯಾಲಯದ ನಿರ್ದೇಶಕರೊಬ್ಬರು ಸಭಿಕರಿಗೆ ನಕ್ಷೆಯ ಮುಖಾಂತರ ಕೃಷಿ ಅಭಿವೃದ್ಧಿ ವಿವರಿಸುತ್ತಿದ್ದಾರೆ.

7. ಚಿತ್ರಾಲೇಖನ (ಪಿಕ್ಟೋರಿಯಲ್ ಗ್ರಾಫ್)

ಚಿತ್ರಾಲೇಖನಗಳು ಮುಖ್ಯವಾಗಿ ವ್ಯತ್ಯಾಸಗಳನ್ನು, ಪರಸ್ಪರ ಸಂಬಂಧವನ್ನು ಚಿತ್ರಗಳ ಮೂಲಕ ತೋರಿಸಲು ಉಪಯೋಗ ಬೀಳುತ್ತವೆ. ಈ ಸಾಧನವು ಯಾವುದೊಂದು ಮಾಹಿತಿಯ ಸಾರಾಂಶವನ್ನು ಕ್ಷಿಪ್ರವಾಗಿ ಮತ್ತು ಪರಿಣಾಮಕಾರಿಯಾಗಿ ಬಿಂಬಿಸುತ್ತದೆ. ಚಿತ್ರಾಲೇಖನಗಳ ಮೂಲಕ ಸ್ವಾಭಾವಿಕ ಸ್ಥಿತಿಯಿಂದ ವ್ಯತ್ಯಾಸವಿರುವ ಸಂಬಂಧಗಳನ್ನು ತೋರಿಸಲಾಗುತ್ತದೆ. ಚಿತ್ರಾಲೇಖನಗಳು ಕೆಲವು ಬಗೆಯವಾಗಿವೆ. ಅವುಗಳೆಂದರೆ:

(ಅ) ರೇಖಾ ಚಿತ್ರಾಲೇಖನ


(ಆ) ಕಂಭ ಚಿತ್ರಾಲೇಖನ

(ಇ) ವೃತ್ತ ಚಿತ್ರಾಲೇಖನ

(ಈ) ಸಚಿತ್ರ ಚಿತ್ರಾಲೇಖನ

(ಅ) **ರೇಖಾ ಚಿತ್ರಲೇಖನ:** ಇದು ಎಲ್ಲ ವಿಧವಾದ ಚಿತ್ರಾಲೇಖನಗಳಲ್ಲಿ ಅತ್ಯಂತ ಸರಳವೂ ಹಾಗೂ ಖಚಿತವಾದುದೂ ಆಗಿದೆ. ಒಂದು ಪ್ರದೇಶದಲ್ಲಿ ನಿರ್ದಿಷ್ಟ


ಕಾಲಾವಧಿಯಲ್ಲಿ, ರಾಸಾಯನಿಕ ವಸ್ತುಗಳ ಉಪಯೋಗ ಇತ್ಯಾದಿಗಳ ಪ್ರವೃತ್ತಿಯನ್ನು



ಚಿತ್ರ 28 (a) : ರೇಖಾ ಚಿತ್ರಾಲೇಖನ

ತೋರಿಸಲು ಇದನ್ನು ಉಪಯೋಗಿಸಬಹುದು.


(ಆ) **ಕಂಭ ಚಿತ್ರಲೇಖನ:** ಇದೂ ಕೂಡ ಸರಳವು ಮತ್ತು ಸುಲಭವಾಗಿ



ಚಿತ್ರ 28 (b) : ಕಂಭ ಚಿತ್ರಾಲೇಖನ


ಗ್ರಹಿಸುವಂಥದೂ ಆದ ಚಿತ್ರಾಲೇಖನವು. ಕಂಭದ-ಎತ್ತರ ವಿಷಯ ನಿರೂಪಣೆ ಯಲ್ಲಿರುವ ವ್ಯತ್ಯಾಸ ಸೂಚಿಸುತ್ತದೆ. ಮೂಲ ಸಂಗತಿಗಳು ಅತಿ ಹೆಚ್ಚಾಗಿ ಇದ್ದ ಸಂದರ್ಭಗಳಲ್ಲಿ ಇದರ ಉಪಯೋಗ ಕಡಿಮೆ.

(ಇ) **ವೃತ್ತ ಚಿತ್ರಾಲೇಖನ:** ವೃತ್ತದಲ್ಲಿ ಭಾಗಮಾಡಿ ತುಲನಾತ್ಮಕವಾಗಿ ಹಲವು ಸಂಗತಿಗಳ ವಿವರಣೆ ಕೊಡುವುದೇ ವೃತ್ತ ಚಿತ್ರಾಲೇಖನದ ಕಾರ್ಯ. ಪ್ರತಿ ಯೊಂದು ವಿಂಗಡಿತ ಪ್ರದೇಶವು ಶೇಕಡಾವಾರು ಮಾಹಿತಿಯನ್ನು ಒದಗಿಸುತ್ತದೆ.




ಚಿತ್ರ 28 (c) : ವೃತ್ತ ಚಿತ್ರಾಲೇಖನ

(ಈ) **ಸಚಿತ್ರ ಚಿತ್ರಾಲೇಖನ:** ಹಲವಾರು ಸಂಬಂಧಿಸಿದ ಸಂಕ್ಷಿಪ್ತ ಚಿತ್ರಗಳ



ಚಿತ್ರ 28 (d) : ಸಚಿತ್ರ ಚಿತ್ರಾಲೇಖನ



ಚಿತ್ರ 28 (e) : ಸಚಿತ್ರ ಚಿತ್ರಾಲೇಖನ—ರೈತನೊಬ್ಬನು ಕೀಟಗಳ ಹಾವಳಿಯಿಂದ ಇಳವರಿ ಇಳಿಯುವ ಸಚಿತ್ರ ರೇಖಾಲೇಖನವೊಂದನ್ನು ನಿರೀಕ್ಷಿಸುತ್ತಿದ್ದಾನೆ.

ಮೂಲಕ ಸೂಚಿಸುವುದೇ ಸಚಿತ್ರ ಚಿತ್ರಾಲೇಖನ. ಪ್ರತಿ ಸಂಕ್ಷಿಪ್ತ ಚಿತ್ರಗಳ ಒಂದು ನಿರ್ದಿಷ್ಟ ಸಂಖ್ಯಾಪರಿಮಿತಿಯನ್ನು ಸೂಚಿಸುತ್ತದೆ.

ಚಿತ್ರಾಲೇಖನಗಳನ್ನು ವಿಸ್ತರಣ ಶಿಕ್ಷಣ ಸನ್ನಿವೇಶದಲ್ಲಿ ಉಪಯೋಗಿಸುವಾಗ ಕೆಲವು ಅಂಶಗಳನ್ನು ಗಮನದಲ್ಲಿಡಬೇಕು. ಅವು ಈ ಕೆಳಗಿನಂತಿವೆ:

(1) ಚಿತ್ರಾಲೇಖನಗಳಲ್ಲಿ ಸರಳವಾಗಿ ಸುಲಭವಾಗಿ ಅರ್ಥವಾಗುವಂತಿರಬೇಕು.

(2) ಚಿತ್ರಾಲೇಖನಗಳಲ್ಲಿ ಹೋಲಿಕೆ ವ್ಯತ್ಯಾಸಗಳು ಎದ್ದು ಕಾಣುವಂತಿರಬೇಕು.

(3) ಚಿತ್ರಾಲೇಖನಗಳಲ್ಲಿ ಮಾಹಿತಿಯು ಪೂರ್ಣ ಸಂಖ್ಯೆಯಲ್ಲಿರಬೇಕು.

(4) ಚಿತ್ರಾಲೇಖನಗಳಲ್ಲಿ ಮಹತ್ವದ ಸಂಗತಿಗಳನ್ನು ಬಣ್ಣಗಳ ಸಂಯೋಜನೆ ಯಿಂದ ಸೂಚಿಸಬೇಕು.

ಚಿತ್ರಾಲೇಖನ ಉಪಯೋಗವು ಗುಂಪು ಸನ್ನಿವೇಶಗಳಲ್ಲಿ, ಸಾಮೂಹಿಕ ಪದ್ಧತಿ ಗಳಾದ ಪ್ರದರ್ಶನ ಮತ್ತು ಟೆಲಿವಿಷನ್‌ಗಳಲ್ಲಿ ಹೆಚ್ಚು ಪ್ರಯೋಜನಕಾರಿಯಾಗುತ್ತದೆ.

8. ಮಿಂಚುಪಟ ಸಂಕಲನ (ಫ್ಲಾಶ್ ಕಾರ್ಡ್ಸ್)

ಮಿಂಚುಪಟ ಸಂಕಲನವು ಅನುಕ್ರಮವಾಗಿ ಪರಸ್ಪರ ಸಂಬಂಧವುಳ್ಳ ವಿವರಣೆ ಗಳಿಂದೊಡಗೂಡಿದ ಚಿತ್ರ ಅಥವಾ ಛಾಯಾಚಿತ್ರಗಳ ಜೋಡಣೆಯ ಒಂದು ದೃಗ್ಗೋಚರ-ಸಾಧನ. ಒಂದು ಸಂಕಲನದಲ್ಲಿ ಚಿತ್ರಪಟಗಳ ಸಂಖ್ಯೆ ಹತ್ತರಿಂದ ಹದಿನೈದು ಇರಬಹುದು. ಪ್ರತಿ ಪುಟದ ಉದ್ದ ಅಗಲ 10″ × 10″ ಅಥವಾ 12″ × 12″. ಎಲ್ಲ ಪಟಗಳ ಅಳತೆ ಒಂದೇ ಇರಬೇಕು. ಮಿಂಚುಪಟ ಸಂಕಲನಗಳನ್ನು ಸುಮಾರು 25–30 ಶಿಕ್ಷಣಾರ್ಥಿಗಳಿರುವ ಗುಂಪಿನಲ್ಲಿ ಉಪಯೋಗಿಸುವುದು ಸುಲಭ ಹಾಗೂ ಪರಿಣಾಮ ಕಾರಿ. ಮಿಂಚುಪಟ ಸಂಕಲನದಲ್ಲಿನ ಚಿತ್ರಗಳು ಸರಳವಾಗಿ ಮತ್ತು ಸೂಕ್ತ ಬಣ್ಣದಿಂದ ಕೂಡಿರಬೇಕು; ಅವುಗಳಲ್ಲಿನ ಮಾಹಿತಿಯು ಸ್ಥಳೀಯ ಸನ್ನಿವೇಶಕ್ಕೆ ಸಂಬಂಧಪಟ್ಟ ದ್ದಾಗಿರಬೇಕು.

ಮಿಂಚುಪಟ ಸಂಕಲನ ಸಿದ್ಧಪಡಿಸುವಿಕೆ ಹಾಗೂ ಉಪಯೋಗಿಸುವಿಕೆ ಗಳಲ್ಲಿ ಗಮನದಲ್ಲಿಡಬೇಕಾದ ಅಂಶಗಳು :

(1) ಮಿಂಚುಪಟ ಸಂಕಲನದಲ್ಲಿನ ಮಾಹಿತಿಯು ವಿಸ್ತರಣ ಕಾರ್ಯಕರ್ತನಿಗೆ ಚಿರಪರಿಚಿತವಾಗಿರಬೇಕು.

(2) ಮಿಂಚುಪಟ ಸಂಕಲನದಲ್ಲಿನ ಪ್ರತಿಪುಟದಲ್ಲಿನ ವಿವರಗಳು ಸರಳ ಹಾಗೂ ಸುಲಭ ಮತ್ತು ಸ್ಥಳೀಯ ಶಬ್ದಗಳನ್ನೇ ಒಳಗೊಂಡಿರಬೇಕು.


(3) ಮಿಂಚುಪಟ ಸಂಕಲನದಲ್ಲಿನ ಪ್ರತಿಪಟದಲ್ಲಿನ ವಿಷಯ ಸ್ಥಳೀಯ ಘಟನೆ ಗಳನ್ನು ಆಧಾರಿಸಿ ಸಿದ್ಧಪಡಿಸಬೇಕು.

(4) ಸಂಕಲನದಲ್ಲಿ ಪಟಗಳನ್ನು ಅನುಕ್ರಮವಾಗಿ ಜೋಡಿಸಿರಬೇಕು.

(5) ಎಲ್ಲ ಶಿಕ್ಷಣಾರ್ಥಿಗಳಿಗೂ ಸರಿಯಾಗಿ ಕಾಣುವಂತೆ ಪಟಗಳನ್ನು ಹಿಡಿಯಬೇಕು.

(6) ಪಟಗಳಲ್ಲಿರುವ ಮುಖ್ಯಾಂಶವನ್ನು ಹಾಗೂ ಚಿತ್ರಗಳಲ್ಲಿನ ಗಮನಿಸತಕ್ಕ ಅಂಶಗಳನ್ನು ವಿಸ್ತರಣ ಕಾರ್ಯಕರ್ತನು ಶಿಕ್ಷಣಾರ್ಥಿಗಳಿಗೆ ಲಕ್ಷ್ಯಕ್ಕೆ ತರುವುದನ್ನು ಮರೆಯಬಾರದು.

(7) ಎಲ್ಲ ಪಟಗಳನ್ನು ಪ್ರದರ್ಶಿಸಿದ ನಂತರ ಚರ್ಚೆಗೆ ಅವಕಾಶ ಮಾಡಿಕೊಡಬೇಕು.



ಚಿತ್ರ 29 : ಮಿಂಚುಪಟ–ಕೃಷಿ ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರೊಬ್ಬರು ಫ್ಲ್ಯಾಶ್‌ಕಾರ್ಡ್ಸ್ ಉಪಯೋಗಿಸಿ ಬೆಳೆಗಳ ಆಹಾರಾಂಶಗಳನ್ನು ವಿವರಿಸುತ್ತಿದ್ದಾರೆ.

ಪ್ರಯೋಜನ–ಲಾಭಗಳು :

(1) ಅನೇಕ ತೆರನಾದ ಮಾಹಿತಿಯನ್ನೊದಗಿಸಲು ಮಿಂಚುಪಟ ಸಂಕಲನ ಉಪಯೋಗಿಸಬಹುದು.

(2) ವಿಸ್ತರಣಾ ಕಾರ್ಯಕರ್ತನು ಅತಿ ಕಡಿಮೆ ಚಾತುರ್ಯಗಳಿಂದ ಸ್ಥಳೀಯವಾಗಿ ಮಿಂಚುಪಟ ಸಂಕಲನಗಳನ್ನು ತಯಾರಿಸಬಹುದು.

(3) ಈ ಮಿಂಚುಪಟ ಸಂಕಲನ ತಯಾರಿಸುವ ವೆಚ್ಚ ಹೆಚ್ಚೇನಲ್ಲ.

(4) ಸುಲಭವಾಗಿ ಮಿಂಚುಪಟ ಸಂಕಲನಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕೊಂಡೊಯ್ಯಬಹುದು.

ಇತಿ-ಮಿತಿ :

(1) ಇದರ ಉಪಯೋಗ ಚಿಕ್ಕ ಗುಂಪಿನಲ್ಲಿ ಮಾತ್ರ ಸಾಧ್ಯ.

9. ಉರುಟು ಬಟ್ಟೆ ಆಲೇಖನ ಬಟ್ಟೆತಗಲುಪಟ (ಪ್ಲಾನಲ್ ಗ್ರಾಫ್)

ಉರುಳು ಬಟ್ಟೆ ಆಲೇಖನ (ಬಟ್ಟೆತಗಲುಪಟ) ಸಾಧನದಲ್ಲಿ ಎರಡು ಮುಖ್ಯ ಭಾಗಗಳಿವೆ: (1) ಉರುಟು ಬಟ್ಟೆ ಹೊಂದಿಸಿರುವ ಒಂದು ಹಲಗೆ. (2) ಬಟ್ಟೆಯ ಮೇಲೆ ಅಂಟಿಸಲು ಹಿಂಬದಿಯಲ್ಲಿ ಉಸುಕು (ಮರಳು) ಕಾಗದ ಹಚ್ಚಿದ ದಪ್ಪ ಕಾಗದದ ಪಟ್ಟಿಗಳು.

ಈ ಶಿಕ್ಷಣ ಸಾಧನದಲ್ಲಿ ಉಪ್ಪುಕಾಗದಬರಹ ಇಲ್ಲವೆ ಚಿತ್ರ, ಉರುಟುಬಟ್ಟೆಪರದೆಗೆ ಅಂಟಿಸುವುದು. ಇದು ಪ್ರಾರಂಭದಲ್ಲಿ ಬಳಕೆಯಲ್ಲಿ ಬಂದಾಗ ಕೇವಲ ಪ್ಲಾನಲ್ ಬಟ್ಟೆಯನ್ನೇ ಉರುಟುಬಟ್ಟೆಯಂತೆ ಉಪಯೋಗಿಸುತ್ತಿದ್ದುದರಿಂದ ಇದಕ್ಕೆ 'ಪ್ಲಾನಲ್‌ಗ್ರಾಫ್' ಎಂದು ಹೆಸರು ಬಂದಿದೆ. ಇತ್ತೀಚೆಗೆ, ಉರುಟು ಖಾದಿಯ ಬಟ್ಟೆ ಪ್ಲಾನಲ್ ಬೋರ್ಡ್‌ಗಳು ಉಪಯೋಗದಲ್ಲಿವೆ.

ಈ ಸಾಧನವು ವಿಚಾರವಿನಿಮಯ ಸಭೆ ಹಾಗೂ ಪದ್ಧತಿ ಪ್ರಾತ್ಯಕ್ಷಿಕೆಗಳ ವಿವಿಧ ಹಂತಗಳಲ್ಲಿ ಮಾಹಿತಿಯನ್ನು ವಿವರಿಸುವಲ್ಲಿ ಹೆಚ್ಚಿಗೆ ಉಪಯೋಗವಾಗುತ್ತದೆ. ಉರುಟುಬಟ್ಟೆ ಆಲೇಖನ (ಪ್ಲಾನಲ್ ಗ್ರಾಫ್) ಉಪಯೋಗಿಸುವಾಗ ಗಮನದಲ್ಲಿಡಬೇಕಾದ ಅಂಶಗಳು:

(1) ಗುಂಪಿನಲ್ಲಿರುವ ಎಲ್ಲ ಶಿಕ್ಷಣಾರ್ಥಿಗಳಿಗೂ ಕಾಣುವಂತೆ ಪ್ಲಾನಲ್ ಗ್ರಾಫನ್ನು ಸೂಕ್ತ ಎತ್ತರದಲ್ಲಿ ಇಳಿಜಾರಿನಲ್ಲಿಡಬೇಕು.


(2) ಅಂಟಿಸಲು ಉಪಯೋಗಿಸುವ ಎಲ್ಲ ಬರಹ ಇಲ್ಲವೆ ಚಿತ್ರಗಳಿಗೆ (ಪಟ್ಟಿ) ಕ್ರಮಸಂಖ್ಯೆಯನ್ನು ಕೊಟ್ಟು ಜೋಡಿಸಿಕೊಳ್ಳಬೇಕು.

(3) ಪ್ರತಿಯೊಂದು ಪಟ್ಟಿಯ ಬಗ್ಗೆ ಕೊಡಬೇಕಾದ ವಿವರಣೆಯನ್ನು ಮುಂಗಡವಾಗಿ ತಯಾರಿಮಾಡಿಕೊಂಡಿರಬೇಕು.

(4) ಪಟದ ಮುಂದೆ ನಿಂತು ಶಿಕ್ಷಣಾರ್ಥಿಗಳಿಗೆ ಕಾಣದಂತೆ ಮರೆಮಾಡಬಾರದು.

(5) ಪ್ರತಿಯೊಂದು ಪಟ್ಟಿಯನ್ನು ನೋಡಿ, ಅರ್ಥಮಾಡಿಕೊಳ್ಳಲು ಶಿಕ್ಷಣಾರ್ಥಿಗಳಿಗೆ ಸಾಕಷ್ಟು ಸಮಯಕೊಡಬೇಕು.

(6) ಶಿಕ್ಷಣ ಸನ್ನಿವೇಶದಲ್ಲಿ ಉಪಯೋಗಿಸುವುದಕ್ಕಿಂತ ಮೊದಲು ವಿಸ್ತರಣ ಕಾರ್ಯಕರ್ತನು ಪೂರ್ವಪ್ರಯೋಗ ಕೈಗೊಂಡು ಪಟ್ಟಿಗಳ ಅಂಟಿಸುವಿಕೆಯಲ್ಲಿ ಪರಿಣತಿ ಹೊಂದಿರಬೇಕು.



ಚಿತ್ರ 30 : ಉರುಟುಬಟ್ಟೆ ಆಲೇಖಿನ — ಕೃಷಿ ವಿಶ್ವವಿದ್ಯಾನಿಲಯದ ಅಧ್ಯಾಪಕರೊಬ್ಬರು ಫ್ಲಾನಲ್‌ಗ್ರಾಫ್ ಮುಖಾಂತರ ಸುಧಾರಿಸಿದ ಒಲೆಯ ಬಗ್ಗೆ ವಿವರಣೆ ನೀಡುತ್ತಿದ್ದಾರೆ.

(7) ಪಟ್ಟಿಯಲ್ಲಿರುವ ಮುಖ್ಯಾಂಶಗಳನ್ನು ಬೇರೆ ಬೇರೆ ಬಣ್ಣಗಳಿಂದ ಬರೆದಿರಬೇಕು. ಇದರಿಂದ ಗಮನಿಸಬೇಕಾದ ವಿಷಯಗಳತ್ತ ಶಿಕ್ಷಣಾರ್ಥಿಗಳ ಲಕ್ಷ ಸೆಳೆಯಲು ಅನುಕೂಲತೆ ಏರ್ಪಡುವುದು.

(8) ವಿಷಯ ನಿರೂಪಣೆ ಸರಳವಾಗಿರಬೇಕು.

(9) ನಿರೂಪಣೆಯಲ್ಲಿ ಸ್ಥಳೀಯ ಉದಾಹರಣೆ ಮತ್ತು ನಿದರ್ಶನಗಳನ್ನು ಉಪಯೋಗಿಸಿಕೊಳ್ಳಬೇಕು.

(10) ಫ್ಲಾನಲ್ ಪಟ್ಟಿಯಲ್ಲಿ ದಪ್ಪಕ್ಷರಗಳ ಪದ್ಧತಿಗಳಲ್ಲದೆ, ಛಾಯಾಚಿತ್ರಗಳ ಉಪಯೋಗವನ್ನು ಮಾಡಿಕೊಳ್ಳಬೇಕು.

ಪ್ರಯೋಜನ-ಲಾಭಗಳು :

(1) ಒಂದು ಸಾರಿ ತಯಾರಿಸಿದ ಫ್ಲಾನಲ್ ಪಟ್ಟಿಗಳನ್ನು ಪದೇ ಪದೇ ಸಾಮಾನ್ಯ ಶಿಕ್ಷಣ ಸನ್ನಿವೇಶದಲ್ಲಿ ಉಪಯೋಗಿಸಬಹುದು.

(2) ಫ್ಲಾನಲ್ ಪಟ್ಟಿಗಳನ್ನು ಒಂದಾದ ಮೇಲೊಂದರಂತೆ ಉಪಯೋಗಿಸುವುದರಿಂದ ಶಿಕ್ಷಣಾರ್ಥಿಗಳಲ್ಲಿ ಆಸಕ್ತಿ ಕೆರಳಿ ವಿಷಯ ತಿಳಿದುಕೊಳ್ಳುವ ಲವಲವಿಕೆ ಹುಟ್ಟುತ್ತದೆ,

(3) ಫ್ಲಾನಲ್ ಪರದೆಗಳನ್ನು ತಯಾರಿಸಿ ಉಪಯೋಗಿಸಲು ಹೆಚ್ಚಿನ ಚತುರತೆ. ಶ್ರಮ ಹಾಗೂ ವೆಚ್ಚ ಬೇಕಾಗಿಲ್ಲ.

(4) ಹೊಸ ಪದ್ಧತಿ ಅನುಸರಣೆ (ಅಂಗೀಕಾರ)ಯ ವಿವಿಧ ಹಂತಗಳಲ್ಲಿ ಈ ಸಾಧನ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ.

ಇತಿ-ಮಿತಿಗಳು :

(1) ಪ್ರತಿಕೂಲ ವಾತಾವರಣವಿದ್ದಲ್ಲಿ ಹೊರಗಡೆ ಫ್ಲಾನಲ್ ಗ್ರಾಫ್ ಉಪಯೋಗಿಸುವುದು ಕಷ್ಟದ್ದಾಗುವುದು.

(2) ಕೇವಲ ಕೆಲವೇ ಜನರಿಗೆ ನೋಡಲು ಇದು ಸೀಮಿತ.

(3) ಫ್ಲಾನಲ್ ಗ್ರಾಫನ್ನು ಉಪಯೋಗಿಸುವುದಕ್ಕೆ ವಿಸ್ತರಣ ಕಾರ್ಯಕರ್ತನಿಗೆ ಹೆಚ್ಚಿನ ಚಾಕಚಕ್ಯತೆ ಬೇಕು.

10. ಮಾದರಿಗಳು (ಮಾಡಲ್ಸ್)

ಗುರುತಿಸಬಲ್ಲ, ತ್ರಿಮುಖವುಳ್ಳ (ಉದ್ದ, ಅಗಲ ಮತ್ತು ಎತ್ತರ) ನೈಜವಸ್ತುವಿನ ಪ್ರತಿರೂಪ, ಮಾದರಿಗಳು ನೈಜವಸ್ತುವಿಗಿಂತ ಚಿಕ್ಕದಾಗಿರಬಹುದು, ದೊಡ್ಡ

ದಾಗಿರಬಹುದು ಅಥವಾ ಅದೇ ಉದ್ದಳತೆಯದಾಗಿರಬಹುದು. ಮಾದರಿಗಳು ಘನ ಮಾದರಿಗಳು, ಅಂತರಿಕ ಮಾದರಿಗಳು ಹಾಗೂ ರಚನಾಮಾದರಿಗಳು ಎಂದು ಮೂರು ವಿಧವಾಗಿದೆ.

(i) **ಘನ ಮಾದರಿಗಳು:** ಒಂದು ವಸ್ತುವಿನ ಆಕೃತಿಯನ್ನು ತೋರಿಸುತ್ತದೆ. ಉದಾಹರಣೆ: ಸುಧಾರಿಸಿದ ನೇಗಿಲು.

(ii) **ಅಂತರಿಕ ಮಾದರಿಗಳು:** ಒಂದು ವಸ್ತುವಿನ ಒಳಭಾಗವನ್ನು ತೋರಿಸುತ್ತದೆ. ಇದರ ಭಾಗಗಳನ್ನು ತೋರಿಸಿ, ಪುನಃ ಜೋಡಿಸಬಹುದು. ಉದಾಹರಣೆ: ಸುಧಾರಿಸಿದ ಯಂತ್ರದ ಒಳಭಾಗ.

(iii) **ರಚನಾ ಮಾದರಿಗಳು:** ಒಂದು ವಸ್ತುವಿನ ರಚನೆಯನ್ನು ತೋರಿಸಿ, ಚಲನೆಯನ್ನು ತೋರಿಸುತ್ತವೆ. ಉದಾಹರಣೆ: ನೀರೆತ್ತುವ ಯಂತ್ರದ ಮಾದರಿ. ಮಾದರಿಗಳನ್ನು ವೈಯುಕ್ತಿಕ, ಗುಂಪು ಮತ್ತು ಸಾಮೂಹಿಕ ಪದ್ಧತಿಗಳಲ್ಲಿ ಉಪಯೋಗಿಸಲಾಗುತ್ತದೆ.

ಪರಿಣಾಮಕಾರಿ ಮಾದರಿಯ ಗುಣಧರ್ಮಗಳು :

(1) ಮಾದರಿಗಳು ತ್ರಿಮುಖವುಳ್ಳವುಗಳಾಗಿರಬೇಕು.

(2) ಅತಿ ಹೆಚ್ಚು ಗಾತ್ರದ ಅಥವಾ ಅತಿ ಸೂಕ್ಷ್ಮಗಾತ್ರದ ನೈಜವಸ್ತುಗಳನ್ನು ಸೂಕ್ತ ಉದ್ದಳತೆ ಮತ್ತು ಎತ್ತರದ ಗಾತ್ರಕ್ಕೆ ಮಾದರಿಗಳ ಮೂಲಕ ಪ್ರತಿರೂಪಿಸಬಹುದು.

(3) ಹೊರನೋಟದಿಂದ ಕಾಣಲಾಗದ ವಸ್ತುಗಳ ಒಳರಚನೆಯನ್ನು ವಿವರವಾಗಿ ತೋರಿಸುತ್ತವೆ.

(4) ಅತ್ಯವಶ್ಯಕ ಅಂಶಗಳ ಕಡೆಗೆ ಶಿಕ್ಷಣಾರ್ಥಿಗಳಿಗೆ ಗಮನ ಸೆಳೆಯಲು ಅನವಶ್ಯಕ ಅಂಶಗಳನ್ನು ಮಾದರಿಗಳಿಂದ ತೆಗೆಯಬಹುದು.

(5) ವಿವಿಧ ಬಣ್ಣಗಳನ್ನು ಉಪಯೋಗಿಸಿಕೊಂಡು ಮಾದರಿಗಳು ಆಕರ್ಷಕವಾಗಿರುತ್ತವೆ.

ಪ್ರಯೋಜನ-ಲಾಭಗಳು :

(1) ಮಾದರಿಗಳನ್ನು ಉಪಯೋಗಿಸಿದಾಗ ನಿಜಸ್ಥಿತಿಯನ್ನು ಪರಿಣಾಮಕಾರಿಯಾಗಿ ಪ್ರತಿಬಿಂಬಿಸುತ್ತವೆ.

(2) ವಿವಿಧ ಶಿಕ್ಷಣ ಸನ್ನಿವೇಶಗಳಲ್ಲಿ ಮಾದರಿಗಳನ್ನು ಉಪಯೋಗಿಸಬಹುದು.

ಇತಿ-ಮಿತಿಗಳು :

(1) ಮಾದರಿಗಳ ತಯಾರಿಕೆ ಅತಿ ವೆಚ್ಚದ್ದಾಗಿದೆ.

(2) ಮಾದರಿಗಳ ಸಂರಕ್ಷಣೆ ಕಠಿಣ.

11. ಛಾಯಾಚಿತ್ರ



ಚಿತ್ರ 31 : ಛಾಯಾಚಿತ್ರ — ಶ್ರೇಷ್ಠ ಹೈಬ್ರಿಡ್ ಮುಸುಕಿನ ಜೋಳದ ಬೆಳೆ ಬೆಳೆದ ರೈತನೊಬ್ಬ ಬೆಳೆಯ ಮಧ್ಯದಲ್ಲಿ ಹೆಮ್ಮೆಯಿಂದ ನಿಂತಿದ್ದಾನೆ.

ಛಾಯಾಚಿತ್ರವು ಒಂದು ಅಪೂರ್ವ ದೃಗ್ಗೋಚರ ಸಾಧನ. ಈ ಸಾಧನವು

ನೈಜವಸ್ತುಗಳ ಛಾಯಾಚಿತ್ರ. ಕ್ಯಾಮರಾ ಸಹಾಯದಿಂದ ಯಾವ ವಸ್ತುವಿನ ಚಿತ್ರವನ್ನಾದರೂ ತೆಗೆದುಕೊಂಡು ವಿವಿಧ ರೀತಿಯಲ್ಲಿ ಉಪಯೋಗಿಸಬಹುದು. **ಒಂದು ಚಿತ್ರವು ಸಾವಿರಾರು ಪದಗಳಿಗೆ ಸಮ** ಎಂಬ ನಾಣ್ನುಡಿಯು ಈ ಸಾಧನೆಯ ಮಹತ್ವವನ್ನು ತೋರಿಸುತ್ತದೆ.

ಇತ್ತೀಚೆಗೆ ವಿಸ್ತರಣ ಶಿಕ್ಷಣ ಸನ್ನಿವೇಶದಲ್ಲಿ ಛಾಯಾಚಿತ್ರಗಳ ಉಪಯೋಗ ಹೆಚ್ಚಾಗಿ ಕಂಡುಬರುತ್ತದೆ. ಈ ಚಿತ್ರಗಳನ್ನು ವೈಯುಕ್ತಿಕ, ಗುಂಪು ಹಾಗೂ ಸಾಮೂಹಿಕ ವಿಸ್ತರಣ ಶಿಕ್ಷಣ ಪದ್ಧತಿಗಳಲ್ಲಿ ಉಪಯೋಗ ಮಾಡಿಕೊಳ್ಳಲಾಗುತ್ತದೆ.

ಪ್ರಯೋಜನ-ಲಾಭಗಳು :

(1) ವೃತ್ತಪತ್ರಿಕೆ, ಹಸ್ತಪತ್ರಿಕೆ, ವಾರಪತ್ರಿಕೆ ಇವುಗಳಲ್ಲಿ ವಿಷಯ ನಿರೂಪಣೆಯ ಪರಿಣಾಮವನ್ನು ಹೆಚ್ಚಿಸಲು ಛಾಯಾಚಿತ್ರಗಳು ಅವಶ್ಯಕ.

(2) ಅಪ್ರಕ್ಷೇಪಕ ಸಾಧನಗಳಾದ ಸ್ಫುರಣ ಪಟ, ಫ್ಲಾನಲ್ ಗ್ರಾಫ್‌ಗಳನ್ನು ಉಪಯೋಗಿಸುವ ಛಾಯಾಚಿತ್ರಗಳನ್ನು ವೈವಿಧ್ಯರೂಪದಲ್ಲಿ ಉಪಯೋಗಿಸಲಾಗುತ್ತದೆ.

(3) ಚಿತ್ರರೂಪದಲ್ಲಿರುವ ಮಾಹಿತಿಯನ್ನು ಎಲ್ಲರೂ ಸರ್ವೇಸಾಧಾರಣವಾಗಿ ಅರ್ಥಮಾಡಿಕೊಳ್ಳುವರು.

(4) ಛಾಯಾಚಿತ್ರವು ನೈಜ ಸ್ಥಿತಿಯನ್ನು ಪ್ರಮಾಣಪೂರಿತವಾಗಿ ವಿವರಿಸುತ್ತದೆ.

(5) ಛಾಯಾಚಿತ್ರಗಳ ಸಹಾಯದಿಂದ ಹೋಲಿಕೆ ವ್ಯತ್ಯಾಸಗಳನ್ನು ತೋರಿಸಬಹುದು.

(6) ಗತಕಾಲದ ಸನ್ನಿವೇಶವನ್ನು ಪ್ರಚಲಿತ ಶಿಕ್ಷಣ ಸನ್ನಿವೇಶಗಳಲ್ಲಿ ಪುನರಾವರ್ತಿಸಬಹುದು.

(7) ಛಾಯಾಚಿತ್ರಗಳ ಸಹಾಯದಿಂದ ಸ್ಥಳೀಯ ಘಟನೆಗೆ ಮತ್ತು ಸ್ಥಳೀಯ ಮುಖಂಡರಿಗೆ ಮಾನ್ಯತೆ ಸಿಗುತ್ತದೆ.

ಇತಿ-ಮಿತಿಗಳು:

(1) ಛಾಯಾಚಿತ್ರಗಳ ತಯಾರಿಕೆ ಅತಿ ವೆಚ್ಚದ್ದು.

(2) ಛಾಯಾಚಿತ್ರಗಳನ್ನು ಪಡೆಯಲು ಅತ್ಯಂತ ನೈಪುಣ್ಯತೆ ಮತ್ತು ಚತುರತೆ ಇರಬೇಕು.

(3) ಛಾಯಾಚಿತ್ರಗಳ ಸಂರಕ್ಷಣೆ ಕಠಿಣ.

12. ವ್ಯಂಗ್ಯ ಚಿತ್ರಗಳು (ಕಾರ್ಟೂನ್ಸ್)

ಒಬ್ಬ ವ್ಯಕ್ತಿಯ, ಒಂದು ವಿಚಾರದ ಅಥವಾ ಒಂದು ಸನ್ನಿವೇಶದ ರೇಖಾರೂಪ ವ್ಯಂಗ್ಯಚಿತ್ರ. ವ್ಯಂಗ್ಯಚಿತ್ರದ ಮೂಲಕ ಜನಸಾಮಾನ್ಯರ ಅಥವಾ ಒಂದು ಸನ್ನಿವೇಶದ



ಚಿತ್ರ 32 : ವ್ಯಂಗ್ಯಚಿತ್ರ

ವಿಶಿಷ್ಟ ರೂಪರೇಖೆಗಳನ್ನು ಹಾಸ್ಯ ಅಥವಾ ವಿಡಂಬನಾತ್ಮಕವಾಗಿ ಚಿತ್ರಿಸಬಹುದು. ಈ ಸಾಧನವು ಮುಖ್ಯವಾಗಿ ವೃತ್ತಪತ್ರಿಕೆ, ವಾರಪತ್ರಿಕೆಗಳಲ್ಲಿ ಉಪಯೋಗಿಸಲಾಗುತ್ತದೆ.

13. ಪರದೆಯ ಮೇಲೆ ಮೂಡಿಸುವ ಚಿತ್ರಗಳು ಹಾಗೂ ಸಾಧನಗಳು


ಕೆಲವು ವೀಕ್ಷಕ ಸಾಧನಗಳನ್ನು ಉಪಯೋಗಿಸಬೇಕಾದರೆ ಪ್ರದರ್ಶಿಸುವ ಸಲಕರಣೆ ಅತ್ಯಗತ್ಯ. ಜಾರುಪಟಲ ಮತ್ತು ಲಘು ಚಿತ್ರಪಟ್ಟಿಗಳನ್ನು ಉಪಯೋಗಿಸಲು ಪರದೆಯ ಮೇಲೆ ಬಿಂಬಿಸುವ ಸಲಕರಣೆಯ (ಪ್ರೊಜೆಕ್ಟರ್) ಅಗತ್ಯವಿದೆ.

(i) ಪಾರದರ್ಶಕ ಚಿತ್ರ (ಸ್ಲೈಡ್)

ಪ್ರತ್ಯೇಕ ಚೌಕಟ್ಟಿನಲ್ಲಿರುವ ಒಂದು ಪಾರದರ್ಶಕ ಛಾಯಾಚಿತ್ರವಿದು.


ಈ ಸಾಧನವನ್ನು ಚಿತ್ರಮೂಡಿಸುವ ಯಂತ್ರದ ಮೂಲಕ ಉಪಯೋಗಿಸಲು ಸಾಧ್ಯ. ಇದನ್ನು ಗುಂಪು ಪದ್ಧತಿಗಳಲ್ಲಿ ಉಪಯೋಗಿಸಲಾಗುತ್ತದೆ.

ಪಾರದರ್ಶಕ ಚಿತ್ರವು ಸ್ಥಿರ ಚಿತ್ರಮಾಧ್ಯಮ. ಇದರ ಮೂಲಕ ಚಿತ್ರಗಳು ರೇಖಾಚಿತ್ರ, ವ್ಯಂಗ್ಯಚಿತ್ರ, ಅಂಕಿಅಂಶಗಳ ಪಟ್ಟಿಗಳನ್ನು ಪ್ರದರ್ಶಿಸಬಹುದು. ಪಾರ



ಚಿತ್ರ 33 (a) : ಪಾರದರ್ಶಕ ಚಿತ್ರ (ಸ್ಲೈಡ್)

ದರ್ಶಕ ಚಿತ್ರಗಳನ್ನು ವರ್ಣರಂಜಿತವಾಗಿಯೂ ಅಥವಾ ಕಪ್ಪುಬಿಳುಪಿನಲ್ಲಿಯೂ ತಯಾರಿಸಬಹುದು. ಇವುಗಳನ್ನು ವಿಸ್ತರಣ ಶಿಕ್ಷಕನೇ ತಯಾರಿಸಬಹುದು.



ಚಿತ್ರ 33 (b) : ಪಾರದರ್ಶಕ ಚಿತ್ರವನ್ನು ಪ್ರಕ್ಷೇಪಕದ ಮುಖಾಂತರ ಪರದೆಯಮೇಲೆ ರೂಪಿಸುವಿಕೆ.

ಪಾರದರ್ಶಕ ಚಿತ್ರಗಳು $3\frac{1}{4}'' \times 4''$ ಇಲ್ಲವೆ $2'' \times 2''$ ಅಳತೆಯದಾಗಿರುತ್ತವೆ. ಎರಡನೆಯ ಅಳತೆಯವುಗಳನ್ನು ಸರ್ವಸಾಮಾನ್ಯವಾಗಿ ಬಳಸಲಾಗುತ್ತದೆ.

ಪ್ರಯೋಜನ–ಲಾಭಗಳು :

(1) ಪಾರದರ್ಶಕ ಚಿತ್ರಗಳನ್ನು ಅನುಕೂಲಕ್ಕೆ ತಕ್ಕಂತೆ ಉಪಯೋಗಿಸಬಹುದು.

(2) ಕಡಿಮೆ ವೆಚ್ಚದಲ್ಲಿ ವಿಸ್ತರಣ ಕಾರ್ಯಕರ್ತನೇ ತಯಾರಿಸಿಕೊಳ್ಳಬಹುದಾದ ಸಾಧನೆ.

(3) ಸ್ಥಳೀಯ ಸನ್ನಿವೇಶಗಳನ್ನು ಬಿಂಬಿಸಬಹುದು. ಇದರಿಂದ ಪ್ರೇಕ್ಷಕರಲ್ಲಿ ಆಸಕ್ತಿಯನ್ನು ಉಂಟುಮಾಡಬಹುದು.

(4) ನೈಸರ್ಗಿಕ ವರ್ಣದಲ್ಲಿ ತಯಾರಿಸಬಹುದು.

(5) ಅವಶ್ಯಕತೆಗನುಗುಣವಾಗಿ ಪಾರದರ್ಶಕಾಂತ್ರದ ಅನುಕ್ರಮಣಿಕೆಯನ್ನು ಬದಲಾಯಿಸಬಹುದು.

(6) ಪ್ರೇಕ್ಷಕರು ಪಾರದರ್ಶಕ ಚಿತ್ರವನ್ನು ಅವಶ್ಯವಿದ್ದರೆ ಹೆಚ್ಚು ಕಾಲದವರೆಗೆ ವೀಕ್ಷಿಸಬಹುದು.

(7) ಈ ಸಾಧನಗಳನ್ನು ಉಪಯೋಗಿಸಲು ಅತಿ ಕತ್ತಲು ಕೋಣೆ ಇದ್ದರೆ ಸಾಕು.

(8) ಈ ಸಾಧನವನ್ನು ಬಿಂಬಿಸಲು ಉಪಯೋಗಿಸುವ ಸಲಕರಣೆ ಹಗುರಾಗಿರುತ್ತದೆ ಮತ್ತು ಸಾಗಾಣಿಕೆ ಸುಲಭ.

ಇತಿ–ಮಿತಿಗಳು :

(1) ಇವು ಚಲನೆಯನ್ನು ತೋರಿಸುವುದಿಲ್ಲ.

(2) ವಿದ್ಯುಚ್ಛಕ್ತಿ ಇಲ್ಲದ ಕಡೆ ಉಪಯೋಗಿಸಲು ಕಷ್ಟದಾಯಕ.

(ii) ಲಘು ಚಿತ್ರಪಟ್ಟಿ (ಫಿಲ್ಮ್ ಸ್ಟ್ರಿಪ್) :

ಪರಸ್ಪರ ಸಂಬಂಧವುಳ್ಳ 35 ಮಿ.ಮಿ. ಫಿಲಂ ಮೇಲೆ ಇರುವ ಸ್ಥಿರ ಪಾರದರ್ಶಕ ಚಿತ್ರಗಳ ಲಘು ಪಟ್ಟಿ.

ಈ ಲಘು ಚಿತ್ರ ಪಟ್ಟಿಯು ವರ್ಣರಂಜಿತವಾಗಿರಬಹುದು ಅಥವಾ ಕಪ್ಪು ಬಿಳುಪಿನದಾಗಿರಬಹುದು. ಪಟ್ಟಿಯ ವೈಯುಕ್ತಿಕ ಚಿತ್ರದ ಉದ್ದಳತೆ ¾" × 1" ಲಘು ಚಿತ್ರ ಪಟ್ಟಿಯು ಸಾಮಾನ್ಯವಾಗಿ 20 ರಿಂದ 50 ಚಿತ್ರಗಳನ್ನೊಳಗೊಂಡಿರುತ್ತದೆ.

ಈ ಸಾಧನವನ್ನು ಗುಂಪು ಪದ್ಧತಿಗಳಲ್ಲಿ ಉಪಯೋಗಿಸಬಹುದು.

ಲಘು ಚಿತ್ರಪಟ್ಟಿಯ ಪ್ರಯೋಜನ-ಉಪಯುಕ್ತತೆಗಳು ಜಾರುಪಟಲದ ಗುಣ ಧರ್ಮಗಳು ಮತ್ತು ಉಪಯುಕ್ತತೆಗಳಂತೆಯೇ ಇವೆ.


ಇತಿ-ಮಿತಿಗಳು :

(1) ಚಲನೆಯನ್ನು ತೋರಿಸುವುದಿಲ್ಲ.

(2) ಅನುಕ್ರಮಣಿಕೆಯು ಬದಲಾಯಿಸಲಾಗದ ಜೋಡಣೆಯಲ್ಲಿರುತ್ತದೆ.

(3) ಇವು ಶೀಘ್ರವಾಗಿ ಹಾನಿಗೊಳಗಾಗುತ್ತವೆ ಮತ್ತು ಸರಿಪಡಿಸುವುದು ಕಠಿಣ


(4) ವಿಸ್ತರಣ ಕಾರ್ಯಕರ್ತನಿಂದಲೇ ತಯಾರಿಸುವುದು. ಸಾಧ್ಯವಿಲ್ಲ.



ಚಿತ್ರ 34 : ಲಘು ಪಾರದರ್ಶಕ ಚಿತ್ರ ಪಟ್ಟಿ (ಫಿಲ್ಮ್ ಸ್ಟ್ರಿಪ್)

(iii) **ಅಪಾರದರ್ಶಕ ಚಿತ್ರಗಳನ್ನು ಮೂಡಿಸುವ ಯಂತ್ರ (ಒಪೇಕ್ ಪ್ರೊಜೆಕ್ಟರ್):**

ಒಪೇಕ್ ಪ್ರೊಜೆಕ್ಟರ್ ಮೂಲಕ ಅಪಾರದರ್ಶಕ ವಸ್ತುಗಳಾದ ಛಾಯಾಚಿತ್ರ




ಚಿತ್ರ 35 : ಒಪೇಕ್ ಪ್ರೊಜೆಕ್ಟರ್

ಗಳು, ಪುಸ್ತಕಗಳಲ್ಲಿರುವ ಪಟ್ಟಿಗಳು, ಕೆಲವು ನೈಜವಸ್ತುಗಳು ಇತ್ಯಾದಿಗಳನ್ನು ಬಿಂಬಿಸ

ಬಹುದು. ಗುಂಪು ಪದ್ಧತಿಯಲ್ಲಿ ಇದರ ಉಪಯೋಗ ಹೆಚ್ಚು. ಈ ಸಲಕರಣೆಯು ಅತಿ ಹೆಚ್ಚಿನ ಗಾತ್ರದ್ದಾಗಿರುವುದರಿಂದ ಮತ್ತು ಸಂಪೂರ್ಣ ಕತ್ತಲೆ ಕೋಣೆಯು ಬೇಕಾಗಿರುವುದರಿಂದ ಇದರ ಉಪಯೋಗ ಸೀಮಿತವಾಗಿರುತ್ತದೆ.

(iv) ತಲೆಯ ಮೇಲೆ ಚಿತ್ರ ಮೂಡಿಸುವ ಯಂತ್ರ (ಓವರ್‌ಹೆಡ್ ಪ್ರೊಜೆಕ್ಟರ್):

ಈ ಸಲಕರಣೆಗಳ ಮೂಲಕ ಪಾರದರ್ಶಕ ಮೇಲೆ ಬರೆದ ಚಿತ್ರಪಟ್ಟಿ, ವ್ಯಂಗ್ಯ



ಚಿತ್ರ 36: ಓವರ್‌ಹೆಡ್ ಪ್ರೊಜೆಕ್ಟರ್

ಚಿತ್ರ ಇತ್ಯಾದಿಗಳನ್ನು ಪ್ರದರ್ಶಿಸಬಹುದು. ಈ ಸಾಧನವನ್ನು ಗುಂಪು ಪದ್ಧತಿಗಳಲ್ಲಿ ಉಪಯೋಗಿಸಬಹುದು.

ಪ್ರಯೋಜನ-ಲಾಭಗಳು:

ತಲೆಯಮೇಲೆ ಚಿತ್ರಮೂಡಿಸುವ ಈ ವಿಧಾನವು ವಿಶಿಷ್ಟ ಉಪಯುಕ್ತತೆ ಗಳನ್ನು ಒಳಗೊಂಡಿದೆ. ಅವುಗಳೆಂದರೆ:

(1) ವಿಸ್ತರಣ ಕಾರ್ಯಕರ್ತನು ಪ್ರೇಕ್ಷಕರ ಕಡೆ ನೋಡಿಕೊಂಡೇ ಈ ಸಾಧನವನ್ನು ಉಪಯೋಗಿಸಬಹುದು.

(2) ಅನೇಕ ವಿಧವಾದ ರೇಖಾಚಿತ್ರ, ನಕ್ಷೆ, ಇತ್ಯಾದಿಗಳನ್ನು ಉಪಯೋಗಿಸ ಬಹುದು.

(3) ಪಾರದರ್ಶಕದ ಮೇಲೆ ವಿಸ್ತರಣ ಕಾರ್ಯಕರ್ತನು ಬೇಕಾದ ವಿಷಯವನ್ನು ಬರೆದು ಬಿಂಬಿಸಬಹುದು.

(4) ಈ ಸಲಕರಣೆಯನ್ನುಪಯೋಗಿಸಲು ಕತ್ತಲು ಕೋಣೆಯ ಅವಶ್ಯಕತೆಯಿಲ್ಲ.

ಇತಿ-ಮಿತಿಗಳು :

ಸಲಕರಣೆಯು ಅತಿ ಹೆಚ್ಚಿನ ಗಾತ್ರದ್ದಾಗಿರುವುದರಿಂದ ಸಾಗಾಣಿಕೆ ಕಷ್ಟ.

ಅಧ್ಯಾಯ 7

ವಿಸ್ತರಣ ಶಿಕ್ಷಣ ಪದ್ಧತಿಗಳ ಆಯ್ಕೆ

ವಿಸ್ತರಣ ಕಾರ್ಯಕರ್ತನ ಕಾರ್ಯಕ್ಷೇತ್ರದಲ್ಲಿ ಸಾವಿರಾರು ರೈತಕುಟುಂಬಗಳಿರುತ್ತವೆ. ಈ ಕುಟುಂಬಗಳು ಒಂದು ತೆರನಾಗಿರುವುದಿಲ್ಲ; ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಭಿನ್ನಭಿನ್ನವಾಗಿರುತ್ತವೆ. ವಿವಿಧ ಕೃಷಿ ಸನ್ನಿವೇಶಗಳಿಗೆ ತಕ್ಕಂತೆ, ವಿಸ್ತರಣ ಕಾರ್ಯಕರ್ತನು ವಿವಿಧ ವಿಸ್ತರಣ ಶಿಕ್ಷಣ ಪದ್ಧತಿಗಳನ್ನು ಆರಿಸಿ, ಸೂಕ್ತವಾಗಿ ಸಂಯೋಜನೆಗೊಳಿಸಿ ಉಪಯೋಗಿಸಿದಾಗ ಇಚ್ಛಿತ ಪರಿಣಾಮ ಕೈಗೂಡಿಬರುತ್ತವೆ.

ವಿಸ್ತರಣ ಕಾರ್ಯಕ್ಷೇತ್ರದಲ್ಲಿ, ಎಲ್ಲ ಸನ್ನಿವೇಶಗಳಿಗೆ ಅನುಗುಣವಾದ ಇಂಥದೇ ಶ್ರೇಷ್ಠ ಶಿಕ್ಷಣ ಪದ್ಧತಿ ಇದೆ ಎಂದು ಹೇಳಲಿಕ್ಕಾಗುವುದಿಲ್ಲ. ಸನ್ನಿವೇಶಗಳಿಗೆ ತಕ್ಕಂತೆ ವಿಸ್ತರಣ ಶಿಕ್ಷಣ ಪದ್ಧತಿಗಳನ್ನು ಆರಿಸಿ, ಸೂಕ್ತ ಜೋಡಾವಣೆಯಲ್ಲಿ ಉಪಯೋಗಿಸಬೇಕಾದರೆ ಕೆಲವು ಮುಖ್ಯ ಅಂಶಗಳನ್ನು ಗಮನಿಸಬೇಕಾಗುತ್ತದೆ. ಅವುಗಳೆಂದರೆ:

(1) ಶಿಕ್ಷಣ ಕಾರ್ಯಕ್ರಮದ ಮುಖ್ಯ ಉದ್ದೇಶ:

ಶಿಕ್ಷಣಾರ್ಥಿಗಳಲ್ಲಿ ಯಾವ ತೆರನಾದ ಬದಲಾವಣೆಯನ್ನು ಅಪೇಕ್ಷಣೀಯವೋ ಎನ್ನುವುದು ಮುಖ್ಯ-ಜ್ಞಾನಾರ್ಜನೆಯಲ್ಲಿ ಬದಲಾವಣೆಯೇ, ಮನೋಭಾವ ಬದಲಾವಣೆಯೇ, ಚತುರತೆಯಲ್ಲಿ ಬದಲಾವಣೆಯೇ ಅಥವಾ ಇವು ಮೂರರಲ್ಲಿ ಎರಡು ಇಲ್ಲವೆ ಎಲ್ಲದರಲ್ಲಿಯೂ ಬದಲಾವಣೆಯೇ?

(2) ಶಿಕ್ಷಣಾರ್ಥಿಗಳ ಸ್ವರೂಪ:

(i) ಶಿಕ್ಷಣಾರ್ಥಿಗಳ ವಯಸ್ಸು.

(ii) ಶಿಕ್ಷಣಾರ್ಥಿಗಳ ವಿದ್ಯಾಭ್ಯಾಸದ ಮಟ್ಟ.

(iii) ಶಿಕ್ಷಣಾರ್ಥಿಗಳ ಅನುಭವ, ಬುದ್ಧಿವಂತಿಕೆ ಮತ್ತು ಜ್ಞಾನ ಮಟ್ಟ.

(iv) ಶಿಕ್ಷಣಾರ್ಥಿಗಳಲ್ಲಿ ಜ್ಞಾನಾರ್ಜನೆಯ ಬಗ್ಗೆ ಇರತಕ್ಕ ಆಸಕ್ತಿ ಮತ್ತು ಅವಶ್ಯಕತೆ.

ಬಹುಪಾಲು ಶಿಕ್ಷಣಾರ್ಥಿಗಳು ಅನಕ್ಷರಸ್ಥರಿದ್ದರೆ ಶಿಕ್ಷಣ ಕಾರ್ಯಕರ್ತನು, ನೈಸರ್ಗಿಕವಸ್ತು, ಮಾದರಿ, ಛಾಯಾಚಿತ್ರ, ಪರಿಣಾಮ ಪ್ರಾತ್ಯಕ್ಷಿಕೆ ಇತ್ಯಾದಿಗಳನ್ನು ಉಪಯೋಗಮಾಡಬೇಕಾಗುತ್ತದೆ. ಈ ಒಂದು ಸನ್ನಿವೇಶಗಳಲ್ಲಿ ಮುದ್ರಿತ ಪದಗಳ ಬಳಕೆ ನಿರುಪಯುಕ್ತ. ಆದುದರಿಂದ ಶಿಕ್ಷಣಾರ್ಥಿಗಳ ವೈಯಕ್ತಿಕ ವ್ಯತ್ಯಾಸಗಳನ್ನು ಗಮನದಲ್ಲಿಡುವುದು ಅತ್ಯವಶ್ಯಕ.

(3) ಶಿಕ್ಷಣಾರ್ಥಿಗಳಲ್ಲಿರುವ ವ್ಯತ್ಯಾಸ:

(i) ಶಿಕ್ಷಣಾರ್ಥಿಗಳ ಕಸುಬಿನಲ್ಲಿರುವ ವ್ಯತ್ಯಾಸ: ಶಿಕ್ಷಣಾರ್ಥಿಗಳು ಬೆಳೆ ಬೆಳೆಯುವ ರೈತರಾಗಿರಬಹುದು; ಹೈನುಗಾರಿಕೆಯ ರೈತರಾಗಿರಬಹುದು; ಕೋಳಿ ಸಾಕಾಣಿಕೆಯ ರೈತರಾಗಿರಬಹುದು. ಮುಖ್ಯ ಕಸುಬಿನ ಜೊತೆಗೆ ಉಪಕಸುಬು ಮಾಡುವವರಾಗಿರಬಹುದು ಅಥವಾ ಕೃಷಿಯ ಉದ್ಯಮದ ಜೊತೆಗೆ ಯಾವುದಾದರೂ ಕಛೇರಿ, ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡುವವರಾಗಿರಬಹುದು. ಇಂಥವರಿಗೆ ಬೋಧಿಸಲು ಬೇರೆ ಬೇರೆಯ ವಿಸ್ತರಣ ಶಿಕ್ಷಣ ಪದ್ಧತಿಗಳ ಆಯ್ಕೆ ಮತ್ತು ಸಂಯೋಜನೆ ಅತಿ ಮುಖ್ಯ.

(4) ಶಿಕ್ಷಣಾರ್ಥಿಗಳ ಸಂಖ್ಯೆ:

ಶಿಕ್ಷಣಾರ್ಥಿಗಳ ಸಂಖ್ಯೆಯ ಮೇಲೆ ಶಿಕ್ಷಣ ಪದ್ಧತಿಗಳ ಆಯ್ಕೆ ನಿರ್ಧಾರವಾಗುತ್ತದೆ. ಶಿಕ್ಷಣಾರ್ಥಿಗಳು ದೂರದೂರದ ಸ್ಥಳಗಳಲ್ಲಿ ವಾಸಿಸುತ್ತಿರುವ ಸಂದರ್ಭಗಳಲ್ಲಿ ವಿಸ್ತರಣ ಕಾರ್ಯಕರ್ತನು ಗುಂಪು ಪದ್ಧತಿಗಳನ್ನು ಉಪಯೋಗಿಸುವುದು ಕಠಿಣ. ಇಂಥಹ ಸಂದರ್ಭಗಳಲ್ಲಿ ವೈಯುಕ್ತಿಕ ಪದ್ಧತಿಗಳನ್ನು ಉಪಯೋಗಿಸುವುದು ಹಿತಕರ.

(5) ಪದ್ಧತಿ ಅಂಗೀಕಾರದ ಹಂತಗಳು:

ಶಿಕ್ಷಣಾರ್ಥಿಗಳು ಸುಧಾರಿಸಿದ ಪದ್ಧತಿ ಅಂಗೀಕಾರದಲ್ಲಿ ಯಾವ ಹಂತದಲ್ಲಿ ಇದ್ದಾರೆನ್ನುವುದೂ ಸಹ ವಿಸ್ತರಣ ಶಿಕ್ಷಣ ಪದ್ಧತಿಗಳ ಆಯ್ಕೆಯಲ್ಲಿ ಪ್ರಭಾವ ಬೀರುತ್ತದೆ. ಶಿಕ್ಷಣಾರ್ಥಿಗಳು ಅರಿವುಹಂತದಲ್ಲಿದ್ದರೆ ಕೆಲವು ಸಾಮುದಾಯಕ ಪದ್ಧತಿಗಳಾದ ಬಾನುಲಿ, ವರ್ತಮಾನ ಪತ್ರಿಕೆ, ಭಿತ್ತಿಪತ್ರಿಕೆಗಳನ್ನು ಹೆಚ್ಚಾಗಿ ಉಪಯೋಗಿಸಬೇಕಾಗುತ್ತದೆ. ಅದಲ್ಲದೆ ಸುಧಾರಿಸಿದ ಪದ್ಧತಿಯ ಅಂಗೀಕಾರ (ಮೌಲ್ಯವಿಮರ್ಶನೆ)ದ ಹಂತದಲ್ಲಿದ್ದರೆ, ವೈಯುಕ್ತಿಕ ಪದ್ಧತಿಗಳಾದ ಹೊಲಮನೆ ಭೆಟ್ಟಿ, ಪರಿಣಾಮ ಪ್ರಾತ್ಯಕ್ಷಿಕೆ, ಗುಂಪು ಪದ್ಧತಿಗಳಾದ ಕ್ಷೇತ್ರಸಂದರ್ಶನ ಇತ್ಯಾದಿಗಳ ಉಪಯೋಗ ಅವಶ್ಯ.

(6) ಬೋಧಕ ವಿಷಯ:

ವಿಸ್ತರಣ ಪದ್ಧತಿಗಳ ಆಯ್ಕೆ ಬೋಧಕ ವಿಷಯದ ಮೇಲೆ ಅವಲಂಬಿಸಿರುತ್ತದೆ.

ಬೋಧಕ ವಿಷಯವು ಬೋಧಿಸಲು ಸರಳವಾಗಿರಬಹುದು, ಕಠಿಣವಾಗಿರಬಹುದು, ಸಂಪೂರ್ಣ ಹೊಸದಾಗಿರಬಹುದು ಅಥವಾ ಹಳೆಪದ್ಧತಿಯ ಸೂಕ್ಷ್ಮ ಬದಲಾವಣೆ ಯಾಗಿರಬಹುದು. ಅದಕ್ಕನುಗುಣವಾಗಿ ವಿಸ್ತರಣ ಶಿಕ್ಷಣ ಪದ್ಧತಿಗಳ ಆಯ್ಕೆ ಮಾಡ ಬೇಕಾಗುತ್ತದೆ.

(7) ವಿಸ್ತರಣ ಶಿಕ್ಷಣ:

ವಿಸ್ತರಣ ಶಿಕ್ಷಣ ಪದ್ಧತಿಗಳ ಆಯ್ಕೆ ವಿಸ್ತರಣ ಶಿಕ್ಷಕನ ತರಬೇತಿ ಮತ್ತು ಅನುಭವಗಳನ್ನೂ ಅವಲಂಬಿಸಿರುತ್ತದೆ; ವಿಸ್ತರಣ ಶಿಕ್ಷಣ ಪದ್ಧತಿಗಳ ಬಗ್ಗೆ ವಿಸ್ತರಣ ಕಾರ್ಯಕರ್ತನಿಗಿರುವ ವೈಯುಕ್ತಿಕ ಅಭಿರುಚಿಯ ಮೇಲೂ ಇದು ಅವಲಂಬಿಸಿರುತ್ತದೆ. ವಿಸ್ತರಣ ಶಿಕ್ಷಣ ಪದ್ಧತಿಗಳ ಆಯ್ಕೆ ವಿಸ್ತರಣ ಕಾರ್ಯಕರ್ತನಿಗೆ ದೊರಕುವ ಸಮಯದ ಮೇಲೂ ಅನೇಕ ಸಲ ಅವಲಂಬಿಸಿರುತ್ತದೆ.

(8) ವಿಸ್ತರಣ ಶಿಕ್ಷಣ ಪದ್ಧತಿಗಳ ಉಪಯೋಗದಲ್ಲಿ ಬೇಕಾಗುವ ಸಲಕರಣೆ ಗಳ ಲಭ್ಯತೆ:

ಅನೇಕ ಸಂದರ್ಭಗಳಲ್ಲಿ ಸೂಕ್ತ ಸಲಕರಣೆಗಳು – ವರ್ತಮಾನಪತ್ರಿಕೆ, ಭಿತ್ತಿಪತ್ರ: ಇತ್ಯಾದಿ ವಿಸ್ತರಣ ಕಾರ್ಯಕರ್ತನಿಗೆ ಮತ್ತು ಶಿಕ್ಷಣಾರ್ಥಿಗಳಿಗೆ, ವಿಸ್ತರಣ ಕಾರ್ಯ ಕರ್ತನಿಗೆ ಸಾಧ್ಯವಾಗುವುದಿಲ್ಲ. ಅಲ್ಲದೆ ಬಿತ್ತರಗೊಂಡ ಕಾರ್ಯಕ್ರಮಗಳನ್ನು ಕೇಳಲು ಶಿಕ್ಷಣಾರ್ಥಿಗೆ ಆಗುವುದಿಲ್ಲ. ಬಾನುಲಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಇಂಥ ವಿಸ್ತರಣ ಶಿಕ್ಷಣ ಪದ್ಧತಿಗಳ ಆಯ್ಕೆಯನ್ನು ಅನಿವಾರ್ಯವಾಗಿ ಕೈಬಿಡಬೇಕಾಗುತ್ತದೆ.

(9) ವಿಸ್ತರಣ ಶಿಕ್ಷಣ ಪದ್ಧತಿಗಳಿಗೆ ತಗಲುವ ವೆಚ್ಚ:

ಅತಿ ವೆಚ್ಚದ ಪದ್ಧತಿಗಳಾದ ಪರಿಣಾಮ ಪ್ರಾತ್ಯಕ್ಷಿಕೆ, ಪ್ರದರ್ಶನ, ಕ್ಷೇತ್ರೋತ್ಸವ, ಶೈಕ್ಷಣಿಕ ಪ್ರವಾಸಗಳನ್ನು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಉಪಯೋಗಿಸುವುದು ಹಲವು ಸಲ ಕಷ್ಟವಾಗುತ್ತದೆ. ಆದರೂ ಸಹ ಇವು ಪರಿಣಾಮಕಾರಿಯಾದ ಪದ್ಧತಿಗಳಾಗಿರುವುದ ರಿಂದ ಆಗೊಮ್ಮೆ ಈಗೊಮ್ಮೆ ಅವಶ್ಯಕವಾಗಿ ಉಪಯೋಗಿಸಲೇಬೇಕಾಗುತ್ತದೆ.

(10) ಸುಧಾರಿಸಿದ ಪದ್ಧತಿ ಅಚರಿಸಿದ ಕೃಷಿಕರ ವರ್ಗ ವಿಂಗಡಣೆ:

ಸಾಮಾನ್ಯವಾಗಿ ಯಾವ ಒಂದು ಕೃಷಿ ಪದ್ಧತಿಯೂ ಎಲ್ಲ ರೈತರಲ್ಲಿ ಒಮ್ಮೆಲೆ ಅನುಸರಣೆಗೆ ಬರುವುದಿಲ್ಲ. ಈ ಬಗ್ಗೆ ಸಂಶೋಧನೆ ನಡೆಯಿಸಿ ಅನುಸರಣೆಯ

ರೈತರನ್ನು ಐದು ಗುಂಪುಗಳಲ್ಲಿ ವರ್ಗೀಕರಿಸಲಾಗಿದೆ. ಅವರೆಂದರೆ:

(i) ಪ್ರಪ್ರಥಮ ಅನುಸರಣೆಗಾರರು

(ii) ಅತಿ ಶೀಘ್ರ ಅನುಸರಣೆಗಾರರು

(iii) ಬಹುಮತ ಶೀಘ್ರ ಅನುಸರಣೆಗಾರರು

(iv) ವಿಳಂಬ ಅನುಸರಣೆಗಾರರು

(v) ಅತಿವಿಳಂಬ ಅನುಸರಣೆಗಾರರು

ಪ್ರತಿಯೊಂದು ಗುಂಪಿನಲ್ಲಿ ಬರುವ ರೈತರು ಹಲವಾರು ವಿಶೇಷ ಗುಣಧರ್ಮಗಳನ್ನು ಹೊಂದಿರುತ್ತಾರೆ. ಆದುದರಿಂದ, ಬೇರೆ ಬೇರೆ ಗುಂಪಿನ ಜನರಿಗೆ ಬೇರೆ ಬೇರೆ ವಿಸ್ತರಣ ಶಿಕ್ಷಣ ಪದ್ಧತಿಗಳನ್ನು ಉಪಯೋಗಿಸಬೇಕಾಗುತ್ತದೆ.

ಅಧ್ಯಾಯ 8

ವಿಸ್ತರಣ ಶಿಕ್ಷಣ ಪದ್ಧತಿಗಳ ಸಂಯೋಜನೆ

ವಿಸ್ತರಣ ಕಾರ್ಯಕ್ರಮದಲ್ಲಿ ಒಂದೇ ಶಿಕ್ಷಣ ಪದ್ಧತಿಯನ್ನು ಎಲ್ಲ ಸನ್ನಿವೇಶ ಗಳಲ್ಲಿ ಉಪಯೋಗಿಸುವುದರಿಂದ ಉದ್ದೇಶ ಸಾಧನೆಯಾಗುವುದಿಲ್ಲ. ಶಿಕ್ಷಣ ಕಾರ್ಯ ಕ್ರಮದ ಮೂಲ ಉದ್ದೇಶಗಳನ್ನು ಸಫಲಗೊಳಿಸಬೇಕಾದರೆ ಶಿಕ್ಷಣ ಪದ್ಧತಿಗಳನ್ನು ಫಲಪ್ರದವಾಗಿ ಸಂಯೋಜಿಸಿ ಉಪಯೋಗಿಸುವುದು ಅಗತ್ಯ. ಉದಾಹರಣೆಗೆ, ಸುಧಾರಿ ಸಿದ ಕೃಷಿ ಪದ್ಧತಿಯನ್ನು ರೈತರಿಗೆ ಬೋಧಿಸುವಾಗ ಕೇವಲ ಉಪನ್ಯಾಸದ ಮೂಲಕ ವಿಷಯ ನಿರೂಪಿಸಿದರೆ ಶಿಕ್ಷಣಾರ್ಥಿಗಳು ವಿಷಯವನ್ನು ಪೂರ್ಣವಾಗಿ ಗ್ರಹಿಸುವುದಿಲ್ಲ. ಗ್ರಹಿಸಿದ ವಿಷಯ ದೀರ್ಘಕಾಲ ಅವರ ಮನಃಪಟಲದಲ್ಲಿ ನಿಲ್ಲುವುದಿಲ್ಲ ಮತ್ತು ಮುಂದಿನ ಬದಲಾವಣೆಗೆ ಪ್ರೇರೇಪಣೆ ಅತಿ ಕಡಿಮೆ ಇರುತ್ತದೆ. ಇದರ ಬದಲು, ಉಪನ್ಯಾಸದ ಮೊದಲು ಜಾರುಪಟಲವನ್ನಾಗಲಿ, ಛಾಯಾಚಿತ್ರಗಳನ್ನಾಗಲಿ, ಸ್ಫುರಣ ಪತ್ರಗಳನ್ನಾಗಲಿ, ಫ್ಲಾನಲ್ ಗ್ರಾಫ್‌ಗಳನ್ನಾಗಲಿ ಉಪಯೋಗಿಸಿದರೆ ಉತ್ತಮ ಜ್ಞಾನಾ ರ್ಜನೆಗೆ ಮತ್ತು ಆಚರಣೆಗೆ ಪ್ರೇರೇಪಣೆ ಉಂಟಾಗುತ್ತದೆ. ಈ ಅಂಶಗಳು ಭಾರತದಲ್ಲಿ ಮತ್ತು ಕೆಲ ಹೊರದೇಶಗಳಲ್ಲಿ ಸಂಶೋಧನೆಯಿಂದ ಸ್ಥಿರಪಡಿಸಿದ ತೀರ್ಮಾನಗಳಾಗಿವೆ.

ವಿಸ್ತರಣ ಕಾರ್ಯಕರ್ತನು ಶಿಕ್ಷಣ ಪದ್ಧತಿಗಳನ್ನು ಪರಿಣಾಮಕಾರಿಯಾಗಿ ಸಂಯೋಜಿಸಬೇಕಾದರೆ ಈ ಕೆಳಗಿನ ಮುಖ್ಯಾಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು:

(I) ಸುಧಾರಿಸಿದ ಪದ್ಧತಿಯ ಸ್ವರೂಪ ಮತ್ತು ಶಿಕ್ಷಣ ಪದ್ಧತಿಗಳ ಸಂಯೋಜನೆ:

ವಿಸ್ತರಣ ಶಿಕ್ಷಣ ಪದ್ಧತಿಗಳ ಸಂಯೋಜನೆಯು ಸುಧಾರಿಸಿದ ಪದ್ಧತಿಗಳ ಸ್ವರೂಪವನ್ನು ಹೆಚ್ಚಾಗಿ ಅವಲಂಬಿಸಿರುತ್ತದೆ. ಕೆಲವು ಉದಾಹರಣೆಗಳನ್ನು ಇಲ್ಲಿ ಕೊಡಬಹುದು.

(i) ಕೇವಲ ಚತುರತೆಗಳನ್ನು ಕಲಿಯುವ ಸುಧಾರಿಸಿದ ಪದ್ಧತಿಯಾದರೆ, (ಏರುಮಡಿ ಮಾಡುವಿಕೆ, ನೀರಾವರಿ ಪದ್ಧತಿ, ಸುಧಾರಿಸಿದ ಕೃಷಿ ಉಪಕರಣದ ಉಪಯೋಗ ಇತ್ಯಾದಿ) ಲಘು ಉಪನ್ಯಾಸ, ಒಂದು ದೃಗ್ಗೋಚರ ಸಾಧನ ಮತ್ತು ಪದ್ಧತಿ ಪ್ರಾತ್ಯಕ್ಷಿಕೆಗಳನ್ನು ಸಂಯೋಜಿಸಿ ಉಪಯೋಗಿಸಿದರೆ ಹೆಚ್ಚು ಫಲ ದೊರೆಯು ತ್ತದೆ.

(ii) ಸುಧಾರಿಸಿದ ಪದ್ಧತಿಯನ್ನು ಸ್ಥಳೀಯ ಪದ್ಧತಿಯೊಡನೆ ಹೋಲಿಸಿ ಸುಧಾರಿ ಸಿದ ಪದ್ಧತಿಯ ಒಳಿತನ್ನು ಶಿಕ್ಷಣಾರ್ಥಿಗಳಿಗೆ ಮನದಟ್ಟುಮಾಡಿಕೊಡಬೇಕಾದರೆ,

ವಿಚಾರವಿನಿಮಯ ಸಭೆ, ಹೊಲಮನೆ ಭೇಟ್ಟಿ, ಪ್ರಾತ್ಯಕ್ಷಿಕೆ, ಪರಿಣಾಮ ಪ್ರಾತ್ಯಕ್ಷಿಕೆ, ಕ್ಷೇತ್ರದರ್ಶನ, ಕ್ಷೇತ್ರೋತ್ಸವ ಇತ್ಯಾದಿಗಳ ಸಂಯೋಜನೆ ಬೇಕಾಗುತ್ತದೆ. ಇದೇ ರೀತಿ ವಿಸ್ತರಣ ಕಾರ್ಯಕರ್ತನು ಇತರ ಸುಧಾರಿಸಿದ ಪದ್ಧತಿಗನುಗುಣವಾಗಿ ವಿವೇಚನೆ ಯಿಂದ ಶಿಕ್ಷಣ ಪದ್ಧತಿಗಳನ್ನು ಸಂಯೋಜಿಸಿ ಉಪಯೋಗಿಸಬೇಕು.

(2) ಸುಧಾರಿಸಿದ ಪದ್ಧತಿಯ ಅನುಸರಣೆಯ ಹಂತ ಮತ್ತು ಶಿಕ್ಷಣ ಪದ್ಧತಿಗಳ ಸಂಯೋಜನೆ:

ಸುಧಾರಿಸಿದ ಪದ್ಧತಿಯ ಅನುಸರಣೆಯಲ್ಲಿ ಇಲ್ಲವೆ ನಿರಾಕರಣೆಯಲ್ಲಿ ಐದು ನಿರ್ದಿಷ್ಟ ಹಂತಗಳನ್ನು ಸಂಶೋಧನೆಯಿಂದ ನಿಗದಿ ಮಾಡಲಾಗಿದೆ. ಪ್ರತಿಯೊಬ್ಬ ವೈಯುಕ್ತಿಕ ರೈತನು ಒಂದು ಸುಧಾರಿಸಿದ ಪದ್ಧತಿಯನ್ನು ಅನುಸರಿಸಿದಲ್ಲಿ ಮಾನಸಿಕ ವಾಗಿ ಈ ಹಂತಗಳನ್ನು ಕ್ರಮಿಸುತ್ತಾನೆ. ಈ ಹಂತಗಳೆಂದರೆ:

(i) ಅರಿವು (ಜಾಗೃತಿ)

(ii) ಆಸಕ್ತಿ

(iii) ಮೌಲ್ಯಮಾಪನ (ಪರಿಶೀಲನೆ)

(iv) ಪ್ರಯೋಗಾಚರಣೆ

(v) ಅನುಸರಣೆ ಅಥವಾ ನಿರಾಕರಣೆ

ಈ ಹಂತಗಳ ಬಗ್ಗೆ ಸ್ವಲ್ಪದರಲ್ಲಿ ವಿವರಣೆ ಇಂತಿದೆ:

(i) **ಅರಿವು (ಜಾಗೃತಿ)**: ಸಂಶೋಧನಾ ಕೇಂದ್ರಗಳಿಂದ ಅಥವಾ ಹೊರ ಪ್ರದೇಶದಿಂದ ಆಚರಣೆಗೆ ಸಿದ್ಧವಾಗಿ ಬಂದ ಯಾವುದೇ ಸುಧಾರಿಸಿದ ಪದ್ಧತಿಯ ಬಗ್ಗೆ ಸಂಬಂಧಪಟ್ಟ ರೈತರಲ್ಲಿ ಅರಿವು (ಜಾಗೃತಿ) ಉಂಟುಮಾಡುವುದು ಪ್ರಥಮ ಹಂತ. ಸಾಮಾನ್ಯವಾಗಿ, ವರ್ತಮಾನ ಪತ್ರಗಳಲ್ಲಿ ಸುದ್ದಿ ಪ್ರಕಟಿಸುವಿಕೆ, ಬಾನುಲಿಗಳ ಮೂಲಕ ಬಿತ್ತರಣೆ, ಸಾಮಾನ್ಯಸಭೆಯಲ್ಲಿ ಘೋಷಿಸುವಿಕೆ ಹಾಗೂ ಭಿತ್ತಿಪತ್ರ ಅಲ್ಲಲ್ಲಿ ಹಚ್ಚುವುದರ ಮೂಲಕ ಹೊಸವಿಷಯ ಅರಿವು (ಜಾಗೃತಿ) ರೈತರಲ್ಲಿ ಮೂಡಲಿಕ್ಕೆ ಸಹಾಯವಾಗುತ್ತವೆ. ಆದುದರಿಂದ ವಿಸ್ತರಣ ಕಾರ್ಯಕರ್ತನು ಈ ಎಲ್ಲ ಇಲ್ಲವೆ ಕೆಲವು ವಿಸ್ತರಣ ಪದ್ಧತಿಗಳನ್ನು ಸರಿಯಾಗಿ ಸಂಯೋಜಿಸಿ ರೈತರಲ್ಲಿ ಅರಿವು ಹುಟ್ಟಿಸಲಿಕ್ಕೆ ಉಪಯೋಗಿಸಬೇಕು.

(ii) **ಆಸಕ್ತಿ** : ಈ ಹಂತದಲ್ಲಿ ರೈತರು ಸುಧಾರಿಸಿದ ಪದ್ಧತಿಯ ಬಗ್ಗೆ ಆಸಕ್ತಿ ಮತ್ತು ಕುತೂಹಲವನ್ನು ಪಡೆಯುತ್ತಾರೆ. ಈ ಸಿದ್ಧಿಗೋಸುಗ ಚಿತ್ರ ಮತ್ತು

ಪಟ್ಟಿಗಳನ್ನೊಳಗೊಂಡ ಹಸ್ತಪತ್ರಿಕೆ, ಶೈಕ್ಷಣಿಕ ಪ್ರವಾಸ, ವಿಚಾರವಿನಿಮಯ ಸಭೆ ಈ ಪದ್ಧತಿಗಳ ಸಂಯೋಜನೆ ಬಹಳ ಅನುಕೂಲವಾಗುತ್ತದೆ.

(iii) **ಮೌಲ್ಯಮಾಪನ (ಪರಿಶೀಲನೆ):** ಈ ಹಂತದಲ್ಲಿ ರೈತರು ಸುಧಾರಿಸಿದ ಪದ್ಧತಿಗಳನ್ನು ಸ್ಥಳೀಯ ಪದ್ಧತಿಗಳೊಡನೆ ಹೋಲಿಸಿ, ಅನುಕೂಲ, ಪ್ರತಿಕೂಲಗಳನ್ನು ಮಾನಸಿಕವಾಗಿ ಅಳೆಯುತ್ತಾರೆ. ಆದುದರಿಂದ ರೈತರಿಗೆ ಸುಧಾರಿಸಿದ ಪದ್ಧತಿಯ ಬಗ್ಗೆ ನಂಬಿಕೆಯನ್ನುಂಟುಮಾಡಲು ಮತ್ತು ಮನದಟ್ಟುಮಾಡಲು ಸಾಧ್ಯವಿರುವ ಪರಿಣಾಮ ಪ್ರಾತ್ಯಕ್ಷಿಕೆ, ಕ್ಷೇತ್ರದರ್ಶನ ಹಾಗೂ ಕ್ಷೇತ್ರೋತ್ಸವಗಳು ಕೆಲವು ವಿಸ್ತರಣ ಶಿಕ್ಷಣ ಪದ್ಧತಿಗಳ ಸೂಕ್ತಸಂಯೋಜನೆಗೈದು ಉಪಯೋಗಿಸುವುದು ಅವಶ್ಯವಿದೆ.

(iv) **ಪ್ರಯೋಗಾಚರಣೆ:** ಈ ಹಂತದಲ್ಲಿ ರೈತನು ಸುಧಾರಿಸಿದ ಪದ್ಧತಿಯನ್ನು ತನ್ನ ಪರಿಸರದಲ್ಲಿ ಸೀಮಿತವಾಗಿ ಆಚರಿಸುತ್ತಾನೆ. ಈ ಆಚರಣೆಯ ಫಲಿತಾಂಶ, ರೈತನು ಆ ಪದ್ಧತಿಯನ್ನು ಸಂಪೂರ್ಣವಾಗಿ ಅಳವಡಿಸಿಕೊಳ್ಳುವುದರ ಮೇಲೆ ಪರಿಣಾಮ ಬೀರುತ್ತದೆ. ಈ ಹಂತದಲ್ಲಿ ವಿಸ್ತರಣ ಕಾರ್ಯಕರ್ತನು ಮುಖ್ಯವಾಗಿ ರೈತರ ಹೊಲಮನೆಗಳಿಗೆ ಭೆಟ್ಟಿನೀಡಿ ಅವರಿಗೆ ಸರಿಯಾದ ಪ್ರಾತ್ಯಕ್ಷಿಕೆ ಏರ್ಪಡಿಸಿ, ಇನ್ನೂ ಕೆಲ ಮಾಹಿತಿ ಕೊಡುವುದು ಅಗತ್ಯವಾಗಿದೆ. ಆದುದರಿಂದ, ವಿಸ್ತರಣ ಕಾರ್ಯಕರ್ತನು ಈ ಪದ್ಧತಿಗಳನ್ನು ಸರಿಯಾಗಿ ಸಂಯೋಜಿಸಿ ಈ ಹಂತದಲ್ಲಿ ಉಪಯೋಗಿಸಬೇಕು.

(v) **ಅನುಸರಣೆ ಅಥವಾ ನಿರಾಕರಣೆ :** ಪ್ರಯೋಗಾಚರಣೆಯ ನಂತರವೇ ಸುಧಾರಿಸಿದ ಪದ್ಧತಿಯ ಪೂರ್ಣ ಉಪಯೋಗ ಅಥವಾ ನಿರಾಕರಣೆ ನಡೆಯುತ್ತದೆ. ಈ ಹಂತದಲ್ಲಿ ಅನುಸರಣೆಯ ಪ್ರಯೋಜನಗಳನ್ನು ದೃಷ್ಟಾಂತಗಳ ಮೂಲಕ ರೈತರಿಗೆ ವಿವರಿಸಬೇಕು.

(3) ವಿಸ್ತರಣ ಕಾರ್ಯಕರ್ತನ ಜಾಣತನ ಮತ್ತು ತರಬೇತಿ:

ವಿಸ್ತರಣ ಶಿಕ್ಷಣ ಪದ್ಧತಿಗಳ ಸರಿಯಾದ ಸಂಯೋಜನೆ ವಿಸ್ತರಣ ಶಿಕ್ಷಕನ ಜಾಣತನ ಮತ್ತು ತರಬೇತಿಯ ಮೇಲೂ ಅವಲಂಬಿಸಿರುತ್ತದೆ. ವಿಸ್ತರಣ ಶಿಕ್ಷಕನು ಸರಿಯಾದ ತರಬೇತಿ ಪಡೆದು, ಸೂಕ್ಷ್ಮಮತಿಯಾಗಿದ್ದರೆ ವಿಸ್ತರಣ ಶಿಕ್ಷಣ ಪದ್ಧತಿಗಳನ್ನು, ಸಂದರ್ಭಕ್ಕೆ ತಕ್ಕಂತೆ ಸಂಯೋಜಿಸಿ ಉಪಯೋಗಿಸುತ್ತಾನೆ.

ವಿಸ್ತರಣ ಶಿಕ್ಷಣ ಪದ್ಧತಿಗಳ ಸಂಯೋಜನೆ ಸೂತ್ರ

ಯಾವುದೇ ಸುಧಾರಿಸಿದ ಕೃಷಿ ಪದ್ಧತಿಯ ಅಂಗೀಕಾರಕ್ಕೆ ಮತ್ತು ಗ್ರಾಮೀಣ ಜನರಲ್ಲಿ ಉದ್ದೇಶಿತ ಬದಲಾವಣೆಗೆ ಹಲವಾರು ವಿಸ್ತರಣ ಶಿಕ್ಷಣ ಪದ್ಧತಿಗಳ ಉಪಯೋಗವಿಲ್ಲದೆ ಪ್ರೇರೇಪಣೆ ಅಸಾಧ್ಯ. ಭಾರತ ದೇಶದ ಗ್ರಾಮೀಣ ಪ್ರದೇಶದ ಪ್ರಚಲಿತ ಪರಿಸ್ಥಿತಿಗನುಗುಣವಾಗಿ ಕೆಲವು ಮುಖ್ಯ ವಿಸ್ತರಣ ಪದ್ಧತಿಗಳ ಉಪಯೋಗ

ದಲ್ಲಿ, ವಿಸ್ತರಣ ಕಾರ್ಯಕರ್ತನು ಪ್ರತಿಪದ್ಧತಿಗಳ ಬಳಕೆಯಲ್ಲಿ ನಿಯಮಿತ ಸಂಯೋಜನಾ ಸೂತ್ರವನ್ನು ಅನುಸರಿಸಬೇಕಾಗುತ್ತದೆ. ಮುಖ್ಯ ಪದ್ಧತಿಯಾದ ಎರಡೂ ತೆರನಾದ ಪ್ರಾತ್ಯಕ್ಷಿಕೆಗಳಲ್ಲಿ ಈ ಸಂಯೋಜನೆ ಎಂತಿರುವುದನ್ನು ಕೆಳಗೆ ಸ್ವಲ್ಪದರಲ್ಲಿ ವಿವರಿಸಿದೆ:

(1) ಪರಿಣಾಮ ಪ್ರಾತ್ಯಕ್ಷಿಕೆ:

(ಅ) ವಿಚಾರ ವಿನಿಮಯ ಸಭೆ

(i) ಚಕ್ಷು (ದೃಗ್ಗೋಚರ) ಸಾಧನಗಳ ಉಪಯೋಗ

(ii) ಹಸ್ತಪತ್ರಿಕೆಗಳ ಹಂಚಿಕೆ

(ಆ) ವೈಯುಕ್ತಿಕ ಭೆಟ್ಟಿ

(ಇ) ಪ್ರಾತ್ಯಕ್ಷಿಕೆ ಪ್ರಾರಂಭಿಸುವಿಕೆ ಹಾಗೂ ಮುಂದುವರೆಸುವಿಕೆ – ಕಾಲಕಾಲಕೆ, ಹಲವಾರು ಪದ್ಧತಿ ಪ್ರಾತ್ಯಕ್ಷಿಕೆಗಳು

(ಈ) ಕ್ಷೇತ್ರದರ್ಶನ

(ಉ) ಕ್ಷೇತ್ರೋತ್ಸವ

(ಊ) ಛಾಯಾಚಿತ್ರೀಕರಣ

(ಎ) ಪ್ರಾತ್ಯಕ್ಷಿಕೆಯ ಫಲಿತಾಂಶಗಳನ್ನು ಉಪಯೋಗಿಸಿಕೊಂಡು ರೇಖಾಪಟ್ಟ ಹಸ್ತಪತ್ರಿಕೆ ತಯಾರಿಕೆ ಮತ್ತು ವೃತ್ತಪತ್ರಿಕೆಗಳಲ್ಲಿ ಉಲ್ಲೇಖನ ಅಥವಾ ಬಾನುಲಿ ವರದಿ.

(2) ಪದ್ಧತಿ ಪ್ರಾತ್ಯಕ್ಷಿಕೆ :

(ಅ) ನೆರೆದ ಗುಂಪಿಗೆ ಉಪನ್ಯಾಸ

(ಆ) ದೃಗ್ಗೋಚರ ಸಾಧನಗಳ ಉಪಯೋಗ

(ಇ) ಚತುರತೆಗಳನ್ನು ಕಲಿಸಲು ತರಬೇತಿ


(ಈ) ಹಸ್ತಪತ್ರಿಕೆಗಳು

(ಉ) ಪುನರ್‌ಭೆಟ್ಟಿಗಳು

ಶಿಕ್ಷಣ ಪದ್ಧತಿಗಳ ಅನುಭವ ಶಿಖರ

ವಿವಿಧ ಶಿಕ್ಷಣ ಪದ್ಧತಿಗಳನ್ನು ಉಪಯೋಗಿಸಿ ಪಡೆದ ಅನುಭವದ ಮೇಲೆ

ಒಂದು ರೇಖಾಚಿತ್ರ ರೂಪದಲ್ಲಿ ಶಿಕ್ಷಣ ಪದ್ಧತಿಗಳನ್ನು ಪ್ರಸಿದ್ಧ ಶಿಕ್ಷಣ ತಜ್ಞರಾದ



ಚಿತ್ರ 37 : ಶಿಕ್ಷಣ ಪದ್ಧತಿಗಳ ಅನುಭವ ಶಿಖರ

(ಕೃಪೆ : ಎಡ್ಗರ್ ಡೇಲ್)

ಎಡ್ಗರ್ ಡೇಲ್ ವರ್ಗೀಕರಿಸಿದ್ದಾರೆ. ಇದನ್ನು ಶಿಕ್ಷಣ ಪದ್ಧತಿಗಳ ಅನುಭವ ಶಿಕ್ಷಣವೆಂದು ಕರೆಯುತ್ತಾರೆ.

ಅಧ್ಯಾಯ 9

ವಿಸ್ತರಣ ಶಿಕ್ಷಣ ಪದ್ಧತಿಗಳ ಕಾರ್ಯಕ್ಷಮತೆ

ಕೆಲವು ಸಂಶೋಧನೆಯ ಫಲಿತಾಂಶಗಳು

ರೈತರಿಗೆ ಸುಧಾರಿಸಿದ ಕೃಷಿ ಬಗ್ಗೆ ಶಿಕ್ಷಣ ಕೊಡುವಾಗ್ಗೆ ಅನೇಕ ಶಿಕ್ಷಣ ಪದ್ಧತಿಗಳನ್ನು ಹಾಗೂ ದೃಗ್ಗೋಚರ ಸಾಧನಗಳನ್ನು ಉಪಯೋಗಿಸಿಕೊಳ್ಳಲಾಗುತ್ತದೆ. ಯಾವ ಪದ್ಧತಿ ಅಥವಾ ಸಂಯೋಜಿತ ಪದ್ಧತಿಗಳು ಪರಿಣಾಮಕಾರಿಯಾಗಿವೆ ಅಥವಾ ಇಲ್ಲ ಎಂಬುದರ ಬಗ್ಗೆ ಹಲವಾರು ಸಂಶೋಧನ ನಡೆದಿದೆ. ಭಾರತ ಹಾಗೂ ಅಮೇರಿಕಗಳಲ್ಲಿನ ಕೆಲವು ಸಂಶೋಧನೆಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಭಾರತದಲ್ಲಿ ಸಂಶೋಧನೆಗಳು

(i) ವೈಯಕ್ತಿಕ ಪದ್ಧತಿಗಳು

ದುಬೆ (1958): ವ್ಯವಸಾಯ ಅಭಿವೃದ್ಧಿಯಲ್ಲಿಯ ಬಗೆಗಿನ ಹೊಸ ಪದ್ಧತಿಗಳನ್ನು ಅಳವಡಿಸುವಿಕೆ ಮತ್ತು ಸಹಕಾರ ಸಂಘಗಳಿಗೆ ಸೇರುವಿಕೆ, ಇವೇ ಮೊದಲಾದ ಕಾರ್ಯಸಾಧನೆಗಳಿಗೆ ರೈತರನ್ನು ಒಪ್ಪಿಸಲು ಅವರ ಹೊಲಮನೆಗಳಿಗೆ ಭೆಟ್ಟಿ ನೀಡುವುದು ಅತ್ಯುತ್ತಮ ಪದ್ಧತಿಯೆಂದು ಅಭಿಪ್ರಾಯಪಟ್ಟಿದ್ದಾರೆ.

ಸಿಂಗ್ ಮತ್ತು ಅಚೌರಿ (1962): ಹೊಲಮನೆಗಳಿಗೆ ಭೆಟ್ಟಿ, ವಿಚಾರ ವಿನಿಮಯ ಸಭೆ ಮತ್ತು ಚಲನಚಿತ್ರ ಪ್ರದರ್ಶನ ಈ ಮೂರು ವಿಸ್ತರಣ ಶಿಕ್ಷಣ ಪದ್ಧತಿಗಳ ತುಲನಾತ್ಮಕ ಅಭ್ಯಾಸಮಾಡಿ ಈ ಮೂರು ಪದ್ಧತಿಗಳಲ್ಲಿ ಹೊಲಮನೆ ಭೆಟ್ಟಿಯು ರೈತರನ್ನು ಹೊಸದೊಂದು ಪದ್ಧತಿಯ ಅಳವಡಿಕೆಯಲ್ಲಿ ಹೆಚ್ಚು ಪರಿಣಾಮಕಾರಿಯಾಗುವುದೆಂದು ಸೂಚಿಸಿದ್ದಾರೆ.

ನಾಗೋಕೆ (1964): ಸುಧಾರಿಸಿದ ಪದ್ಧತಿಗಳಾದ, ಬಿತ್ತನೆ ಬೀಜ, ಉಪಕರಣ ಮತ್ತು ರಾಸಾಯನಿಕ ಗೊಬ್ಬರ ಉಪಯೋಗಿಸುವಿಕೆಗಳಲ್ಲಿ ಆಸಕ್ತಿಯನ್ನುಂಟು ಮಾಡುವುದರಲ್ಲಿ ಹೊಲಮನೆಗಳಿಗೆ ಭೆಟ್ಟಿಯು ವೈಯುಕ್ತಿಕ ಪದ್ಧತಿಗಳಲ್ಲೆಲ್ಲ ಅತ್ಯುತ್ತಮವಾದ ಪದ್ಧತಿಯೆಂದು ತಿಳಿಸಿದ್ದಾರೆ.

ರಾವ್ ಮತ್ತು ಪಟೀಲ್ (1966): ರೈತರು ವೈಯುಕ್ತಿಕವಾಗಿ ಯಾವುದೊಂದು ಹೊಸ ಪದ್ಧತಿಯನ್ನು ಅನುಸರಿಸುವಾಗ್ಗೆ ಮೌಲ್ಯಮಾಪನ (ಪರಿಶೀಲನೆ)

ಮತ್ತು ಪ್ರಯೋಗಾಚರಣೆ ಹಂತಗಳಲ್ಲಿ ಹೊಲಮನೆಗಳಿಗೆ ಭೇಟ್ಟಿಪದ್ಧತಿಯು ಇತರ ವೈಯುಕ್ತಿಕ ಪದ್ಧತಿಗಳಿಗಿಂತ ಹೆಚ್ಚು ಪರಿಣಾಮವನ್ನುಂಟುಮಾಡುವುದೆಂದು ವರದಿ ಮಾಡಿದ್ದಾರೆ.

ಪಟೇಲ (1967): ಗ್ರಾಮಸೇವಕರು ಉಪಯೋಗಿಸಿದ ವಿಸ್ತರಣ ಶಿಕ್ಷಣ ಪದ್ಧತಿಗಳ ಬಗ್ಗೆ ಗುಜರಾತಿನ ಎರಡು ಜಿಲ್ಲೆಗಳಲ್ಲಿ ಸಂಶೋಧನೆ ನಡೆಸಿ, ಸರ್ವಸಾಮಾನ್ಯವಾಗಿ, ತಮ್ಮ ಕಾರ್ಯಸಾಧನೆಗೆ ಗ್ರಾಮಸೇವಕರು ಪದೇಪದೇ ರೈತರ ಹೊಲಮನೆಗಳಿಗೆ ಭೇಟ್ಟಿ ಶಿಕ್ಷಣ ಪದ್ಧತಿಯನ್ನು ಉಪಯೋಗಿಸುವರೆಂದೂ, ಪ್ರಾತ್ಯಕ್ಷಿಕೆ ಇಲ್ಲವೆ ಇತರ ಸಾಮೂಹಿಕ ಪದ್ಧತಿಗಳನ್ನು ಸಾಮಾನ್ಯವಾಗಿ ಉಪಯೋಗಿಸುವುದಿಲ್ಲವೆಂದೂ ತಿಳಿಸಿದ್ದಾರೆ.

ಅಗರ್‌ವಾಲ (1968): ಸುಧಾರಿಸಿದ ಪದ್ಧತಿಗಳ ಅನುಸರಣೆಯಲ್ಲಿ ಮೌಲ್ಯಮಾಪನ (ಪರಿಶೀಲನೆ) ಮತ್ತು ಪ್ರಯೋಗಾಚರಣೆ ಹಂತಗಳಲ್ಲಿ ವೈಯುಕ್ತಿಕ ಪದ್ಧತಿಗಳು ಪರಿಣಾಮಕಾರಿಯಾಗುತ್ತವೆ; ಆದರಲ್ಲಿಯೂ, ಇವು ಸಾಮಾಜಿಕ ಕಾರ್ಯಚಟುವಟಿಕೆಗಳಲ್ಲಿ ಅಧಿಕವಾಗಿ ಭಾಗವಹಿಸುವ ರೈತರ ಮತ್ತು ಹತ್ತು ಎಕರೆಗಿಂತ ಹೆಚ್ಚು ಹಿಡುವಳಿಯುಳ್ಳ ರೈತರ ಮೇಲೆ ಹೆಚ್ಚು ಪರಿಣಾಮವನ್ನುಂಟುಮಾಡುತ್ತವೆಂದೂ ಅಭಿಪ್ರಾಯಪಟ್ಟಿದ್ದಾರೆ.

ಚೌಧರಿ (1968): ವೈಯುಕ್ತಿಕ ಪದ್ಧತಿ, ವಿಚಾರವಿನಿಮಯ ಸಭೆ ಮತ್ತು ಬುಲೆಟಿನ್‌ಗಳ ಬಗ್ಗೆ ಅಧ್ಯಯನ ನಡೆಸಿ, ಇವುಗಳಲ್ಲಿ ವೈಯುಕ್ತಿಕ ಪದ್ಧತಿಗಳನ್ನು ವಿಶೇಷವಾಗಿ ಅಥವಾ ಇತರ ಪದ್ಧತಿಗಳೊಡನೆ ಸಂಯೋಜಿಸಿ ಉಪಯೋಗಿಸಿದಾಗ, ಬೇರೆಲ್ಲಾ ಪದ್ಧತಿಗಳಿಗಿಂತ ಹೆಚ್ಚಾಗಿ ಸುಧಾರಿಸಿದ ಪದ್ಧತಿಯ ಅನುಸರಣೆಯಲ್ಲಿ ಪರಿಣಾಮವಾಗುವುದೆಂದು ತಿಳಿಸಿದ್ದಾರೆ.

ದುಧನಿ ಮತ್ತು ಸೇತುರಾವ್ (1971): ಗ್ರಾಮಸೇವಕರು, ರೈತರಿಗೆ ಶಿಕ್ಷಣ ಕೊಡಲು ರೈತರ ಹೊಲಮನೆಗಳಿಗೆ ಭೇಟ್ಟಿ ಮತ್ತು ಕಛೇರಿ ಕರೆ ಈ ವಿಸ್ತರಣ ಶಿಕ್ಷಣ ಪದ್ಧತಿಗಳನ್ನು ಹೆಚ್ಚಾಗಿ ಬಳಸುತ್ತಿದ್ದಾರೆಂದು ತಿಳಿಸಿದ್ದಾರೆ.

(ii) ಗುಂಪು ಪದ್ಧತಿಗಳು

ದುಬೆ (1958): ಉತ್ತರ ಪ್ರದೇಶದ ಎರಡು ಹಳ್ಳಿಗಳಲ್ಲಿ ಅಧ್ಯಯನ ನಡೆಸಿದಾಗ ಪ್ರಾತ್ಯಕ್ಷಿಕೆಗಳು ಸುಧಾರಿಸಿದ ಪದ್ಧತಿ ಅನುಸರಣೆಯಲ್ಲಿ ರೈತರಲ್ಲಿ ಆಸಕ್ತಿ ಹುಟ್ಟಿಸಲಿಲ್ಲ ಹಾಗೂ ಅನುಸರಣೆಗೆ ಸಹಾಯ ಮಾಡಲಿಲ್ಲ. ಪ್ರಾತ್ಯಕ್ಷಿಕೆಗಳ ಫಲಿತಾಂಶಗಳೂ ಸಹ ರೈತರಲ್ಲಿ ಕುತೂಹಲ ಹುಟ್ಟಲು ಸಹಾಯ ಮಾಡಲಿಲ್ಲವೆಂದು ತಿಳಿಸಿ, ಇದಕ್ಕೆ ಕಾರಣ ಹುಡುಕುತ್ತ ರೈತರು ಪ್ರಾತ್ಯಕ್ಷಿಕೆಗಳು ಸರ್ಕಾರದ ಮಾಮೂಲಿನ

ತಾತ್ಕಾಲಿಕವಾದ ಕಾರ್ಯಕ್ರಮಗಳು ಹಾಗೂ ಅವು ಜ್ಞಾನಾರ್ಜನೆಯ ಸನ್ನಿವೇಶವಾಗದೆ ಕೇವಲ ಮೇಲಿನ ಅಧಿಕಾರಿಗಳನ್ನು ಮೆಚ್ಚಿಸಲು ವಿಸ್ತರಣ ಕಾರ್ಯಕರ್ತರು ಏರ್ಪಡಿಸಿದ ಸನ್ನಿವೇಶಗಳೆಂದು ಅಭಿಪ್ರಾಯಪಟ್ಟರೆಂದು ತಿಳಿಸಿದ್ದಾರೆ.

ದುಬೆ (1958): ರೈತರು ಪ್ರಾತ್ಯಕ್ಷಿಕೆಗಳನ್ನು ತಮ್ಮ ಜಮೀನಿನಲ್ಲಿ ಏರ್ಪಡಿಸಲು ಕಾರಣವೇನು ಎಂಬುದರ ಬಗ್ಗೆ ಸಂಶೋಧನೆ ನಡೆಯಿಸಿ ಪ್ರಾತ್ಯಕ್ಷಿಕೆಗಳನ್ನು ನಡೆಯಿಸುವ ರೈತರ ಆಯ್ಕೆ ಹೆಚ್ಚಾಗಿ ವಿಸ್ತರಣ ಕೆಲಸಗಾರರ ಪೂರ್ವಯೋಜಿತ ಇಚ್ಛೆಯಂತೆ ನಡೆಯುತ್ತವೆಂದೂ, ಪ್ರಾತ್ಯಕ್ಷಿಕೆ ನೆರವೇರಿಸಲು ಒಪ್ಪಿಕೊಂಡ ರೈತರು ಪುಕ್ಕಟೆಯಾಗಿ ಬಿತ್ತನೆ ಬೀಜ, ರಾಸಾಯನಿಕ ಗೊಬ್ಬರ ಇತ್ಯಾದಿಗಳು ದೊರಕುತ್ತವೆಂದೂ ಅಭಿಪ್ರಾಯಪಟ್ಟಿದ್ದಾರೆ.

ದೇಶಮುಖ್ ಮತ್ತು ರಹೇಜ (1963): ಸುಧಾರಿಸಿದ ಪದ್ಧತಿಗಳಾದ ಉತ್ತಮ ಬಿತ್ತನೆ ಬೀಜ, ರಾಸಾಯನಿಕ ಗೊಬ್ಬರ ಮತ್ತು ಕೃಷಿ ಉಪಕರಣಗಳ ಅಂಗೀಕಾರದಲ್ಲಿ ಪ್ರಾತ್ಯಕ್ಷಿಕೆಗಳ ಪಾತ್ರದ ಬಗ್ಗೆ ಅಧ್ಯಯನ ನಡೆಸಿ, ಪ್ರಾತ್ಯಕ್ಷಿಕೆಗಳು ಸಮಂಜಸವಾಗಿ ಪೂರ್ವಯೋಜಿತಗೊಂಡಿರಲಿಲ್ಲ, ಪ್ರಾತ್ಯಕ್ಷಿಕೆಗಾರರ ಆಯ್ಕೆ ಯೋಗ್ಯ ರೀತಿಯಲ್ಲಿರಲಿಲ್ಲ, ಕ್ಷೇತ್ರಸಂದರ್ಶನಗಳು ಸಮರ್ಪಕವಾಗಿ ಏರ್ಪಟ್ಟಿರಲಿಲ್ಲ ಮತ್ತು ಸ್ಥಳೀಯ ಮುಖಂಡತ್ವ ಕಾರ್ಯಕ್ರಮಗಳಲ್ಲಿ ಭಾಗಿಯಾಗಿರಲಿಲ್ಲವೆಂದು ತಿಳಿಸುತ್ತ, ಪ್ರಾತ್ಯಕ್ಷಿಕೆಯ ಉದ್ದೇಶವನ್ನು ರೈತರಿಗೆ ಮನನಮಾಡಿಕೊಡದಿರುವುದು ಮತ್ತು ಯೋಗ್ಯವಲ್ಲದ ಜಮೀನನ್ನು ಪ್ರಾತ್ಯಕ್ಷಿಕೆಗೆ ಆರಿಸಿದ್ದುದು ಪ್ರಾತ್ಯಕ್ಷಿಕೆಯ ಗುಣಮಟ್ಟ ಮತ್ತು ಪರಿಣಾಮ ಕಡಿಮೆಯಾಗಲು ಕಾರಣಗಳೆಂದು ಅಭಿಪ್ರಾಯಪಟ್ಟಿದ್ದಾರೆ.

ನಾಗೋಕೆ (1964): ಉಪನ್ಯಾಸ ಸಭೆಗಳು, ಇತರ ಗುಂಪು ಪದ್ಧತಿಗಳಿಗಿಂತ ಸುಧಾರಿಸಿದ ಬಿತ್ತನೆ ಬೀಜ ಮತ್ತು ಸಾಲು ಬಿತ್ತನೆಯ ಅನುಸರಣೆಯಲ್ಲಿ ಅತ್ಯುತ್ತಮ ಪರಿಣಾಮಕಾರಿಯಾಗಿದ್ದವೆಂದು ತಿಳಿಸಿದ್ದಾರೆ.

ಜಾಲಿಹಾಳ್ (1965): ಖುಷ್ಕಿ ರಾಗಿ ಬೆಳೆಗೆ ರಾಸಾಯನಿಕ ಗೊಬ್ಬರಗಳನ್ನು ಉಪಯೋಗಿಸುವ ಶಿಕ್ಷಣ ಕಾರ್ಯಕ್ರಮದಲ್ಲಿ, ರೈತರ ಖರ್ಚಿನಲ್ಲೇ ಏರ್ಪಡಿಸಿದ ಪ್ರಾತ್ಯಕ್ಷಿಕೆಗಳು ಬಹು ಪರಿಣಾಮವನ್ನುಂಟುಮಾಡಿದವೆಂದು ವರದಿಮಾಡಿದ್ದಾರೆ.

ಸಿಂಗ್ ಮತ್ತು ಕುಮಾರ್ (1965): ಪ್ರಾತ್ಯಕ್ಷಿಕೆಯ ಬಗ್ಗೆ ಅಧ್ಯಯನ ನಡೆಸಿ ಎಲ್ಲ ಗ್ರಾಮಸೇವಕರು ಮತ್ತು ಶೇಕಡ 85 ರಷ್ಟು ಪ್ರಾತ್ಯಕ್ಷಿಕೆಗಾರರು, ಪ್ರಾತ್ಯಕ್ಷಿಕೆಯು, ಒಂದು ಉತ್ತಮ ಶಿಕ್ಷಣ ಪದ್ಧತಿಯೆಂದು ಒಪ್ಪಿಕೊಂಡಾಗ್ಯೂ, ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದರಲ್ಲಿ ಅವಶ್ಯವಾದ ಹಂತಗಳನ್ನು ಮತ್ತು ತಾಂತ್ರಿಕ ಕೌಶಲ್ಯಗಳನ್ನು ಯಾರೂ ಸರಿಯಾಗಿ ಅರ್ಥಮಾಡಿಕೊಂಡಿರಲಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ.

ಮಹಾಜನ್ (1966): ಕೆಲವು ಆಯ್ಕೆಮಾಡಿದ ಗುಂಪು ಪದ್ಧತಿಗಳ ಬಗ್ಗೆ ಅಧ್ಯಯನ ನಡೆಸಿ, ಹತ್ತಿಬೀಜಕ್ಕೆ ಬೀಜೋಪಚಾರ ಅನುಸರಿಸುವುದರಲ್ಲಿ, ಪದ್ಧತಿ ಪ್ರಾತ್ಯಕ್ಷಿಕೆಯ ಬೇರೆ ಪದ್ಧತಿಗಳಿಗಿಂತ ಪರಿಣಾಮಕಾರಿಯಾಗಿತ್ತೆಂದು ತಿಳಿಸಿದ್ದಾರೆ.

ನಿಗಮ್ (1966): ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಲು ಯಾವ ರೈತರೂ ಸ್ವಯಂಪ್ರೇರಣೆಯಿಂದ ಮುಂದೆ ಬರಲಿಲ್ಲ; ಪ್ರಾತ್ಯಕ್ಷಿಕೆಗಳ ಪ್ರಾರಂಭ ಮತ್ತು ಇತರ ಹಂತಗಳಲ್ಲಿ ಕೇವಲ ಪ್ರಾತ್ಯಕ್ಷಿಕೆಗಾರರು ಮಾತ್ರ ಹಾಜರಿದ್ದರು ಎಂದು ವರದಿಮಾಡಿದ್ದಾರೆ.

ರಾವ್ ಮತ್ತು ಪಟೇಲ್ (1966): ಸುಧಾರಿಸಿದ ಪದ್ಧತಿಗಳ ಹಲವು ಅನುಸರಣೆಯ ಅರಿವು (ಜಾಗೃತಿ) ಮತ್ತು ಆಸಕ್ತಿ ಹಂತಗಳಲ್ಲಿ, ಪ್ರಾತ್ಯಕ್ಷಿಕೆಗಳು ಅತಿ ಪರಿಣಾಮಕಾರಿಯಾಗಿದ್ದವೆಂದು ವರದಿಮಾಡಿದ್ದಾರೆ.

ಅಗರವಾಲ್ (1968): ಕೆಲವು ಸುಧಾರಿಸಿದ ಪದ್ಧತಿಯ ಅನುಸರಣೆಯ ಅರಿವು (ಜಾಗೃತಿ) ಮತ್ತು ಆಸಕ್ತಿ ಹಂತಗಳಲ್ಲಿ, ಗುಂಪು ಪದ್ಧತಿಗಳು ಪರಿಣಾಮಕಾರಿಯಾಗಿದ್ದವಲ್ಲದೆ 35 ವರ್ಷ ವಯಸ್ಸಿನೊಳಗೆ ಇದ್ದ ರೈತರಿಗೆ ಈ ಪದ್ಧತಿಗಳು ಹೆಚ್ಚು ಹಿಡಿಸಿದ್ದವೆಂದು ತಿಳಿಸಿದ್ದಾರೆ.

ಲಾಹೋರಿಯಾ (1968): ಪ್ರಾತ್ಯಕ್ಷಿಕೆಗಳು ಯಾವುದೊಂದು ಹೊಸ ಪದ್ಧತಿ ಆಚರಣೆಯ ಆಸಕ್ತಿ ಹಂತದಲ್ಲಿ ಮುಖ್ಯವಾದ ಸುದ್ದಿಮಾಧ್ಯಮವಾಗಿತ್ತೆಂದು ವರದಿಮಾಡಿದ್ದಾರೆ.

ರಾಯ್ (1970): ವಿಚಾರವಿನಿಮಯ ಸಭೆಯು 35 ವರ್ಷದೊಳಗಿರುವ ರೈತರಿಗೆ ಮತ್ತು 5–15 ಎಕರೆ ಹಿಡುವಳಿ ಪರಿಮಿತಿ ಇರತಕ್ಕಂಥ ರೈತರಿಗೆ ಉಪಯುಕ್ತವಾಗಿತ್ತು. ಇದಲ್ಲದೆ ಉಪನ್ಯಾಸ ಸಭೆಯು 25 ವರ್ಷದೊಳಗಿರುವ ಮತ್ತು 35 ವರ್ಷದ ಮೇಲಿರುವ ರೈತರಿಗೆ ಅಷ್ಟು ಪರಿಣಾಮಕಾರಿಯಾಗಿ ಕಂಡುಬರಲಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ.

ಸೇತುರಾವ್ ಮತ್ತು ಇತರರು (1971): ಸುಧಾರಿಸಿದ ಕೃಷಿ ಪದ್ಧತಿಗಳ ಪರಿಣಾಮವನ್ನು ರೈತರಿಗೆ ಮನವರಿಕೆ ಮಾಡಲು ಪರಿಣಾಮ ಪ್ರಾತ್ಯಕ್ಷಿಕೆಗಳು ಬಹಳ ಫಲಪ್ರದವಾಗಿದ್ದವೆಂದು ತಿಳಿಸಿದ್ದಾರೆ.

ವೀರಭದ್ರಯ್ಯ (1969): ಹೈಬ್ರಿಡ್ ಮುಸುಕಿನ ಜೋಳದ ಬಗ್ಗೆ ಮಾಹಿತಿ ಪಡೆಯಲು ರೈತರು, ನೆರೆಹೊರೆಯವರು ಮತ್ತು ಗ್ರಾಮಸೇವಕರ ಮೇಲೆ ಅವಲಂಬಿಸಿದ್ದರೆಂದು ವರದಿಮಾಡಿದ್ದಾರೆ.

ವೀರಭದ್ರಯ್ಯ ಮತ್ತು ಸೇತುರಾವ್ (1971): ರೈತರಿಗೆ ಸುಧಾರಿಸಿದ ಕೃಷಿ ಪದ್ಧತಿಗಳ ಬಗ್ಗೆ ಮಾಹಿತಿ ಕೊಡುವುದರಲ್ಲಿ ಗ್ರಾಮಸೇವಕ, ಕೃಷಿ ವಿಸ್ತರಣ ಅಧಿಕಾರಿ ಮತ್ತು ಸಹಕಾರ ಸಂಘಗಳು ಬಹಳ ಪ್ರಯೋಜನಕಾರಿಗಳಾಗಿದ್ದರೆಂದು ತಿಳಿಸಿದ್ದಾರೆ.

ದುಧನಿ ಮತ್ತು ಸೇತುರಾವ್ (1971): ಗುಂಪು ಪದ್ಧತಿಗಳಾದ, ಪದ್ಧತಿ ಪ್ರಾತ್ಯಕ್ಷಿಕೆ, ಪರಿಣಾಮ ಪ್ರಾತ್ಯಕ್ಷಿಕೆ ಮತ್ತು ವಿಚಾರವಿನಿಮಯ ಸಭೆಗಳನ್ನು ಗ್ರಾಮ ಸೇವಕರು ಹೆಚ್ಚಾಗಿ ತಮ್ಮ ಕಾರ್ಯನಿರ್ವಹಣೆಯ ಕೆಲಸದಲ್ಲಿ ಉಪಯೋಗಿಸಿದರೆಂದು ತಿಳಿಸುತ್ತಾರೆ.

(iii) ಸಾಮೂಹಿಕ ಪದ್ಧತಿಗಳು

ನಾಗೋಕೆ (1964): ಸುಧಾರಿಸಿದ ಕೃಷಿ ಪದ್ಧತಿಗಳ ಅನುಸರಣೆಯಲ್ಲಿ ಪ್ರಭಾವ ಬೀರಿದ ವಿಸ್ತರಣ ಶಿಕ್ಷಣ ಪದ್ಧತಿಗಳ ವಿಷಯವಾಗಿ ಅಮೃತಸರ ಜಿಲ್ಲೆಯಲ್ಲಿ ಸಂಶೋಧನೆ ನಡೆಸಿ, ಕೆಲವು ಸಾಮೂಹಿಕ ಪದ್ಧತಿಗಳಾದ ವೈಯುಕ್ತಿಕ ಪತ್ರ, ಸುದ್ದಿ ಬಿತ್ತರಣೆ ಬುಲೆಟಿನ್‌ಗಳು ಮತ್ತು ಸುತ್ತೋಲೆಗಳು ರೈತರಿಗೆ ತಿಳಿದೇ ಇರಲಿಲ್ಲವೆಂದೂ ಈ ಪದ್ಧತಿಗಳನ್ನು ಉಪಯೋಗಿಸಲು ವಿಸ್ತರಣ ಸಂಸ್ಥೆಗಳು ಯಾವ ಪ್ರಯತ್ನವನ್ನೂ ಮಾಡಿರಲಿಲ್ಲವೆಂದೂ ವರದಿಮಾಡಿದ್ದಾರೆ.

ರಾವ್ ಮತ್ತು ಪಟೇಲ್ (1966) ಹಾಗೂ **ಅಗರ್‌ವಾಲ್** (1968): ವಸ್ತುಪ್ರದರ್ಶನ ಮತ್ತು ಬಾನುಲಿಗಳು, ರೈತರಲ್ಲಿ ಸುಧಾರಿಸಿದ ಪದ್ಧತಿಗಳ ಬಗ್ಗೆ ಅರಿವು (ಜಾಗೃತಿ) ಮತ್ತು ಆಸಕ್ತಿಯನ್ನುಂಟುಮಾಡುವುದರಲ್ಲಿ ಬಹಳ ಪರಿಣಾಮಕಾರಿ ಯಾಗಿದ್ದವೆಂದು ತಿಳಿಸಿದ್ದಾರೆ.

ಅಗರವಾಲ್ (1968): ಪ್ರೌಢಶಾಲೆ ಮತ್ತು ಕಾಲೇಜಿನಲ್ಲಿ ಕಲಿತ ರೈತರು ಸಾಮೂಹಿಕ ಪದ್ಧತಿಗಳು ಸುಧಾರಿಸಿದ ಪದ್ಧತಿಗಳ ಅನುಸರಣೆಯಲ್ಲಿ ತುಂಬ ನೆರವಾದ ವೆಂದು ತಿಳಿಸಿದ್ದಾರೆ.

(iv) ಚಕ್ಷು (ದೃಗ್ಗೋಚರ) ಮತ್ತು ಶ್ರವಣ ಸಾಧನಗಳ ಉಪಯೋಗದಲ್ಲಿ ಸಂಶೋಧನೆ:

ನಾಗೋಕೆ: (1964): ಒಂದು ಸಮುದಾಯ ಅಭಿವೃದ್ಧಿ ಕ್ಷೇತ್ರದಲ್ಲಿ ಸಂಶೋಧನೆ ನಡೆಸಿ, ಉತ್ತಮ ಬಿತ್ತನೆಬೀಜ ಮತ್ತು ರಾಸಾಯನಿಕ ಗೊಬ್ಬರದ ಅನುಸರಣೆಯಲ್ಲಿ ವಸ್ತುಪ್ರದರ್ಶನ ಮತ್ತು ಚಲನಚಿತ್ರಗಳು ಬಹಳ ಪರಿಣಾಮಕಾರಿ ಯಾಗಿದ್ದವೆಂದು ತಿಳಿಸಿದ್ದಾರೆ.

ರಾವ್ (1965): ಸಮುದಾಯ ಅಭಿವೃದ್ಧಿ ಕ್ಷೇತ್ರಗಳಲ್ಲಿ ಚಕ್ಷು (ದೃಗ್ಗೋಚರ) ಮತ್ತು ಶ್ರವಣ ಸಾಧನಗಳ ಉಪಯೋಗದ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ ಒಂದು ಅಧ್ಯಯನ ನಡೆಸಿ, ಈ ರೀತಿಯಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಸಾಮಾನ್ಯವಾಗಿ ಎಲ್ಲ ಅಭಿವೃದ್ಧಿ ಕ್ಷೇತ್ರ ಛಾಯಾಚಿತ್ರ, ರೇಖಾಪಟಗಳನ್ನು ಹೊಂದಿದ್ದರೂ, 90 ಭಾಗ ವಿಸ್ತರಣ ಕಾರ್ಯಕರ್ತರು ಈ ಸಾಧನಗಳನ್ನು ಉಪಯೋಗಿಸುತ್ತಿರಲಿಲ್ಲ; ಶೇಕಡ 40 ರಷ್ಟು ಕ್ಷೇತ್ರ ಮಾತ್ರಗಳು ಸ್ಫುರಣಪಟ, ಫ್ಲಿಪ್‌ಪಟ, ಜಾರುಪಟಲ, ಲಘು ಚಿತ್ರಪಟ ಮತ್ತು ಫ್ಲಾನಲ್ ಪಟಗಳನ್ನು ಹೊಂದಿದ್ದವು; ಪ್ರತಿ ನಾಲ್ಕು ವಿಸ್ತರಣ ಕಾರ್ಯಕರ್ತರಲ್ಲಿ ಮೂವರು ಚಕ್ಷು ಮತ್ತು ಶ್ರವಣ ಸಾಧನಗಳ ಉಪಯೋಗದಲ್ಲಿ ತರಬೇತಿ ಬೇಕೆಂದು ಹೇಳಿದರು.

ರಾವ್ (1965): ವಿಸ್ತರಣ ತರಬೇತಿ ಕೇಂದ್ರಗಳಲ್ಲಿ ಗ್ರಾಮಸೇವಕರಿಗೆ ಶಿಕ್ಷಣ ಕೊಡುವಾಗ್ಗೆ ಚಕ್ಷು ಮತ್ತು ಶ್ರವಣ ಸಾಧನಗಳ ಉಪಯೋಗದ ಬಗ್ಗೆ ಒಂದು ಅಧ್ಯಯನ ನಡೆಸಿ ಕೇವಲ ಕೆಲವೇ ಶಿಕ್ಷಕರು ಈ ಸಾಧನಗಳ ಉಪಯೋಗದ ಬಗ್ಗೆ ತಿಳುವಳಿಕೆ ಹೊಂದಿದ್ದರೆಂದೂ, ಅವರಲ್ಲಿ ಪ್ರತಿಯೊಬ್ಬನು ಕಪ್ಪುಹಲಗೆಯನ್ನು ಮಾತ್ರ ವಿಶೇಷವಾಗಿ ಉಪಯೋಗಿಸುತ್ತಿದ್ದನೆಂದೂ, ಅವರಲ್ಲಿ ಅರ್ಧಕ್ಕಿಂತಲೂ ಹೆಚ್ಚಿನ ಶಿಕ್ಷಕರು ಈ ಸಾಧನಗಳನ್ನು ತಯಾರಿಸುತ್ತಿರಲಿಲ್ಲವೆಂದೂ ತಿಳಿಸಿದ್ದಾರೆ.

ರೆಡ್ಡಿ (1967): ಆಂಧ್ರಪ್ರದೇಶದಲ್ಲಿ ಈ ಸಾಧನಗಳ ಪರಿಣಾಮಕತೆಯ ಬಗ್ಗೆ ಅಧ್ಯಯನ ನಡೆಯಿಸಿ, ರೈತರಿಗೆ ಸುದ್ದಿಬಿತ್ತರಣೆ ಮಾಡುವುದರಲ್ಲಿ ಎಸ್ತರಣ ಕಾರ್ಯಕರ್ತರು ಚಕ್ಷು ಮತ್ತು ಶ್ರವಣ ಸಾಧನಗಳನ್ನು ಬಹಳ ವಿರಳವಾಗಿ ಉಪ ಯೋಗಿಸಿದರೆಂದು ವರದಿ ಮಾಡಿದ್ದಾರೆ.

ರಾವ್ (1967): ಯಾವ ಆಳತೆಯ ಭಿತ್ತಿಪತ್ರ ಹೆಚ್ಚು ಪರಿಣಾಮಕಾರಿ ಯೆಂಬ ವಿಷಯದ ಬಗ್ಗೆ ಅಧ್ಯಯನ ನಡೆಯಿಸಿ, 44 ಅಂಗುಲ ಉದ್ದ 28 ಅಂಗುಲ ಅಗಲವಿದ್ದು ಅದರಲ್ಲಿ 2 ಅಂಗುಲ ಅಳತೆಯ ಅಕ್ಷರಗಳಿದ್ದರೆ ಬಹಳ ಪರಿಣಾಮಕಾರಿ ಯಾಗಿರುತ್ತದೆಂದು ತಿಳಿಸಿದ್ದಾರೆ.

ರಾಷ್ಟ್ರೀಯ ಶಿಕ್ಷಣ ಸಂಸ್ಥೆ (1968): ಗ್ರಾಮೀಣ ಟೆಲಿವಿಷನ್ ಬಗ್ಗೆ ಅಧ್ಯಯನ ನಡೆಸಿ, ರೈತರನ್ನು ಸುಧಾರಿಸಿದ ಪದ್ಧತಿಗಳನ್ನು ಅನುಸರಿಸಲು ಪ್ರೇರೇಪಿ ಸುವುದರಲ್ಲಿ ಟೆಲಿವಿಷನ್ ಕಾರ್ಯಕ್ರಮಗಳು ಬಹಳ ಪರಿಣಾಮಕಾರಿಯಾಗಿದ್ದವೆಂದು ವರದಿಮಾಡಿದೆ.

ರಾವ್ (1969): ದಿಲ್ಲಿಯ ಕಾಂಜವಾಲ ಅಭಿವೃದ್ಧಿ ಕ್ಷೇತ್ರದ ರೈತರಿಗೆ ಹೈಬ್ರಿಡ್ ಮುಸುಕಿನ ಜೋಳದ ಮಾಹಿತಿ ಹರಡುವಿಕೆಯಲ್ಲಿ ಚಕ್ಷುಸಾಧನಗಳ ಪರಿ ಣಾಮಕತೆಯ ಬಗೆಗಿನ ಅಧ್ಯಯನದಲ್ಲಿ ಹನ್ನೊಂದು ದೃಗ್ಗೋಚರ ಸಾಧನಗಳನ್ನು

ವಿವಿಧ ಸಂಯೋಜನೆಯಲ್ಲಿ ಉಪಯೋಗಿಸಿ, ಭಿತ್ತಿಪತ್ರ ಮತ್ತು ಬುಲೆಟಿನ್‌ಗಳು, ಕೇವಲ ಉಪನ್ಯಾಸಕ್ಕಿಂತ ಪರಿಣಾಮಕಾರಿಯಾಗಿದ್ದವೆಂದೂ, ಜಾರುಪಟಲ ಮತ್ತು ಲಘುಚಿತ್ರಪಟಗಳು ಹೈಬ್ರಿಡ್ ಮುಸುಕಿನ ಜೋಳವನ್ನು ಬೆಳೆಯಲು ರೈತರಲ್ಲಿ ಪ್ರೇರಣೆಯನ್ನುಂಟುಮಾಡಿದವೆಂದೂ, ಲಿಖಿತ ಮಾಹಿತಿಯನ್ನೊಳಗೊಂಡ ಎಲ್ಲ ಚಕ್ಷು ಸಾಧನಗಳಲ್ಲಿ ಛಾಯಾಚಿತ್ರ ಮತ್ತು ಪ್ಲಾನಲ್ ಗ್ರಾಫ್‌ಗಳು ಅತಿಹೆಚ್ಚಿನ ಪರಿಣಾಮ ವನ್ನುಂಟುಮಾಡಿದವೆಂದೂ ವರದಿಮಾಡಿದ್ದಾರೆ.

(v) ವಿಸ್ತರಣ ಶಿಕ್ಷಣ ಪದ್ಧತಿಗಳ ಸಂಯೋಜನೆಯಲ್ಲಿ ಸಂಶೋಧನೆ:

ಸಾಗೋಕೆ (1964): ವಿಸ್ತರಣ ಶಿಕ್ಷಣ ಕಾರ್ಯಕ್ರಮದಲ್ಲಿ, ವಿಸ್ತರಣ ಶಿಕ್ಷಣ ಪದ್ಧತಿಗಳ ಸಂಯೋಜನವು ಬಹುಪರಿಣಾಮಕಾರಿಯಾಗಿರುತ್ತದೆ; ಐದಕ್ಕಿಂತ ಹೆಚ್ಚು ವಿಸ್ತರಣ ಶಿಕ್ಷಣ ಪದ್ಧತಿಗಳನ್ನು ಸಂಯೋಜಿಸಿ ಉಪಯೋಗಿಸಿದಾಗ, ಸುಧಾರಿಸಿದ ಕೃಷಿ ಪದ್ಧತಿಗಳ ಅನುಸರಣೆ ಹೆಚ್ಚಾದುದು ಕಂಡುಬಂದಿತೆಂದು ವರದಿಮಾಡಿದ್ದಾರೆ.

ಮಹಾಜನ್ (1966): ರೈತರಿಗೆ ಬೀಜೋಪಚಾರದ ಬಗ್ಗೆ ಶಿಕ್ಷಣ ಕೊಡುವಾಗ ಕೇವಲ ಉಪನ್ಯಾಸ ಪರಿಣಾಮಕಾರಿಯಾಗಲಿಲ್ಲ; ಉಪನ್ಯಾಸದ ಜೊತೆಗೆ ಸ್ಫುರಣ ಪಟಗಳನ್ನು ಉಪಯೋಗಿಸಿದಾಗ ಪರಿಣಾಮಕಾರಿಯಾಗಿತ್ತು; ಆದರೆ ಇವುಗಳ ಜೊತೆಗೆ ಪದ್ಧತಿ ಪ್ರಾತ್ಯಕ್ಷಿಕೆಯನ್ನು ಉಪಯೋಗಿಸಿದಾಗ ಶಿಕ್ಷಣ ಅತ್ಯಂತ ಪರಿಣಾಮಕಾರಿಯಾಗಿತ್ತೆಂದು ತಿಳಿಸಿದ್ದಾರೆ.

ಜಾಲಿಹಾಳ್ (1965): ಹಳ್ಳಿಗಳಲ್ಲಿ ವಿಚಾರವಿನಿಮಯ ಸಭೆಗಳಲ್ಲಿ, ಜಾರುಪಟಲ, ಚಲನಚಿತ್ರ, ದೊಡ್ಡ ಛಾಯಾಚಿತ್ರ, ಸರಳವಾದ ಪ್ಲಾನಲ್‌ಗ್ರಾಫ್ ಮತ್ತು ಒಂದು ಸಲ ಹೊಸ ಪದ್ಧತಿ ಆಚರಿಸಿದ ಪ್ರಾತ್ಯಕ್ಷಿಕೆಗಾರನನ್ನು ಉಪಯೋಗಿಸಿಕೊಂಡಾಗ ಸಭೆಗಳು ಬಹಳ ಪರಿಣಾಮಕಾರಿಯಾಗಿದ್ದವೆಂದು ವರದಿಮಾಡಿದ್ದಾರೆ.

ಮೊಹಕ್‌ಕರ್ (1966): ರೈತರ ಜ್ಞಾನಮಟ್ಟ, ಚತುರತೆ ಮತ್ತು ಮನೋಭಾವಗಳಲ್ಲಿ ಬದಲಾವಣೆ ಮಾಡಲು, ವೈಯುಕ್ತಿಕ ಭೆಟ್ಟಿ ಪದ್ಧತಿ ಪ್ರಾತ್ಯಕ್ಷಿಕೆ ಮತ್ತು ಹಸ್ತಪತ್ರಿಕೆಗಳ ಸಂಯೋಜನೆ ಬಹಳ ಉಪಯುಕ್ತವಾಗಿತ್ತೆಂದು ಅಭಿಪ್ರಾಯಪಟ್ಟಿದ್ದಾರೆ.

ರಾವ್ (1966): ಸುಧಾರಿಸಿದ ಕೃಷಿ ಪದ್ಧತಿಗಳನ್ನು ರೈತರಲ್ಲಿ ಬಳಕೆಗೆ ತರಲು ಕ್ಷೇತ್ರಸಂದರ್ಶನ, ಚಲನಚಿತ್ರ ಮತ್ತು ಪರಿಣಾಮ ಪ್ರಾತ್ಯಕ್ಷಿಕೆಗಳ ಸಂಯೋಜನೆ ಬಹಳ ಪರಿಣಾಮಕಾರಿಯಾಗಿತ್ತೆಂದು ಹೇಳಿದ್ದಾರೆ.

ರಾವ್ ಮತ್ತು ರಹೇಜ (1959): ವೈಯುಕ್ತಿಕ ಭೆಟ್ಟಿ, ಪ್ಲಾನಲ್‌ಗ್ರಾಫ್ ಮತ್ತು ಪದ್ಧತಿ ಪ್ರಾತ್ಯಕ್ಷಿಕೆಗಳ ಪರಿಣಾಮಕತೆಯ ಬಗ್ಗೆ ಅಧ್ಯಯನ ನಡೆಸಿ, ಈ ಮೂರು

ಪದ್ಧತಿಗಳ ಸಂಯೋಜನೆ ಬಹಳ ಪರಿಣಾಮಕಾರಿಯೆಂದು ಅಭಿಪ್ರಾಯಪಟ್ಟಿದ್ದಾರೆ.

ಹೊರದೇಶಗಳಲ್ಲಿನ ಸಂಶೋಧನೆಗಳು:

ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿನ ಕೆಲವು ಸಂಶೋಧನೆಯ ಬಗೆಗಿನ ವಿವರ ಕೊಡಲಾಗಿದೆ.

ವಿಲ್‌ಸನ್ ಮತ್ತು ಗ್ಯಾಲಪ್ (1955): ಅಮೇರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಒಬ್ಬ ವಿಸ್ತರಣ ಕಾರ್ಯಕರ್ತನು ಸರಾಸರಿ ಒಂದು ವರ್ಷಕ್ಕೆ 400 ರೈತರ ಹೊಲಮನೆಗಳಿಗೆ ಭೆಟ್ಟಿನೀಡುತ್ತಾನೆಂದು ತಿಳಿಸಿದ್ದಾರೆ.

ಸ್ಲೋನ್ (1962): ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಯಶಸ್ವೀ ವಿಸ್ತರಣ ಕಾರ್ಯಕರ್ತರು ಹೊಸ ಕೃಷಿ ಪದ್ಧತಿಗಳನ್ನು ರೈತರಿಗೆ ತಿಳಿಸಲು (ಪರಿಚಯ ಮಾಡಿಕೊಡಲು) ಹೆಚ್ಚಾಗಿ ವೈಯುಕ್ತಿಕ ಪತ್ರಗಳನ್ನು ಬರೆಯುತ್ತಾರೆಂದು ವರದಿ ಮಾಡಿದ್ದಾರೆ.

ಬ್ರುನರ್ ಮತ್ತು ಯಂಗ್ (1949): ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಒಬ್ಬ ವಿಸ್ತರಣ ಕಾರ್ಯಕರ್ತನು ಒಂದು ವರ್ಷದಲ್ಲಿ ಸರಾಸರಿ 200 ಗುಂಪು ಸಭೆಗಳನ್ನು ಏರ್ಪಡಿಸುತ್ತಾನೆಂದು ತಿಳಿಸಿದ್ದಾರೆ.

ವೈಟ್ (1960): ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಕಾರ್ಯಕ್ಷಮ ವಿಸ್ತರಣ ಕಾರ್ಯಕರ್ತರು ಸುತ್ತೋಲೆಗಳನ್ನೇ ಹೆಚ್ಚಾಗಿ ಬಳಸುತ್ತಾರೆ; ಒಂದು ವರ್ಷದಲ್ಲಿ ಸರಾಸರಿ ಒಬ್ಬ ವಿಸ್ತರಣ ಕಾರ್ಯಕರ್ತನು 1,642 ರೈತರಿಗೆ ಸುತ್ತೋಲೆಗಳನ್ನು ಬರೆಯುತ್ತಾರೆಂದು ವರದಿ ಮಾಡಿದ್ದಾರೆ,

ವಿಷಯಗಳ ಸೂಚಿ

ಪುಟ ಸಂಖ್ಯೆ

ಪಾರಿಭಾಷಿಕ ಶಬ್ದಕೋಶ

(i) ಇಂಗ್ಲೀಷ್ - ಕನ್ನಡ

A

Accident	ಕಾಕತಾಲೀಯನ್ಯಾಯ
According to form	ರೂಪಗಳಿಗನುಸಾರ
According to use	ಉಪಯೋಗಾನುಸಾರ
Action	ಚಟುವಟಿಕೆ, ಕಾರ್ಯ, ಕಾರ್ಯರೂಪಕ್ಕೆ ತರುವಿಕೆ
Adoption	ಅಂಗೀಕಾರ, ಅನುಸರಣೆ
Adult education	ಪ್ರೌಢಶಿಕ್ಷಣ
Advantages	ಪ್ರಯೋಜನ: ಲಾಭಗಳು
Agricultural development activities	ಕೃಷಿ ಅಭಿವೃದ್ಧಿ ಕಾರ್ಯಗಳು
Agricultural expert	ಕೃಷಿ ತಜ್ಞ
Agricultural extension	ಕೃಷಿ ವಿಸ್ತರಣೆ
Agricultural extension education	ಕೃಷಿ ವಿಸ್ತರಣ ಶಿಕ್ಷಣ
Agricultural extension programme	ಕೃಷಿ ವಿಸ್ತರಣ ಕಾರ್ಯಕ್ರಮ
Agricultural news bulletin	ಕೃಷಿ ಸುದ್ದಿ ಲಘುಪ್ರಕಟಣೆ
Agricultural science	ಕೃಷಿ ವಿಜ್ಞಾನ
Aid	ಸಾಧನ
Aptitude	ಮನೋಭಿಪ್ರಾಯ
Animal husbandry	ಪಶುಪಾಲನೆ
Arrange	ಅಣಿಗೊಳಿಸು
Atmosphere	ವಾತಾವರಣ
Attention	ಗಮನ, ಗಮನಸೆಳೆಯುವಿಕೆ
Audio-visual	ಶ್ರವಣ ಚಕ್ಷು
Audio-visual aid	ಶ್ರವಣ ಚಕ್ಷುಸಾಧನ
Awareness stage	ಜಾಗೃತಿ ಹಂತ, ಅರಿವು ಹಂತ

B

Back ground	ಹಿನ್ನೆಲೆ
Bar graph	ಕಂಭ ಆಲೇಖನ
Behaviour	ಮನೋಭಾವನೆ, ನಡೆವಳಿಕೆ, ವರ್ತನೆ
Black board	ಕಪ್ಪುಹಲಗೆ
Block development officer	ಕ್ಷೇತ್ರಾಭಿವೃದ್ಧಿ ಅಧಿಕಾರಿ

Bıoad nature	ಸ್ಥೂಲ ಸ್ವರೂಪ
Bulletin	ಲಘು ಪ್ರಕಟಣೆ
Bulletin board	ಪ್ರಕಟಣೆ ಹಲಗೆ, ಲಘುಪ್ರಕಟಣೆ ಹಲಗೆ

C

Cartoon	ವ್ಯಂಗ್ಯಚಿತ್ರ
Change	ಬದಲಾವಣೆ
Change in knowledge	ತಿಳಿವಳಿಕೆಯಲ್ಲಿ ಬದಲಾವಣೆ
Change in skill	ಚತುರತೆ (ಕುಶಲತೆ)ಯಲ್ಲಿ ಬದಲಾವಣೆ
Characteristics	ಗುಣಧರ್ಮಗಳು
Chart	ರೇಖಾಪಟ
Capacity	ಸಾಮರ್ಥ್ಯ
Circular letter	ಸುತ್ತೋಲೆ
Classification	ವರ್ಗೀಕರಣ
Combination	ಸಂಯೋಜನೆ
Communication	ವಿಷಯ ಬಿತ್ತರಣೆ, ಸಂಪರ್ಕ
Community development	ಸಮುದಾಯ ಅಭಿವೃದ್ಧಿ, ಸಮಾಜವಿಕಾಸ
Comparative	ತುಲನಾತ್ಮಕ
Competency	ದಕ್ಷತೆ
Conduct	ನಿರ್ವಹಣೆ, ಕೈಕೊಳ್ಳುವಿಕೆ
Cone of experience	ಅನುಭವ ಶಿಖರ
Contrived experience	ಕಲ್ಪಿತ ಅನುಭವ
Controversial	ವಿವಾದಾತ್ಮಕ
Conviction	ಮನವೊಪ್ಪಿಗೆ
Cooperation	ಸಹಕಾರ
Criticism	ವಿಮರ್ಶೆ
Crowd	ಜಂಗುಳಿ
Curtain	ಪರದೆ

D

Democratic	ಪ್ರಜಾಸತ್ತಾತ್ಮಕ
Demonstration	ಪ್ರಾತ್ಯಕ್ಷಿಕೆ
Demonstrator	ಪ್ರಾತ್ಯಕ್ಷಿಕೆಗಾರ
Desire	ಆಕಾಂಕ್ಷೆ
Development block	ಅಭಿವೃದ್ಧಿ ಕ್ಷೇತ್ರ
Devotion	ತತ್ಪರತೆ
Diagram	ಆಕೃತಿ
Difference	ವ್ಯತ್ಯಾಸ

Direct education	ಪ್ರತ್ಯಕ್ಷ ಶಿಕ್ಷಣ
Direct purposeful experience	ನೇರ ಉದ್ದೇಶದ ಅನುಭವ
Disadvantage	ನ್ಯೂನತೆ
Discussion meeting	ವಿಚಾರ ವಿನಿಮಯ ಸಭೆ, ಚರ್ಚಾಸಭೆ
Doing experience	ಕಾರ್ಯಾಚರಣೆ ಅನುಭವ
Dramatic participation	ನಟನಾತ್ಮಕ ಭಾಗವಹಿಸುವಿಕೆ, ನಾಟಕೀಯತೆ

E

Ear (Hearing sense)	ಶ್ರವಣೇಂದ್ರಿಯ, ಚಕ್ಷು, ಕಿವಿ
Eye	ಚಕ್ಷು, ದೃಕ್, ಕಣ್ಣು
Early adopter	ಅತಿಶೀಘ್ರ ಅಂಗೀಕಾರ (ಅನುಸರಣೆಗಾರ)
Education	ಶಿಕ್ಷಣ
Educational	ಶೈಕ್ಷಣಿಕ
Educational tour	ಶೈಕ್ಷಣಿಕ ಪ್ರವಾಸ
Effective	ಪರಿಣಾಮಕಾರಿ
Efficiency	ಕಾರ್ಯಕ್ಷಮತೆ
Environment	ಪರಿಸರ
Exchange of ideas	ವಿಚಾರ ವಿನಿಮಯ
Evaluation	ಮೌಲ್ಯಮಾಪನ
Evaluation stage	ಪರಿಶೀಲನೆ ಹಂತ, ಮೌಲ್ಯಮಾಪನ ಹಂತ
Exhibit	ಪ್ರದರ್ಶಿತ ವಸ್ತು
Exhibition	ವಸ್ತುಪ್ರದರ್ಶನ
Expertness	ಪರಿಣತಿ
Extension teacher	ವಿಸ್ತರಣ ಶಿಕ್ಷಕ
Extension worker	ವಿಸ್ತರಣ ಕಾರ್ಯಕರ್ತ

F

Farm and home visit	ಹೊಲಮನೆಗಳಿಗೆ ಭೇಟಿ
Field day	ಕ್ಷೇತ್ರೋತ್ಸವ
Field trip	ಕ್ಷೇತ್ರಸಂದರ್ಶನ
Film	ಚಲನಚಿತ್ರ
Film shooting	ಚಿತ್ರೀಕರಿಸು
Film strip	ಲಘು ಚಿತ್ರಪಟ್ಟಿ
Flannal graph	ಫ್ಲ್ಯಾನಲ್ ಗ್ರಾಫ್, ಉರುಟುಬಟ್ಟೆ ಚಿತ್ರಾಲೇಖನ
Flash card	ಮಿಂಚು ಪಟ, ಸ್ಫುರಣಪಟ
Flip chart	ಫ್ಲಿಪ್ ರೇಖಾಪಟ
Flow chart	ಪ್ರವಹಿಸುವ ರೇಖಾಪಟ

Folder	ಮಡಿಕೆ ಹಸ್ತಪತ್ರಿಕೆ
Follow-up visit	ಪುನರ್‌ಭೆಟ್ಟಿ
Full discussion	ಚರ್ವಿತ ಚರ್ವಣ
Functional	ಕ್ರಿಯಾಶೀಲ, ಕ್ರಿಯಾತ್ಮಕ
Fundamental principle	ಮೂಲತತ್ವ

G

General meeting	ಸಾಮಾನ್ಯ ಸಭೆ
Get acquainting visit	ಪರಿಚಯಾತ್ಮಕ ಭೇಟ್ಟಿ
Gentle	ಸಭ್ಯ
Goal	ಗುರಿ
Group method	ಗುಂಪು ಪದ್ಧತಿ

H

Hearing sense	ಶ್ರವಣೇಂದ್ರಿಯ, ಕರ್ಣೇಂದ್ರಿಯ
Horizontal education	ಬಹುಮುಖಿ ಶಿಕ್ಷಣ
Home science	ಗೃಹವಿಜ್ಞಾನ
Home maker	ರೈತಮಹಿಳೆ

I

Improved farm practice	ಸುಧಾರಿಸಿದ ಕೃಷಿ ಪದ್ಧತಿ
Individual method	ವೈಯುಕ್ತಿಕ ಪದ್ಧತಿ
Individual contact	ವೈಯುಕ್ತಿಕ ಭೇಟ್ಟಿ
Informal	ನಿರ್ಬಂಧರಹಿತ, ಔಪಚಾರಿಕ
Innovator	ಪ್ರಪ್ರಥಮ ಅಂಗೀಕಾರ, ಪೂರ್ವಾನುಸರಣೆಗಾರ
Internal model	ಆಂತರಿಕ ಮಾದರಿ
Interest stage	ಆಸಕ್ತಿ ಹಂತ

K

Knowledge	ಜ್ಞಾನ

L

Laggard	ಅತಿವಿಳಂಬ ಅಂಗೀಕಾರಿ, ಬಹುತಡಾನುಸರಣೆಗಾರ

Late adopter	ವಿಳಂಬ ಅಂಗೀಕಾರಿ, ತಡಾನುಸರಣೆಗಾರ
Leader	ಮುಂದಾಳು
Leadership	ಮುಂದಾಳುತನ
Leaflet	ಹಸ್ತಪತ್ರಿಕೆ
Learner	ಶಿಕ್ಷಣಾರ್ಥಿ
Learning by doing	ಮಾಡುತ್ತಲೇ ಕಲಿಯುವವ
Learning situation	ಕಲಿಯುವ ಸನ್ನಿವೇಶ, ಜ್ಞಾನಾರ್ಜನೆಯ ಸನ್ನಿವೇಶ
Less costly	ಕಡಮೆ ವೆಚ್ಚದ
Limitation	ಇತಿಮಿತಿ
Line graph	ರೇಖಾಪಟ
Local leader	ಸ್ಥಳೀಯ ಮುಖಂಡ
Local problem	ಸ್ಥಳೀಯ ಸಮಸ್ಯೆ

M

Magnetic board	ಚುಂಬಕ ಹಲಗೆ
Map	ನಕಾಶೆ
Mass method	ಸಾಮೂಹಿಕ ಪದ್ಧತಿ
Majority adopter	ಬಹುಮತ ಶೀಘ್ರ ಅನುಸರಣೆಗಾರ
Method demonstration	ಪದ್ಧತಿ ಪ್ರಾತ್ಯಕ್ಷಿಕೆ
Minute detail	ಸೂಕ್ಷ್ಮ ವಿವರಣೆ
Model	ಮಾದರಿ
Motion	ಚಲನೆ
Motion picture	ಚಲನಚಿತ್ರ
Multipurpose worker	ವಿವಿಧ ಉದ್ದೇಶ ಕಾರ್ಯಕರ್ತ
Museum	ವಸ್ತುಸಂಗ್ರಹಾಲಯ
Movies	ಚಲನಚಿತ್ರ

N

National demonstration	ರಾಷ್ಟ್ರೀಯ ಪ್ರಾತ್ಯಕ್ಷಿಕೆ
Newspaper	ವರ್ತಮಾನ ಪತ್ರ
Non-projected	ಅಪ್ರಕ್ಷೇಪಣ

O

Office call	ಕಛೇರಿಗೆ ಭೇಟ್ಟಿ
Organizational visit	ಸಂಘಟನಾ ಭೇಟ್ಟಿ

P

Personal letter	ವ್ಯೆಯಕ್ತಿಕ ಪತ್ರ
Physical environment	ಭೌತಿಕ ಪರಿಸರ
Pictorial graph	ಚಿತ್ರ ಆಲೇಖನ
Pie graph	ವೃತ್ತ ಆಲೇಖನ, ಪೈ-ನಕ್ಷೆ
Planning	ಯೋಜನೆ
Poster	ಭಿತ್ತಿಪತ್ರ
Practical	ಪ್ರಯೋಗಿಕ
Preplanned	ಪೂರ್ವಯೋಜಿತ
Problem	ಸಮಸ್ಯೆ
Problem solving visit	ಸಮಸ್ಯೆ ಪರಿಹಾರ ಭೆಟ್ಟಿ
Projected	ಪ್ರಕ್ಷೇಪಣ
Projector	ಪ್ರಕ್ಷೇಪಕ
Publication	ಪ್ರಕಟಣೆ
Public works department	ಲೋಕೋಪಯೋಗಿ ಇಲಾಖೆ
Purpose	ಉದ್ದೇಶ

Q

Quality	ಸ್ವರೂಪ

R

Radio	ಬಾನುಲಿ, ಆಕಾಶವಾಣಿ
Radio broadcast	ಬಾನುಲಿ ಪ್ರಸಾರ
Radio programme	ಬಾನುಲಿ ಕಾರ್ಯಕ್ರಮ
Radio station	ಬಾನುಲಿ ಕೇಂದ್ರ
Record	ದಾಖಲೆ
Rejection	ನಿರಾಕರಣೆ
Result demonstration	ಪರಿಣಾಮ ಪ್ರಾತ್ಯಕ್ಷಿಕೆ

S

Satisfaction	ಸಂತೃಪ್ತಿ
Selection	ಆಯ್ಕೆ
Sequence	ಕ್ರಮಬದ್ಧ
Simple	ಸರಳ
Site	ತಾಕು, ನಿವೇಶನ, ಪ್ಲಾಟು
Skill	ಚತುರತೆ, ಚಾತುರ್ಯ, ಕುಶಲತೆ

Slide	ಪಾರದರ್ಶಕ ಚಿತ್ರ
Social education	ಸಮಾಜ ಶಿಕ್ಷಣ
Sound	ಧ್ವನಿ
Specialists	ತಜ್ಞರು
Special article	ವಿಶಿಷ್ಟಲೇಖನ
Special occasion	ವಿಶೇಷ ಸಂದರ್ಭ
Special news article	ವಿಶೇಷ ಸುದ್ದಿಲೇಖನ
Specimen	ನೈಜವಸ್ತು
Spoken	ಮೌಖಿಕ, ಬಾಯಿಮಾತಿನ
Solid model	ಘನ ಮಾದರಿ
Stages in adoption	ಅನುಸರಣೆ (ಅಂಗೀಕಾರ) ಹಂತಗಳು
Standard	ಮಟ್ಟ
Still picture	ಸ್ಥಿರಚಿತ್ರ
Strip chart	ಎಳೆ (ತುಂಡು) ರೇಖಾಪಟ
Subject matter	ವಿಷಯ
Success attainment	ಶ್ರೇಯೋಭಿವೃದ್ಧಿ
Suited to occasion	ಸಂದರ್ಭೋಚಿತ
Syllabus	ಪಠ್ಯಕ್ರಮ
Symbolic experience	ಸಾಂಕೇತಿಕ ಅನುಭವ

T

Table chart	ಕೋಷ್ಟಕ ರೇಖಾಪಟ
Talk	ಧ್ವನಿಸಂಯೋಜಿತ
Taste	ಅಭಿರುಚಿ
Teacher	ಶಿಕ್ಷಕ
Teaching aid	ಕಲಿಸುವ ಸಾಧನ
Teaching method	ಶಿಕ್ಷಣ ಪದ್ಧತಿ, ಕಲಿಸುವ ಪದ್ಧತಿ, ಬೋಧಕ ಪದ್ಧತಿ
Teaching subject	ಬೋಧಕ ವಿಷಯ, ಕಲಿಸುವ ವಿಷಯ, ಶಿಕ್ಷಣ ವಿಷಯ
Technical visit	ತಾಂತ್ರಿಕ ಭೇಟ್ಟಿ
Telephone call	ದೂರವಾಣಿ ಕರೆ
Television	ಟೆಲಿವಿಜನ್
Time chart	ವೇಳಾ ರೇಖಾಪಟ
Time consuming	ಸಮಯನುಂಗುವ
Traditional	ಸಾಂಪ್ರದಾಯಿಕ
Traditional education	ಸಾಂಪ್ರದಾಯಿಕ ಶಿಕ್ಷಣ
Transperent	ಪಾರದರ್ಶಕ
Tree chart	ವೃಕ್ಷ ರೇಖಾಪಟ

U

Usefulness	ಉಪಯುಕ್ತತೆ

V

Value	ಮೌಲ್ಯ
Visit	ಭೆಟ್ಟಿ
Village development	ಗ್ರಾಮಾಭಿವೃದ್ಧಿ
Village industry	ಗ್ರಾಮೀಣ ಉದ್ಯೋಗ
Village level	ಗ್ರಾಮಮಟ್ಟ
Village level worker	ಗ್ರಾಮಮಟ್ಟದ ಕಾರ್ಯಕರ್ತ, ಗ್ರಾಮಸೇವಕ
Village youth	ಗ್ರಾಮೀಣ ಯುವಕ
View curtain	ವೀಕ್ಷಕ ಪಟಲ
Visual	ನೇತ್ರೇಂದ್ರಿಯ, ಚಕ್ಷೇಂದ್ರಿಯ, ದೃಗ್ಗೋಚರ
Visual aid	ನೇತ್ರೇಂದ್ರಿಯ ಸಾಧನ, ವೀಕ್ಷಕಸಾಧನ, ಚಕ್ಷುಸಾಧನ
Visual experience	ವೀಕ್ಷಾನುಭವ
Voluntary	ಸ್ವಯಂಪ್ರೇರಣೆ

W

Written	ಲಿಖಿತ

(ii) ಕನ್ನಡ–ಇಂಗ್ಲಿಷ್

ಅ

ಅಣಿಗೊಳಿಸು	Arrange
ಅಂಗೀಕಾರ, ಅನುಸರಣೆ	Adoption
ಅಂತರಿಕ ಮಾದರಿ	Internal method
ಅನುಭವ ಶಿಖರ	Cone of experience
ಅನುಸರಣೆ, ಅಂಗೀಕಾರ	Adoption
ಅನುಸರಣೆ	Stage in adoption
ಅನೌಪಚಾರಿಕ (ನಿರ್ಬಂಧರಹಿತ)	Informal
ಅತಿವಿಳಂಬ ಅಂಗೀಕಾರಿ (ಅತಿ ತಡಾನುಸರಣೆಗಾರ)	Laggard
ಅತಿಶೀಘ್ರ ಅಂಗೀಕಾರ (ಅತಿಶೀಘ್ರ ಅನುಸರಣೆಗಾರ)	Early adopters
ಅಪ್ರಕ್ಷೇಪಣ	Non-projection
ಅಭಿರುಚಿ	Taste
ಅಭಿವೃದ್ಧಿ ಕ್ಷೇತ್ರ	Development block
ಅರಿವು ಹಂತ (ಜಾಗೃತಿ ಹಂತ)	Awareness stage

ಆ

ಆಕಾಂಕ್ಷೆ	Desire
ಆಕಾಶವಾಣಿ, ಬಾನುಲಿ	Radio
ಆಕೃತಿ	Diagram
ಆಯ್ಕೆ	Selection
ಆಸಕ್ತಿ	Interest
ಆಸಕ್ತಿ ಹಂತ	Interest stage

ಇ

ಇತಿಮಿತಿ	Limitation

ಉ

ಉದ್ದೇಶ	Purpose
ಉಪಯುಕ್ತತೆ	Usefulness
ಉಪಯೋಗಾನುಸಾರ	According to use
ಉರುಟುಬಟ್ಟೆ ಚಿತ್ರಾಲೇಖನ (ಬಟ್ಟೆ ತಗಲು ಚಿತ್ರಾಲೇಖನ)	Flannal graph

ಎ

ಎಳೆ ರೇಖಾಪಟ, ತುಂಡುರೇಖಾಪಟ	Strip chart

ಕ

ಕಂಬ ಚಿತ್ರಾಲೇಖನ	Bar graph
ಕಛೇರಿ ಭೆಟ್ಟಿ	Office call
ಕಡಮೆ ವೆಚ್ಚದ	Less costly
ಕಪ್ಪುಹಲಗೆ	Black board
ಕಲ್ಪಿತ ಅನುಭವ	Contrived experience
ಕಲಿಯುವ ಸನ್ನಿವೇಶ, (ಜ್ಞಾನಾರ್ಜನೆ ಸನ್ನಿವೇಶ)	Learning situation
ಕಲಿಸುವ ವಿಷಯ	Teaching subject
ಕಲಿಸುವ ಸಾಧನ	Teaching aid
ಕ್ರಮಬದ್ಧ	Sequence
ಕಾಕತಾಲೀಯ ನ್ಯಾಯ	Accident
ಕಾರ್ಯ (ಚಟುವಟಿಕೆ)	Action
ಕಾರ್ಯಕ್ಷಮತೆ	Efficiency
ಕಾರ್ಯಾಚರಣೆ	Doing experience
ಕ್ರಿಯಾಶೀಲ (ಕ್ರಿಯಾತ್ಮಕ)	Functional
ಕೃಷಿ ಅಭಿವೃದ್ಧಿ ಕಾರ್ಯಗಳು	Agricultural Development activities
ಕೃಷಿ ಮುಖಂಡತ್ವ	Agricultural leadership
ಕೃಷಿ ವಿಜ್ಞಾನ	Agricultural science
ಕೃಷಿ ವಿಸ್ತರಣೆ	Agricultural extension
ಕೃಷಿ ವಿಸ್ತರಣ ಶಿಕ್ಷಣ	Agricultural extension education
ಕೃಷಿ ಸುದ್ದಿ ಲಘುಪ್ರಕಟಣೆ	Agricultural news bulletin
ಕುಶಲತೆ (ಕೌಶಲ್ಯ, ಚತುರತೆ)	Skill
ಕುಶಲತೆಯಲ್ಲಿ ಬದಲಾವಣೆ	Change in skill

ಗ

ಗಮನ (ಗಮನಸೆಳೆಯುವಿಕೆ)	Attention
ಗ್ರಾಮಮಟ್ಟ	Village level
ಗ್ರಾಮೀಣ ಉದ್ಯೋಗ	Village industry
ಗುಣಧರ್ಮಗಳು	Characteristics
ಗುರಿ	Goal
ಗುಂಪುಪದ್ಧತಿಗಳು	Group methods
ಗೃಹವಿಜ್ಞಾನ	Home science
ಗ್ರಾಮೀಣಯುವಕ	Village youth

ಘ

ಘನಮಾದರಿ	Solid model

ಚ

ಚಟುವಟಿಕೆ (ಕಾರ್ಯ)	Action
ಚತುರತೆ (ಕುಶಲತೆ)	Skill
ಚತುರತೆಯಲ್ಲಿ ಬದಲಾವಣೆ, (ಕುಶಲತೆಯಲ್ಲಿ ಬದಲಾವಣೆ)	Change in skill
ಚರ್ವಿತಚರ್ವಣ	Full discussion
ಚಲನಚಿತ್ರ	Films (Movies, motion picture)
ಚಲನಚಿತ್ರಪಟ್ಟಿ	Film strip
ಚಲನೆ	Motion
ಚಕ್ಷು	Eye
ಚಕ್ಷುಸಾಧನ	Visual aid
ಚಾಕ್ಷುಕ	Visual seeing
ಚಿತ್ರೀಕರಣ	Film shooting
ಚಿತ್ರಾಲೇಖನ	Pictorial graph
ಚುಂಬಕಹಲಗೆ	Magnetic board

ಛ

ಛಾಯಾಚಿತ್ರ	Photograph

ಜ

ಜಂಗುಳಿ	Crowd
ಜಾಗೃತಿ ಹಂತ (ಅರಿವು ಹಂತ)	Awareness stage
ಜೋಡಣೆ	Combination
ಜ್ಞಾನ	Knowledge
ಜ್ಞಾನಾರ್ಜನೆಯ ಸನ್ನಿವೇಶ (ಕಲಿಯುವ ಸನ್ನಿವೇಶ)	Learning situation

ಟ

ಟೆಲಿವಿಷನ್	Television

ತ

ತಜ್ಞ	Specialist
ತಡಾನುಸರಣೆ (ಅತಿ ವಿಳಂಬ ಅಂಗೀಕಾರಿ)	Laggard

ತತ್ಪರತೆ	Devotion
ತಾಕು (ನಿವೇಶನ, ಪ್ಲಾಟು)	Site
ತಾಂತ್ರಿಕ ಭೇಟ್ಟಿ	Technical visit
ತಿಳಿವಳಿಕೆಯಲ್ಲಿ ಬದಲಾವಣೆ	Change in knowledge
ತುಲನಾತ್ಮಕ	Comparative
ತೃಪ್ತಿ (ಸಂತೃಪ್ತಿ)	Satisfaction

ದ

ದಕ್ಷತೆ	Competency
ದಾಖಲೆ	Record
ದೂರವಾಣಿ ಕರೆ	Telephone call

ಧ

ಧ್ವನಿ	Sound
ಧ್ವನಿಸಂಯೋಜಿತ	Talky
ನಕಾಶೆ (ನಕ್ಷೆ)	Map
ನಡೆವಳಿಕೆ	Behaviour
ನಟನಾತ್ಮಕ ಭಾಗವಹಿಸುವಿಕೆ (ನಾಟಕೀಯತೆ)	Dramatic participation
ನಿರ್ಬಂಧರಹಿತ (ಅನೌಪಚಾರಿಕ)	Informal
ನಿರಾಕರಣೆ	Rejection
ನಿರ್ವಹಣೆ	Conduction
ನ್ಯೂನತೆ	Disadvantage
ನೇತ್ರೇಂದ್ರಿಯ (ಚಕ್ಷೇಂದ್ರಿಯ, ಕಣ್ಣು)	Visual sense
ನೇತ್ರೇಂದ್ರಿಯ (ಚಕ್ಷು)ಸಾಧನ	Visual aid
ನೇರ ಉದ್ದೇಶಾನುಭವ	Direct purposeful experience
ನೈಜವಸ್ತು	Specimen

ಪ

ಪಠ್ಯಕ್ರಮ	Syllabus
ಪದ್ಧತಿ ಪ್ರಾತ್ಯಕ್ಷಿಕೆ	Method demonstration
ಪರದೆ (ಪಟಲ)	Curtain
ಪರಿಚಯಾತ್ಮಕ ಭೆಟ್ಟಿ	Get acquainting visit
ಪರಿಣತಿ	Expertness
ಪರಿಣಾಮಕಾರಿ	Effective
ಪರಿಣಾಮ ಪ್ರಾತ್ಯಕ್ಷಿಕೆ	Result demonstration
ಪರಿಶೀಲನಾ ಹಂತ (ಮೌಲ್ಯಮಾಪನ ಹಂತ)	Evaluation stage
ಪಶುಪಾಲನೆ	Animal husbandary

ಪ್ರತಿಕ್ರಿಯೆ	Reaction
ಪಾರದರ್ಶಕ	Transperant
ಪಾರದರ್ಶಕ ಚಿತ್ರ	Transperant slide
ಪೂರ್ವಯೋಜಿತ	Preplanned
ಪ್ರಕಟಣೆ	*Publication*
ಪ್ರಕಟಣೆ ಹಲಗೆ	Bulletin board
ಪ್ರಜಾಸತ್ತಾತ್ಮಕ	Democratic
ಪ್ರತ್ಯಕ್ಷ ಶಿಕ್ಷಣ	Direct education
ಪ್ರತಿನಿಧಿ	Representative
ಪ್ರಕ್ಷೇಪಕ	Projector
ಪ್ರಕ್ಷೇಪಣ	Projected
ಪ್ರಯೋಗಿಕ	Practical
ಪ್ರಯೋಗಾಚರಣೆ ಹಂತ	Trial stage
ಪ್ರಯೋಜನ-ಲಾಭ	Advantage
ಪ್ರವಹಿಸುವ ರೇಖಾಪಟ	Flow chart
ಪ್ರಾತ್ಯಕ್ಷಿಕೆ	Demonstration
ಪ್ರಾತ್ಯಕ್ಷಿಕೆಗಾರ	Demonstrator
ಫ್ಲಾನಲ್ ಗ್ರಾಫ್	Flannal graph
ಫ್ಲಿಫ್ ರೇಖಾಪಟ	Flip chart
ಪ್ರೌಢಶಿಕ್ಷಣ	*Adult education*

ಬ

ಬಟ್ಟೆ ತಗಲು ಚಿತ್ರಪಟ (ಉರುಟು ಬಟ್ಟೆ ಚಿತ್ರಾಲೇಖನ)	Flannal graph
ಬದಲಾವಣೆ	Change
ಬಹುಮುಖಿ ಶಿಕ್ಷಣ	Horizontal education
ಬಾನುಲಿ	Radio
ಬಾನುಲಿ ಕಾರ್ಯಕ್ರಮ	Radio programme
ಬಾನುಲಿ ಕೇಂದ್ರ, ಆಕಾಶವಾಣಿ	Radio station
ಬಾನುಲಿ ಪ್ರಸಾರ (ಬಿತ್ತರಣೆ)	Radio broadcast
ಭಿತ್ತಿಪತ್ರ	Poster
ಭೆಟ್ಟಿ	Visit
ಬೋಧಕ ವಿಷಯ	Teaching subject
ಭೌತಿಕಪರಿಸರ	Physical environment

ಮ

ಮಡಿಕೆ ಹಸ್ತಪತ್ರಿಕೆ	Folder
ಮಟ್ಟ	Standard

ಮನವೊಪ್ಪಿಸುವಿಕೆ	Convince, Conviction
ಮನೋಭಾವನೆ (ನಡೆವಳಿಕೆ)	Behaviour
ಮನೋಭಿಪ್ರಾಯ	Aptitude
ಮಾದರಿ	Model
ಮಾಧ್ಯಮ	Media
ಮಾಡುತ್ತಲೇ ಕಲಿಯುವ	Learning by doing
ಮಿಂಚುಪಟ	Flash card
ಮೂಲತತ್ವ	Fundamental principle
ಮೌಖಿಕ	Spoken
ಮೌಲ್ಯ	Value
ಮೌಲ್ಯಮಾಪನ	Evaluation
ಮೌಲ್ಯಮಾಪನ ಹಂತ	Evaluation stage

ಯ

ಯೋಜನೆ	Planning

ರ

ರಾಷ್ಟ್ರೀಯ ಪ್ರಾತ್ಯಕ್ಷಿಕೆ	National demonstration
ರಾಷ್ಟ್ರೀಯ ವಿಸ್ತರಣ ಸೇವೆ	National extension service
ರೂಪಗಳಿಗನುಸಾರ	According to form
ರೇಖಾ ಚಿತ್ರಲೇಖನ	Line graph
ರೇಖಾಪಟ	Chart
ರೈತ	Farmer
ರೈತಮಹಿಳೆ	Farm woman, home maker

ಲ

ಲಘುಚಿತ್ರಪಟ್ಟಿ	Film strip
ಲಘು ಪ್ರಕಟಣೆ	Bulletin
ಲಿಖಿತ	Written
ಲೋಕೋಪಯೋಗಿ ಇಲಾಖೆ	Public works department

ವ

ವರ್ಗೀಕರಣ	Classification
ವರ್ತನೆ	Behaviour
ವರ್ತಮಾನಪತ್ರ	Newspaper
ವ್ಯಂಗ್ಯಚಿತ್ರ	Cartoon

ವ್ಯತ್ಯಾಸ	Difference
ವಸ್ತುಪ್ರದರ್ಶನ	*Exhibition*
ವಸ್ತುಸಂಗ್ರಹಾಲಯ	Museum
ವಿಚಾರವಿನಿಮಯ	Exchange of ideas
ವಿಚಾರವಿನಿಮಯಸಭೆ, ಚರ್ಚಾಸಭೆ	Discussion meeting
ವಿಮರ್ಶೆ	Criticism
ವಿವಾದಾತ್ಮಕ	Controversial
ವಿವಿಧೋದ್ದೇಶ ಕಾರ್ಯಕರ್ತ	Multipurpose worker
ವಿಶೇಷ ಸಂದರ್ಭ	Special occasion
ವಿಷಯ	Subject matter
ವಿರೋಧಾಭಿಪ್ರಾಯ	Anti-openion
ವಿಶೇಷ ಸುದ್ದಿಲೇಖನ	Special news
ವಿಷಯಬಿತ್ತರಣೆ (ಸಂಪರ್ಕ)	Communication
ವಿಶಿಷ್ಟಲೇಖನ	Special article
ವಿಸ್ತರಣಾಧಿಕಾರಿ	Extension officer
ವಿಸ್ತರಣ ಕಾರ್ಯಕರ್ತ	Extension worker
ವಿಸ್ತರಣ ಶಿಕ್ಷಕ	Extension teacher
ವಿಳಂಬ ಅಂಗೀಕಾರಿ (ತಡಾನುಸರಣೆಗಾರ)	Late adopter
ವೀಕ್ಷಕ ಪಟಲ	View curtain
ವೀಕ್ಷಣಾನುಭವ	Visual experience
ವೃಕ್ಷ ರೇಖಾಪಟ	Tree chart
ವೃತ್ತ ಚಿತ್ರಾಲೇಖನ (ಪೈ ಚಿತ್ರಾಲೇಖನ)	Pie graph
ವೇಳಾ ರೇಖಾಪಟ	Time chart
ವೈಯಕ್ತಿಕ ಪತ್ರ	Personal letter
ವೈಯಕ್ತಿಕ ಭೇಟ್ಟಿ	Individual contact

ಶ

ಶ್ರವಣ ಚಕ್ಷು	Audio-visual
ಶ್ರವಣ ಚಕ್ಷುಸಾಧನ	Audio-visual aid
ಶ್ರವಣೇಂದ್ರಿಯ (ಚಕ್ಷೇಂದ್ರಿಯ, ಕಿವಿ)	Hearing sense (Ear)
ಶಿಕ್ಷಕ	Teacher
ಶಿಕ್ಷಣ	Education
ಶಿಕ್ಷಣ ಪದ್ಧತಿ	Teaching method
ಶಿಕ್ಷಣ ವಿಷಯ	Teaching subject
ಶಿಕ್ಷಣಾರ್ಥಿ	Learner
ಶೈಕ್ಷಣಿಕ	Educational
ಶೈಕ್ಷಣಿಕ ಪ್ರವಾಸ	Educational tour
ಶ್ರೆಯೋಭಿವೃದ್ಧಿ	Success attainment

ಸ

ಸಚಿತ್ರ ಚಿತ್ರಾಲೇಖನ	Pictorial graph
ಸಭ್ಯ	Gentle
ಸಂಯೋಜನೆ (ಜೋಡಣೆ)	Combination
ಸಂಘಟನಾ ಭೆಟ್ಟಿ	Organizational visit
ಸಂದರ್ಭೋಚಿತ	Suited to occasion
ಸಂತೃಪ್ತಿ	Satisfaction
ಸ್ಥಳೀಯ ಮುಖಂಡ	Local leader
ಸ್ಥಳೀಯ ಸಮಸ್ಯೆ	Local problems
ಸಮಸ್ಯೆ	Problems
ಸಮಸ್ಯೆ ಪರಿಹಾರ ಭೆಟ್ಟಿ	Problem solving visit
ಸಮಯನುಂಗುವ	Time consuming
ಸಮುದಾಯ ಅಭಿವೃದ್ಧಿ (ಸಮಾಜ ವಿಕಾಸ)	Community development
ಸ್ವರೂಪ	Quality
ಸರಳ	Simple
ಸಮಾಜಶಿಕ್ಷಣ	Social education
ಸಹಕಾರ	Cooperation
ಸಾಮರ್ಥ್ಯ	Capacity
ಸ್ವಯಂಪ್ರೇರಣೆ	Voluntary
ಸಾಧನ	Aid
ಸಾಮೂಹಿಕ ಪದ್ಧತಿ	Mass method
ಸಾಮಾನ್ಯ ಸಭೆ	General meeting
ಸಾಂಪ್ರದಾಯಿಕ	Traditional
ಸಾಂಪ್ರದಾಯಿಕ ಶಿಕ್ಷಣ	Traditional education
ಸಾಂಕೇತಿಕ ಅನುಭವ	Symbolic experience
ಸ್ಥಿರಚಿತ್ರ	Still picture
ಸೂಕ್ಷ್ಮ ವಿವರಣೆ	Minute details
ಸುತ್ತೋಲೆ	Circular letter
ಸುಧಾರಿಸಿದ ಕೃಷಿ ಪದ್ಧತಿ	Improved farm practice
ಸ್ಥೂಲಸ್ವರೂಪ	Broad nature
ಸ್ಫುರಣ ಚಿತ್ರ (ಮಿಂಚುಪಟ)	Flash card

ಹ

ಹಂತ	Stage
ಹಸ್ತಪತ್ರಿಕೆ	Leaf-let
ಹಿನ್ನೆಲೆ	Background
ಹೊಲಮನೆ ಭೇಟ್ಟಿ	Farm & home visit

ಕ್ಷ

ಕ್ಷೇತ್ರಾಧಿಕಾರಿ	Block development officer
ಕ್ಷೇತ್ರಸಂದರ್ಶನ	Field visit (Field trip)
ಕ್ಷೇತ್ರೋತ್ಸವ	Field day

ಆಧಾರ ಗ್ರಂಥಗಳು

Advireddy, A., *Extension Education.* Bapatla: Laxmi Press, 1966.

Bradfield, D. J., *Guide to Extension Training.* Rome: F.A.O., 1966.

Dwarakinath, R., Srinivasamurthy, J. and Hanumappa, P., *Some thoughts on Agricultural Extension Methods and Community Development Programme in India.* Mysore-Bangalore: Department of Agriculture, 1959.

Dahama, O. P., *Extension and Rural Welfare.* Agra: Ramprasad & Sons, 1966.

Edgar Dale, *Audio-Visual Methods in Teaching.* New York: Holt, Rinehart and Winston, 1961.

Fay, I. G., *Notes on Extension in Agriculture.* Bombay: Asia Publishing House, 1962.

Haas, K. B. and Packer, H. Q., *Preparation and Use of Audio Visual Aids.* New Delhi: Prentice Hall of India (Pvt.) Ltd., 1964.

Kelsey, L. D. and Hearne, C. C., *Co-operative Extension Work.* New York: Comstock Publishing Associates, 1963.

Molen, H.V.D., '*Individual Methods in Agricultural Extension*' in *Methods of Agricultural Extension.* The Netherlands, 1953.

Penders, T.M.A., '*Methods and Programme Planning*' *in Rural Extension.* The Netherlands: Veenman and Zonen, 1956.

Richard Hukanssan, '*Mass methods of Agricultural Extension*' in *Methods of Agricultural Extension.* The Netherlands, 1953.

Rogers, E. M., *Diffusion of Innovations.* New York: The Free Press, 1962.

Sanders, H. C., *The Co-operative Extension Service.* New Jersey: Prentice Hall Inc. 1966.

Singh, K. N., Rao C.S.S. and Sahay, B. N., *Research in Extension Education for accelerated Development Process.* New Delhi: Indian Society of Extension Education, 1970.

Wilson, M. C. and Gallup, G., *Extension Teaching Methods and Other Factors that Influence the Adoption of Agricultural and Home Economics Practices.* Washington: U.S.D.A., 1965.

—*A Guide to Community Development.* New Delhi: Ministry of Food and Agriculture, 1961.

—*Extension Education in Community Development.* New Delhi: Ministry of Food and Agriculture, 1961.

ಕೃಷಿ ವಿಶ್ವವಿದ್ಯಾನಿಲಯದ ಪ್ರಕಟಣೆಗಳು

1.	ಸುಭಿಕ್ಷತೆಗೆ ತೆರೆದ ಬಾಗಿಲು	(ಪ್ರತಿಗಳು ತೀರಿವೆ)	ರೂ.	1–50
2.	ಪೀಡೆ ನಿರ್ವಹಣೆ	(,,)		3–75
3.	ಕೀಟಗಳ ವಿಂಗಡನೆ			12–00
4.	ಕೀಟ ಹತ್ತೋಟಿ			10–00
5.	ಸಾಕುಪ್ರಾಣಿಗಳ ಶರೀರಕ್ರಿಯಾಶಾಸ್ತ್ರ (ಭಾಗ I)			5–00
6.	ತರಕಾರಿ ಬೇಸಾಯ	(ಪ್ರತಿಗಳು ತೀರಿವೆ)		10–00
7.	ಕೃಷಿ ರಸಾಯನ ಶಾಸ್ತ್ರ ಶಬ್ದಾರ್ಥ ನಿರೂಪಣಾವಳಿ		ಸಾದಾ ಪ್ರತಿ	3–75
			ಕ್ಯಾಲಿಕೊ ಪ್ರತಿ	5–00
8.	ಮಣ್ಣು ಮತ್ತು ನೀರುಸಂರಕ್ಷಣಾ ಕೈಪಿಡಿ		ಸಾದಾ ಪ್ರತಿ	12–00
			ಕ್ಯಾಲಿಕೊ ಪ್ರತಿ	15–00
9.	ರೈತರ ನೆಚ್ಚುಮೆಚ್ಚಿನ ಮರಗಳು		ಸಾದಾ ಪ್ರತಿ	12–00
			ಕ್ಯಾಲಿಕೊ ಪ್ರತಿ	15–00
10.	ಸಾಕುಪ್ರಾಣಿಗಳ ಶರೀರಕ್ರಿಯಾಶಾಸ್ತ್ರ (ಭಾಗ II)		ಸಾದಾ ಪ್ರತಿ	9–00
			ಕ್ಯಾಲಿಕೊ ಪ್ರತಿ	12–00
11.	ಮಣ್ಣು ಮತ್ತು ನೀರು ನಿರ್ವಹಣೆ		ಸಾದಾ ಪ್ರತಿ	12–00
			ಕ್ಯಾಲಿಕೊ ಪ್ರತಿ	15–00
12.	ಮಣ್ಣು		ಸಾದಾ ಪ್ರತಿ	9–00
			ಕ್ಯಾಲಿಕೊ ಪ್ರತಿ	12–00
13.	ಕೃಷಿ ಸಹಕಾರ		ಸಾದಾ ಪ್ರತಿ	5–00
			ಕ್ಯಾಲಿಕೊ ಪ್ರತಿ	8–00
14.	ಕಳೆಗಳು ಮತ್ತು ಕಳೆಗಳ ನಿಯಂತ್ರಣ		ಸಾದಾ ಪ್ರತಿ	12–00
			ಕ್ಯಾಲಿಕೊ ಪ್ರತಿ	15–00
15.	ಧಾನ್ಯ ದಾಸ್ತಾನು ತತ್ವ ಮತ್ತು ಪದ್ಧತಿಗಳು		ಸಾದಾ ಪ್ರತಿ	6–00
			ಕ್ಯಾಲಿಕೊ ಪ್ರತಿ	9–00
16.	ಗೋಸಂಪತ್ತು		ಸಾದಾ ಪ್ರತಿ	5–00
			ಕ್ಯಾಲಿಕೊ ಪ್ರತಿ	8–00
17.	ಪಶುವೈದ್ಯಕೀಯ ವಿಜ್ಞಾನ		ಸಾದಾ ಪ್ರತಿ	6–00
			ಕ್ಯಾಲಿಕೊ ಪ್ರತಿ	9–00
18.	ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆ		ಸಾದಾ ಪ್ರತಿ	14–00
			ಕ್ಯಾಲಿಕೊ ಪ್ರತಿ	17–00
19.	ಸಾಕುಪ್ರಾಣಿಗಳ ಶರೀರಕ್ರಿಯಾಶಾಸ್ತ್ರ (ಭಾಗ III)		ಸಾದಾ ಪ್ರತಿ	8–00
			ಕ್ಯಾಲಿಕೊ ಪ್ರತಿ	12–00